ಸಂಪುಟ: ೦೬/ ಸಂಚಿಕೆ: ೨೬೫/ಗುರುವಾರ ದಿನಾಂಕ : ೧೯-೧೨-೨೦೨೪/ ಪುಟ: ೬/ ಬೆಲೆ ೨-೦೦

ಸತ್ಯಕ್ಕೆ ಕಿರಣ ಸುಳ್ಳಿಗೆ ಕಿಡಿ

ಕಛೇರಿ ದೂರವಾಣಿ ಸಂಖ್ಯೆ 0831-3564491

# ಬೆಳಗಿನ ಸೂರ್ಯೋದಯ

ಕನ್ನಡ ಪ್ರಾದೇಶಿಕ ದಿನಪತ್ರಿಕೆ

ಬೆಳಗಾವಿ ■ ಧಾರವಾಡ ■ ಬಾಗಲಕೋಟ ■ ವಿಜಯಪುರ ■ ಗದಗ ■ ಕೊಪ್ಪಳ ■ ಹಾವೇರಿ ■ ಕಾರವಾರ

ಸಂಪಾದಕರು : ಗುರುರಾಜ ಈರಪ್ಪಾ. ಕದಮ, Editor : GURURAJ IRAPPA. KADAM Cell : 9620099959

Volume : 06/ ISSUE : 265/ THURSDAY Date : 19-12-2024/ RNI No. KARKAN/2019/77640/ Postal Reg No. PMG/KA/NK/BM/135/21-24 / POST AT Vantamury Colony Post Office / email : belaginasuryodaya@gmail.com / Page : 6 / Rs. 2.00

## ಯಾವುದೇ ಕಾರಣಕ್ಕೂ ಗ್ಯಾರಂಟಿಗಳನ್ನು ನಿಲ್ಲಿಸುವುದಿಲ್ಲ: ಮುಖ್ಯಮಂತ್ರಿ




ಬೆಳಗಾವಿ: "ಯಾವುದೇ ಕಾರಣಕ್ಕೂ ಗ್ಯಾರಂಟಿಗಳನ್ನು ನಿಲ್ಲಿಸುವುದಿಲ್ಲ" ಎಂದು ಸಿಎಂ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ.

ಇಂದು ಸುವರ್ಣಸೌಧಕ್ಕೆ ಆಗಮಿಸಿದ್ದ ಗೃಹಲಕ್ಷ್ಮೀ ಯೋಜನೆಯ ಫಲಾನುಭವಿಗಳನ್ನು ಭೇಟಿಯಾಗಿ ಮಾತನಾಡಿದ ಅವರು, "ಗ್ಯಾರಂಟಿಗಳಿಂದ ಬಡವರು, ಮಧ್ಯಮ ಸೇರಿದಂತೆ ಎಲ್ಲಾ ವರ್ಗದ ಜನರಿಗೆ ಅನುಕೂಲ ಆಗ್ತಿದೆ. ಗ್ಯಾರಂಟಿಗಳ ಅನುಕೂಲ ಪಡೆದ ಮಹಿಳೆಯರು ಇವತ್ತು ನನ್ನನ್ನು ಭೇಟಿಯಾಗಿದ್ದಾರೆ. ಮಹಿಳೆಯರಿಗೆ ತುಂಬಾ ಅನುಕೂಲ ಆಗಿದೆ" ಎಂದರು.

ವಕ್ಫ್ ವಿರುದ್ಧ ಬಿಜೆಪಿ ಹೋರಾಟದ ವಿಚಾರವಾಗಿ ಮಾತನಾಡಿ, "ಪ್ರಜಾಪ್ರಭುತ್ವದಲ್ಲಿ ಹೋರಾಟ ಮಾಡಲು ಅವಕಾಶವಿದೆ. ಆದ-'ರೆ ದುರುದ್ದೇಶದಿಂದ ಹೋರಾಟ ಮಾಡಬಾರದು. ನಮ್ಮ ತಪ್ಪುಗಳಿದ್ರೆ ವಿಪಕ್ಷದವರು ಚರ್ಚಿಸಲಿ. ಅಭಿವೃದ್ಧಿ ವಿಚಾರಗಳ ಬಗ್ಗೆ ಚರ್ಚೆ ಮಾಡಲಿ. ಎಐಸಿಸಿ ಅಧಿವೇಶನ ಬೆಳಗಾವಿಯಲ್ಲಿ ನಡೆಯುತ್ತೆ. ಅಡ್ಡಿಪಡಿಸೋಕೆ ಬಂದ್ರೆ ಕಾನೂನು ಕ್ರಮ ಕೈಗೊಳ್ತೀವಿ. ಯಾರೇ ಅಡ್ಡಿಪಡಿಸಿದ್ರೂ ಕಾನೂನು ಕ್ರಮ ಕೈಗೊಳ್ಳುತ್ತೇವೆ" ಎಂದು ಎಚ್ಚರಿಕೆ ನೀಡಿದರು.

ವಕ್ಫ್ ಪ್ರಕರಣವನ್ನು ಸಿಬಿಐಗೆ ವಹಿಸಲು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಸವಾಲು ಹಾಕಿರುವ ವಿಚಾರವಾಗಿ ಪ್ರತಿಕ್ರಿಯಿಸಿ, "ಬಿಜೆಪಿ ಕಾಲದಲ್ಲಿ ಒಂದೇ ಒಂದು ಪ್ರಕರಣ ಸಿಬಿಐಗೆ ಕೊಟ್ಟರಾ?. ಯಾವ ನೈತಿಕತೆ ಇದೆ ನಮ್ಮನ್ನು ಪ್ರಶ್ನಿಸಲು?. ಬಿಜೆಪಿಯವರು ಅಪಪ್ರಚಾರ ಮಾಡ್ತಾರೆ" ಎಂದು ತಿರುಗೇಟು ಕೊಟ್ಟರು. ಇದಕ್ಕೂ ಮುನ್ನ ಗೃಹಲಕ್ಷ್ಮೀ ಯೋಜನೆಯ ಫಲಾನುಭವಿಗಳು ಸುವರ್ಣಸೌಧದಲ್ಲಿ ಸಿಎಂ ಅವರನ್ನು ಭೇಟಿ ಮಾಡಿದರು. ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ನೇತೃತ್ವದಲ್ಲಿ ಭೇಟಿ ಮಾಡಿದ ಅವರು, ಸಿಎಂಗೆ ಕೃತಜ್ಞತೆ ಸಲ್ಲಿಸಿದರು. ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಹೆಚ್.ಎಂ.ರೇವಣ್ಣ, ಶಾಸಕ ವಿನಯ್ ಕುಲಕರ್ಣಿ ಉಪಸ್ಥಿತರಿದ್ದರು.

## ಪ್ರತಿಭಾನ್ವೇಷಣೆ ಪ್ರತಿಭೆ ಗುರುತಿಸಲು ಸಹಕಾರಿ: ಸತೀಶ ಜಾರಕಿಹೊಳಿ

ಬೆಳಗಾವಿ; ಪ್ರತಿಭಾನ್ವೇಷಣೆ ಕಾರ್ಯಕ್ರಮದ ಮೂಲಕ ಮಕ್ಕಳಲ್ಲಿನ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಕಾರ್ಯಕ್ರಮ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವರಾದ ಸತೀಶ ಜಾರಕಿಹೊಳಿ ಹೇಳಿದರು.

ಬೆಳಗಾವಿ ಸುವರ್ಣ ವಿಧಾನ ಸೌಧದಲ್ಲಿ ಬುಧವಾರದಂದು ಜರುಗಿದ ಪ್ರತಿಭಾನ್ವೇಷಣೆ ಪರೀಕ್ಷೆ-2024 ಅಭಿನಂದನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಪ್ರತಿಭಾನ್ವೇಷಣೆ ಕಾರ್ಯಕ್ರಮ ಒಳ್ಳೆಯ ಕಾರ್ಯಕ್ರಮವಾಗಿದೆ. ಮಕ್ಕಳಲ್ಲಿ ಆತ್ಮ ವಿಶ್ವಾಸ ಹೆಚ್ಚಿಸುವ ಇಂತಹ ಕಾರ್ಯಕ್ರಮಗಳನ್ನು ಪ್ರತಿವರ್ಷ ಆಯೋಜಿಸಬೇಕು. ಈ ಕಾರ್ಯಕ್ರಮದ ಮೂಲಕ ಗ್ರಾಮೀಣ ಹಾಗೂ ಬಡ ಮಕ್ಕಳನ್ನು ಗುರುತಿಸಿ ಅವರ ಪ್ರತಿಭೆಯನ್ನು ಗುರುತಿಸಿ ಪೋಷಿಸುವ ಕಾರ್ಯವಾಗಬೇಕು ಎಂದರು.

ಪ್ರತಿಭಾನ್ವೇಷಣೆ ಕಾರ್ಯಕ್ರಮದ ಮೂಲಕ ಗ್ರಾಮೀಣ ಭಾಗದ ಮಕ್ಕಳು ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ ಪರೀಕ್ಷೆಗಳಲ್ಲಿ ಹೆಚ್ಚಿನ ಅಂಕ ಗಳಿಸಿ ಉನ್ನತ ಹುದ್ದೆಗಳನ್ನು ಅಲಂಕರಿಸುವಂತಾಗಬೇಕು. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಮಕ್ಕಳು ಉನ್ನತ ವ್ಯಾಸಂಗ, ಉನ್ನತ ಹುದ್ದೆಗಾಗಿ ಅನೇಕ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಬೇಕಾಗುತ್ತದೆ. ಇಂತಹ ಕಾರ್ಯಕ್ರಮಗಳನ್ನು ನಿರಂತರವಾಗಿ ಜರುಗಿಸುವುದರ ಮೂಲಕ ಗ್ರಾಮೀಣ ಹಾಗೂ ಸರಕಾರಿ ಶಾಲಾ ಮಕ್ಕಳು ಆತ್ಮವಿಶ್ವಾಸದಿಂದ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಿ ಉನ್ನತ ಸ್ಥಾನ ಮಾನಗಳನ್ನು ಪಡೆಯುವಂತಾಗಲಿ ಎಂದು ಜಿಲ್ಲಾ ಉಸ್ತುವಾರಿ ಸಚಿವರಾದ ಸತೀಶ ಜಾರಕಿಹೊಳಿ ಅವರು ಹೇಳಿದರು.



ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ ಶಿಂಧೆ ಅವರು ಮಾತನಾಡಿ ಸರಕಾರಿ ಶಾಲಾ ಮಕ್ಕಳಲ್ಲಿನ ಪ್ರತಿಭೆಗಳನ್ನು ಗುರುತಿಸುವ ನಿಟ್ಟಿನಲ್ಲಿ ಪ್ರತಿಭಾನ್ವೇಷಣೆ ಪರೀಕ್ಷೆಗಳನ್ನು ಆಯೋಜಿಸಿ ಶಾಲಾ ಮಟ್ಟದಲ್ಲಿಯೇ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಹಾಗೂ ಮಕ್ಕಳಲ್ಲಿನ ಪ್ರತಿಭೆಗಳನ್ನು ಗುರುತಿಸುವ ಉದ್ದೇಶದೊಂದಿಗೆ ಇಂತಹ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ ಎಂದು ತಿಳಿಸಿದರು.

ಬೆಳಗಾವಿಯ ಶಹಾಪುರ ಸರಕಾರಿ ಬಾಲಕಿಯರ ಪ್ರೌಢ ಶಾಲಾ ವಿದ್ಯಾರ್ಥಿನಿ ಚೈತ್ರಾ ಗಡಲಿಂಗನವರ ತಮ್ಮ ಅನಿಸಿಕೆ ಹಂಚಿಕೊಂಡು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಯಾವ ರೀತಿ ಎದುರಿಸಬೇಕು ಎಂಬುದರ ಕುರಿತು ಪ್ರತಿಭಾನ್ವೇಷಣೆ ಪರೀಕ್ಷೆ ಬುನಾದಿಯಾಗಿದೆ. ಈ ಮೂಲಕ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಧೈರ್ಯದಿಂದ ಎದುರಿಸುವ ವಿಶ್ವಾಸ ವ್ಯಕ್ತಿ ಪಡಿಸಿ ಭವಿಷ್ಯದಲ್ಲಿ ಉನ್ನತ ಹುದ್ದೆ ಪಡೆಯುವ ವಿಶ್ವಾಸ ವ್ಯಕ್ತ ಪಡಿಸಿದರು.

ಕಾರ್ಯಕ್ರಮದಲ್ಲಿ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ಪ್ರಕಾಶ ಹುಕ್ಕೇರಿ, ವಿಧಾನ ಪರಿಷತ್ ಸದಸ್ಯರಾದ ಹನುಮಂತ ನಿರಾಣಿ, ಶಿಕ್ಷಣ ಇಲಾಖೆ ಆಯುಕ್ತರಾದ ತ್ರಿಲೋಕ ಚಂದ್ರ, ಪ್ರಶಿಕ್ಷಣಾರ್ಥಿ ಆಯ್.ಎ.ಎಸ್. ಅಧಿಕಾರಿ ದಿನೇಶಕುಮಾರ ಮೀನಾ, ಶಿಕ್ಷಣ ಇಲಾಖೆ ಉಪನಿರ್ದೇಶಕರುಗಳು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ವಿದ್ಯಾರ್ಥಿಗಳು ಹಾಜರಿದ್ದರು.

### ದ್ರಾಕ್ಷಿ ಬೆಳಗಾರರ ಎಲ್ಲ ಸಮಸ್ಯೆಗಳ ಅತಿ ಶೀಘ್ರದಲ್ಲಿ ಅಧಿಕಾರಿಗಳ ಸಭೆ ನಡೆಸಿ ಪರಿಹಾರ ಕಂಡುಕೊಳ್ಳುವ ಭರವಸೆ



ಮೂಡಲಗಿ : ದೇಶದ ದ್ರಾಕ್ಷಿ ಬೆಳೆಗಾರರ ಸಮಸ್ಯೆಗಳ ಕು-ರಿತು ನವದೆಹಲಿಯಲ್ಲಿ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರನ್ನು ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ಅವರು ದ್ರಾಕ್ಷಿ ಬೆಳಗಾರರ ನಿಯೋಗದೊಂದಿಗೆ ಕೃಷಿ ಭವನದಲ್ಲಿ ಭೇಟಿಯಾಗಿ ಹಲವಾರು ವಿಷಯಗಳ ಕುರಿತು ಚರ್ಚಿಸಿದರು.

ಬರುವ ದಿನಗಳಲ್ಲಿ ದ್ರಾಕ್ಷಿ ಬೆಳಗಾರರ ಎಲ್ಲ ಸಮಸ್ಯೆಗಳ ನಿವಾರಣೆಗಾಗಿ ಅತಿ ಶೀಘ್ರದಲ್ಲಿ ಅಧಿಕಾರಿಗಳ ಸಭೆ ನಡೆಸಿ ಪರಿಹಾರ ಕಂಡುಕೊಳ್ಳುವ ಭರವಸೆಯನ್ನು ಸಚಿವರು ನೀಡಿದ್ದಾರೆ ಎಂದು ಸಂಸದ ಈರಣ್ಣ ಕಡಾಡಿ ತಿಳಿಸಿದ್ದಾರೆ.

ಈ ನಿಯೋಗದಲ್ಲಿ ಅಥಣಿ ಮಾಜಿ ಶಾಸಕ ಶಹಜಹಾನ್ ಡೊಂಗರಗಾಂವ, ಚಿಕ್ಕೋಡಿ ಜಿಲ್ಲಾ ರೈತ ಮೋರ್ಚಾ ಮಾಜಿ ಜಿಲ್ಲಾಧ್ಯಕ್ಷ ಸಿದ್ದಪ್ಪ ಮುದಕನ್ನವರ್, ದ್ರಾಕ್ಷಿ ಬೆಳಗಾರರಾದ ಅಪ್ಪಾಸಾಬ್ ತೇರದಾಳ, ಶ್ರೀಕಾಂತ್ ಮಕಾನಿ, ಸುಭಾಸ ಮೋರೆ, ಸುರೇಶ ಅವಟಿ, ಪ್ರಕಾಶ ಪಾಟೀಲ್ ಉಪಸ್ಥಿತರಿದ್ದರು.

## ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲನಿ ರಜನೀಶ ಅವರಿಂದ ಇಕೋಫಿಕ್ಸ ತಂತ್ರಜ್ಞಾನ ವೀಕ್ಷಣೆ

ಬೆಳಗಾವಿ : ಸರ್ಕಾರದ ಮುಖ್ಯಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಅವರು ಬುಧವಾರ (ಡಿ.18) ನಗರದ ಕುಮಾರಸ್ವಾಮಿ ಬಡಾವಣೆಯ ಹತ್ತಿರ ರಸ್ತೆ ನಿರ್ಮಾಣ, ದುರಸ್ತಿಗೆ ಬಳಸಬಹುದಾದ ಇಕೋಫಿಕ್ಸ್ ಡಾಂಬರೀಕರಣ ಉತ್ಪನ್ನ ಬಳಕೆಯ ಅಣಕು ವೀಕ್ಷಿಸಿದರು.

ಇಕೋಫಿಕ್ಸ್ ಡಾಂಬ-ರೀಕರಣ ಉತ್ಪನ್ನದಲ್ಲಿ ಆಧುನಿಕ ತಂತ್ರಜ್ಞಾನ ಬಳಸಿಕೊಳ್ಳಲಾಗಿದ್ದು, ಮಳೆಗಾಲ, ಬೇಸಿಗೆ ಸೇರಿದಂತೆ ಯಾವುದೇ ಸಂದರ್ಭದಲ್ಲಿಯೂ ಸಹ ಈ ಉತ್ಪನ್ನವನ್ನು ಬಳಕೆ ಮಾಡಬಹುದಾಗಿದೆ. ರಸ್ತೆ ಗುಂಡಿಗಳ (ಪಾಟ್ ಹೋಲ್) ತ್ವರಿತ ದುರಸ್ತಿಗಾಗಿ ಇದು ಅತೀ ಉಪಯುಕ್ತಕಾ-ರಿಯಾಗಿದೆ. ರಸ್ತೆ ದುರಸ್ತಿ, ಹೆದ್ದಾರಿ, ಸೇತುವೆ, ಪ್ಯಾಚ್ ವರ್ಕ್, ತೆಗ್ಗು ಪ್ರದೇಶದ ದುರಸ್ತಿ, ವಾಹನ ನಿಲುಗಡೆ ಸ್ಥಳ ನಿರ್ಮಾಣ ಹಾಗೂ ಇನ್ನಿತರ ರಸ್ತೆ ದುರಸ್ತಿ ಕಾಮಗಾ-ರಿಗಳಿಗೆ ಇಕೋಫಿಕ್ಸ್ ಪ್ರೋಡಕ್ಟ್ ಬಳಸುವುದು ಸೂಕ್ತವಾಗಿದೆ ಎಂದು ಇಕೋಫಿಕ್ಸ್ ಪ್ರತಿನಿಧಿಯೊಬ್ಬರು ವಿವರಿಸಿದರು.



ಈ ಸಂದರ್ಭದಲ್ಲಿ ಮಹಾಪೌರರಾದ ಸವಿತಾ ಕಾಂಬಳೆ, ಲೋಕೋಪಯೋಗಿ ಇಲಾಖೆ ಅಧಿಕಾರಿ ಎಸ್.ಎಸ್ ಸಬರದ, ನಗರ ಸೇವಕರಾದ ಸಂದೀಪ ಜೀರಗ್ಯಾಳ, ಪಾಲಿಕೆ ಅಧಿಕಾರಿ, ಸಿಬ್ಬಂದಿಗಳು ಹಾಜರಿದ್ದರು.

## ಬೆಳಗಾವಿಯಲ್ಲಿ ವಿದ್ಯುತ್ ಮಗ್ಗ ಸೇವಾ ಕೇಂದ್ರ: ಶಂಕುಸ್ಥಾಪನೆ



ಬೆಳಗಾವಿ; ಜಿಲ್ಲೆಯ ಜವಳಿ ಕ್ಷೇತ್ರದ ನೇಕಾರರು ಉನ್ನತ ತರಬೇತಿ ಪಡೆದು ಕೈಗಾರಿಕೆ ಸ್ಥಾಪನೆ ಹಾಗೂ ಹೆಚ್ಚಿನ ಉದ್ಯೋಗಾವಕಾಶ ಪಡೆಯುವ ಉದ್ದೇಶದಿಂದ ಬೆಳಗಾವಿಯಲ್ಲಿ ವಿದ್ಯುತ್ ಮಗ್ಗ ಸೇವಾ ಕೇಂದ್ರವನ್ನು ಆರಂಭಿಸಲಾಗುತ್ತಿದೆ ಎಂದು ಜವಳಿ ಸಚಿವ ಶಿವಾನಂದ ಎಸ್. ಪಾಟೀಲ ಹೇಳಿದರು.

ಬೆಳಗಾವಿಯ ಉದ್ಯಮಭಾಗದಲ್ಲಿ ಬುಧವಾರ ವಿದ್ಯುತ್ ಮಗ್ಗ ಸೇವಾ ಕೇಂದ್ರ ಹಾಗೂ ಕೆಎಸ್‌ಟಿ-ಐಡಿಸಿಎಲ್ ಆಡಳಿತ ಕಚೇರಿಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಒಟ್ಟು 23,200 ವಿದ್ಯುತ್ ಮಗ್ಗಗಳು, 185 ಏರ್‌ಜೆಟ್ ಮಗ್ಗಗಳು, 3,900 ರೇಪಿಯರ್ ಮಗ್ಗಗಳು ಕಾರ್ಯ ನಿರ್ವಹಿಸುತ್ತಿವೆ. ಇವುಗಳಿಗೆ ವಿದ್ಯುತ್ ಮಗ್ಗ ಸೇವಾ ಕೇಂದ್ರದಿಂದ ಉನ್ನತ ತರಬೇತಿ ನೀಡಿ ಆಧುನೀಕರಣಗೊಳಿಸಲು ಹಾಗೂ ಅಗತ್ಯ ನೂಲು, ಬಣ್ಣ, ಮತ್ತು ಬಟ್ಟೆಯ ಪರೀಕ್ಷೆಗೆ ಅನುಕೂಲವಾಗಲಿದೆ . ಅಷ್ಟೇ ಅಲ್ಲ ಉತ್ತರ ಕರ್ನಾಟಕದ ಇತರ ಜಿಲ್ಲೆಗಳಿಗೂ ಈ ತರಬೇತಿ ಕೇಂದ್ರದಿಂದ ಅನುಕೂಲವಾಗಲಿದೆ ಎಂದರು.

ಕಟ್ಟಡ ನಿರ್ಮಾಣವಾದ ನಂತರ ತರಬೇತಿ ಕೇಂದ್ರದಿಂದ ಉತ್ತರ ಕರ್ನಾಟಕ ಭಾಗದ ನೇಕಾರರು ಉನ್ನತ ಮಟ್ಟದ ತಂತ್ರಜ್ಞಾನದಲ್ಲಿ ನೇಕಾರಿಕೆ ತರಬೇತಿ ಹಾಗೂ ನೂಲು ಮತ್ತು ಬಟ್ಟೆ ಪರಿಶೀಲನೆ ಮಾಡಲು ಬಳಸಿಕೊಳ್ಳಬಹುದು. ತರಬೇತಿ ಕೇಂದ್ರಕ್ಕೆ ಏರ್‌ಜೆಟ್, ವಾಟರ್‌ಜೆಟ್ ಮತ್ತು ರೇಪಿಯರ್ ಮಗ್ಗಗಳನ್ನು ಎಲೆಕ್ಟ್ರಾನಿಕ್ ಜಕಾರ್ಡ್‌ದೊಂದಿಗೆ ಸಲಕರಣೆಗಳನ್ನು ಅಳವಡಿಸಬಹುದಾಗಿದೆ ಎಂದು ವಿವರಿಸಿದರು.

2.21 ಕೋಟಿ ರೂ. ವೆಚ್ಚದ ಈ ಯೋಜನೆಗೆ ಇಂದು ಶಂಕುಸ್ಥಾಪನೆ ನೆರವೇರಿಸಲಾಗಿದ್ದು, ಕಾಲಮಿತಿಯಲ್ಲಿ ಪೂರ್ಣಗೊಳಿಸಲು ನಿರ್ದೇಶನ ನೀಡಲಾಗಿದೆ ಎಂದರು.

ಬೆಳಗಾವಿ (ದಕ್ಷಿಣ) ಶಾಸಕ ಅಭಯ ಪಾಟೀಲ ಅವರು ಅಧ್ಯಕ್ಷತೆ ವಹಿಸಿದ್ದರು. ಜವಳಿ ಇಲಾಖೆ ಆಯುಕ್ತೆ ಕೆ. ಜ್ಯೋತಿ, ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮದದ ವ್ಯವಸ್ಥಾಪಕ ನಿರ್ದೇಶಕ ಎಸ್. ಪ್ರಕಾಶ್, ಜವಳಿ ಇಲಾಖೆ ಸಲಹೆಗಾರ ರಮಾನಂದ ಕುಲಕರ್ಣಿ, ಜಂಟಿ ನಿರ್ದೇಶಕ ಶಿವರಾಜ್ ಕುಲಕರ್ಣಿ, ಉಪನಿರ್ದೇಶಕ ವಾಸುದೇವ್ ದೊಡ್ಡಮನಿ, ಎನ್. ರವೀಂದ್ರ ಮತ್ತಿತರ ಅಧಿಕಾರಿಗಳು ಉಪಸ್ಥಿತರಿದ್ದರು.

****

## ಸಂಪುಟದಿಂದ ಅಮಿತ್ ಶಾ ಕೈಬಿಡಲು ಮೋದಿಗೆ ಖರ್ಗೆ ಒತ್ತಾಯ

ನವದೆಹಲಿ: ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಇತರ ಹಲವು ವಿರೋಧ ಪಕ್ಷದ ನಾಯಕರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಬಿಆರ್ ವಿರುದ್ಧ ನೀಡಿರುವ ಅವಹೇಳನಕಾರಿ ಹೇಳಿಕೆಗಳನ್ನು ತೀವ್ರವಾಗಿ ಖಂಡಿಸಿದ್ದಾರೆ.

ಸಂಸತ್ತಿನಲ್ಲಿ ಅಂಬೇಡ್ಕರ್ ನೀಡಿರುವ ಹೇಳಿಕೆ ಸರಿಯಲ್ಲ. ಅಮಿತ್ ಶಾ ತಕ್ಷಣವೇ ರಾಜೀನಾಮೆ ನೀಡಬೇಕು ಎಂದು ಖರ್ಗೆ ಒತ್ತಾಯಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಕೂಡಲೇ ಸಂಪುಟದಿಂದ ವಜಾಗೊಳಿಸಬೇಕು ಎಂದು ಕಾಂಗ್ರೆಸ್ ಮುಖ್ಯಸ್ಥ ಮಲ್ಲಿಕಾರ್ಜುನ ಖರ್ಗೆ ಬುಧವಾರದಂದು ಒತ್ತಾಯಿಸಿದ್ದಾರೆ.



ಸಂಸತ್ತಿನಲ್ಲಿ ದಲಿತ ನಾಯಕ ಬಿಆರ್ ಅಂಬೇಡ್ಕರ್ ಅವರನ್ನು ಸಚಿವ ಅಮಿತ್ ಶಾ ಅವಮಾನಿಸಿದ್ದಾರೆ ಎಂದು ಆರೋಪಿಸಿ ಅಮಿತ್ ಶಾ ರಾಜೀನಾಮೆ ನೀಡಬೇಕು ಎಂದು ಖರ್ಗೆ ಒತ್ತಾಯಿಸಿದರು. ಇದು ತಪ್ಪು ಎಂದು ಅಮಿತ್ ಶಾಗೆ ಹೇಳುವ ಬದಲು ಪ್ರಧಾನಿ ಮೋದಿ ಅವರು ಅಂಬೇಡ್ಕರ್ ಅವರ ಹೇಳಿಕೆಯ ಬಗ್ಗೆ ಸಮರ್ಥಿಸಿಕೊಳ್ಳುತ್ತಿದ್ದಾರೆ ಎಂದು ಮಲ್ಲಿಕಾರ್ಜುನ ಖರ್ಗೆ ಟೀಕಿಸಿದ್ದಾರೆ.

ನಮ್ಮ ಬೇಡಿಕೆ ಏನೆಂದರೆ ಅಮಿತ್ ಶಾ ಕ್ಷಮೆ ಯಾಚಿಸಬೇಕು ಮತ್ತು ಪ್ರಧಾನಿ ಮೋದಿಗೆ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಮೇಲೆ ನಂಬಿಕೆ ಇದ್ದರೆ ಮಧ್ಯರಾತ್ರಿಯೊಳಗೆ ಅಮಿತ್ ಶಾ ಅವರನ್ನು ವಜಾ ಮಾಡಬೇಕು. ಅವರಿಗೆ ಸಂಪುಟದಲ್ಲಿ ಉಳಿಯುವ ಹಕ್ಕಿಲ್ಲ, ಅವರನ್ನು ವಜಾ ಮಾಡಬೇಕು. ಆಗ ಮಾತ್ರ ಜನರು ಮೌನವಾಗಿರುತ್ತಾರೆ, ಇಲ್ಲದಿದ್ದರೆ ಜನರು ಪ್ರತಿಭಟಿಸುತ್ತಾರೆ. ಡಾ ಬಿಆರ್ ಅಂಬೇಡ್ಕರ್ ಅವರಿಗಾಗಿ ಜನರು ಪ್ರಾಣ ತ್ಯಾಗ ಮಾಡಲು ಸಿದ್ಧರಾಗಿದ್ದಾರೆ ಎಂದು ಕಾಂಗ್ರೆಸ್ ಅಧ್ಯಕ್ಷರು ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾರೆ.

ಮಂಗಳವಾರ 75 ವರ್ಷಗಳ ಸಂವಿಧಾನದ ಕುರಿತು ರಾಜ್ಯಸಭೆಯಲ್ಲಿ ಎರಡು ದಿನಗಳ ಚರ್ಚೆಯ ಸಮಾರೋಪದಲ್ಲಿ ರಾಜ್ಯಸಭೆಯಲ್ಲಿ ಮಾಡಿದ ಭಾಷಣದಲ್ಲಿ ಸಚಿವ ಅಮಿತ್ ಶಾ ಅವರು ಕಾಂಗ್ರೆಸ್ ಪಕ್ಷದ ವಿರುದ್ಧ ವಾಗ್ದಾಳಿ ನಡೆಸಿದರು.ಇತ್ತೀಚಿನ ದಿನಗಳಲ್ಲಿ ಅಂಬೇಡ್ಕರ್, ಅಂಬೇಡ್ಕರ್, ಅಂಬೇಡ್ಕರ್, ಅಂಬೇಡ್ಕರ್, ಅಂಬೇಡ್ಕರ್ ಎನ್ನುವುದು ಫ್ಯಾಶನ್ ಆಗಿದೆ. ಒಂದುವೇಳೆ ಅವರು ಅಂಬೇಡ್ಕರ್ ಬದಲು ಈ ರೀತಿ 100 ಬಾರಿ ದೇವರ ಹೆಸರು ಜಪ ಮಾಡಿದ್ದರೆ 7 ಜನ್ಮಗಳಲ್ಲೂ ಸ್ವರ್ಗದಲ್ಲಿ ಸ್ಥಾನ ಪಡೆಯುತ್ತಿದ್ದರು ಎಂದು ಹೇಳಿದ್ದರು. ಈ ಹೇಳಿಕೆ ವಿಪಕ್ಷ ಸದಸ್ಯರ ಟೀಕೆಗೆ ಕಾರಣವಾಯಿತು.

### ಅಂಗನವಾಡಿ ಕಾರ್ಯಕರ್ತೆಯರ ಬೇಡಿಕೆಗಳ ಈಡೇರಿಕೆಗೆ ಕ್ರಮ: ಸಚಿವೆ ಲಕ್ಷ್ಮೀ ಹೆಬ್ಬಾಳಕರ್

### ವೇತನ ಹೆಚ್ಚಳದ ಬಗ್ಗೆ ಸಿಎಂ ಜೊತೆ ಚರ್ಚೆ



ಬೆಳಗಾವಿ : ಅಂಗನವಾಡಿ ಕಾರ್ಯಕರ್ತರು ಸರ್ಕಾರದ ಮುಂದಿಟ್ಟಿರುವ ಬೇಡಿಕೆಗಳು ನ್ಯಾಯಸಮ್ಮತವಾಗಿದ್ದು, ಅಂಗನವಾಡಿ ಕಾರ್ಯಕರ್ತೆಯರ ಸಮಸ್ಯೆಗಳನ್ನು ಈಗಾಗಲೇ ಕೇಂದ್ರ ಸರ್ಕಾರದ ಗಮನಕ್ಕೆ ತರಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾದ ಲಕ್ಷ್ಮೀ ಹೆಬ್ಬಾಳಕರ್ ಹೇಳಿದರು.

ಬೆಳಗಾವಿಯ ಸುವರ್ಣ ವಿಧಾನಸೌಧದ ಮುಂಭಾಗದ ಕೊಂಡಸಕೊಪ್ಪ ಬಳಿ ನಡೆದ ಅಂಗನವಾಡಿ ನೌಕರರ ಬೆಳಗಾವಿ ಚಲೋ ಪ್ರತಿಭಟನೆಯ ಸ್ಥಳಕ್ಕೆ ಭೇಟಿ ನೀಡಿ ಮಾತನಾಡಿದ ಸಚಿವರು, ಗೌರವಧನ ಹೆಚ್ಚಳಕ್ಕೆ ಸಂಬಂಧಿಸಿದಂತೆ ಕೇಂದ್ರ ಸಚಿವೆ ಅನ್ನಪೂರ್ಣ ದೇವಿ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಲಾಗಿದೆ ಎಂದರು.

ಅಂಗನವಾಡಿ ಕಾರ್ಯಕರ್ತರಿಗೆ ವಿಮಾ ಯೋಜನೆ ಜಾರಿ, ವೇತನ ಪರಿಷ್ಕರಣೆ, ಮೊಟ್ಟೆ ದರ ಪರಿಷ್ಕರಣೆ ಸೇರಿದಂತೆ ಇನ್ನಿತರ ಬೇಡಿಕೆಗಳನ್ನು ಈಡೇರಿಸಲು ಸರ್ಕಾರ ಬದ್ಧವಾಗಿದೆ ಎಂದು ಸಚಿವರು ಹೇಳಿದರು.

ಗೃಹಲಕ್ಷ್ಮೀ ಯೋಜನೆಯನ್ನು ನಮ್ಮ ಇಲಾಖೆಯಿಂದ ಜಾರಿಗೆ ತರುವ ಮೂಲಕ ಬಲಿಷ್ಠರಾಗಿದ್ದೇವೆ. ವೇತನ ಹೆಚ್ಚಳ ಏರಿಕೆ ಸಂಬಂಧ ಮುಖ್ಯಮಂತ್ರಿಗಳ ಜೊತೆ ಮಾತನಾಡುವೆ ಎಂದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕಾರ್ಯದರ್ಶಿಗಳಾದ ಡಾ.ಶಾಮ್ಲಾ ಇಕ್ಬಾಲ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ನಿರ್ದೇಶಕರಾದ ಎನ್.ಸಿದ್ದೇಶ್ವರ, ಸಚಿವರ ವಿಶೇಷ ಕರ್ತವ್ಯಾಧಿಕಾರಿ ಬಿ.ಎಚ್.ನಿಶ್ಚಲ್, ಅಂಗನವಾಡಿ ಕಾರ್ಯಕರ್ತೆಯರ ಸಂಘದ ಅಧ್ಯಕ್ಷೆ ವರಲಕ್ಷ್ಮೀ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಅಲ್ಪಸಂಖ್ಯಾತರ ನೇಮಕಾತಿ ನಿಯಮಗಳ ಪರಿಷ್ಕರಣೆಗೆ ಕ್ರಮ

ಬೆಳಗಾವಿ: ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮ ಪರಿಷ್ಕರಣೆ ವಿಷಯವು ವಿಧಾನ ಪರಿಷತ್ತನಲ್ಲಿ ಬುಧವಾರದಂದು ಚರ್ಚೆಗೆ ಬಂದಿತು.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿ 2011ರಲ್ಲಿ ರಚನೆಯಾದ ವೃಂದ ಮತ್ತು ನೇಮಕಾತಿ ನಿಯಮದ ಆಧಾರದ ಮೇಲೆ ನಿಗದಿಪಡಿಸಿದ ಹುದ್ದೆಗಳಿಗೆ ಮಾತ್ರ 2022ರಲ್ಲಿ ಮುಂಬಡ್ತಿ ನೀಡಲಾಗಿದ್ದು, 2016ರಲ್ಲಿ ನೇಮಕಗೊಂಡ ಪ್ರಥಮ ದರ್ಜೆ ಸಹಾಯಕ-ರಿಗೆ, ಶಿಕ್ಷಕರಿಗೆ ಮತ್ತು ಉಪನ್ಯಾಸಕರಿಗೆ ಬಡ್ತಿ ನೀಡಲು ಸರ್ಕಾರ ತೆಗೆದುಕೊಂಡ ಕ್ರಮಗಳ ಬಗ್ಗೆ ವಿವರಿಸಲು ವಿಧಾನ ಪರಿಷತ್ ಸದಸ್ಯರಾದ ಹೇಮಲತಾ ನಾಯಕ ಮತ್ತು ಡಿ.ಎಸ್.ಅರುಣ್ ಅವರು ಪ್ರಶ್ನೋತ್ತರ ವೇಳೆ ವಿಷಯ ಪ್ರಸ್ತಾಪಿಸಿದರು.

ಇದಕ್ಕೆ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರಾದ ಬಿ.ಝೆಡ್. ಜಮೀರ್ ಅಹ್ಮದ್ ಖಾನ್ ಅವರ ಪರವಾಗಿ ಸಚಿವರಾದ ಕೃಷ್ಣ ಭೈರೇಗೌಡ ಅವರು ಪ್ರತಿಕ್ರಿಯಿಸಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿ ಪ್ರಸ್ತುತ 2011ರ ವೃಂದ ಮತ್ತು ನೇಮಕಾತಿ ನಿಯಮಗಳು ಚಾಲ್ತಿಯಲ್ಲಿದ್ದು,



ಈ ನಿಯಮಗಳಂತೆ ಅರ್ಹ ಸಿಬ್ಬಂದಿಗಳಿಗೆ ಮುಂಬಡ್ತಿ ನೀಡಲಾಗಿದೆ. ಈ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಷ್ಕರಿಸುವ ಪ್ರಕ್ರಿಯೆ ಚಾಲ್ತಿಯಲ್ಲಿದ್ದು, ಪರಿಷ್ಕೃತ ಕರಡು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಪ್ರಥಮ ದರ್ಜೆ ಸಹಾಯಕರುಗಳಿಗೆ, ಶಿಕ್ಷಕ-ರಿಗೆ, ಉಪನ್ಯಾಸಕರಿಗೆ ನಿಯಮಾನುಸಾರ ಬಡ್ತಿಗೆ ಅವಕಾಶ ಕಲ್ಪಿಸಲಾಗಿದೆ.

2016ರಲ್ಲಿ ನೇಮಕವಾದ ಪ್ರಥಮ ದರ್ಜೆ ಸಹಾಯಕರುಗಳಿಗೆ, ಈಗಾಗಲೇ ಖಾಲಿ ಇರುವ ಮುಂಬಡ್ತಿ ಹುದ್ದೆಗಳಿಗೆ ನಿಯಮಾನುಸಾರ ಬಡ್ತಿ ನೀಡಲಾಗಿದೆ. ಮುಂದುವರೆದು, ಶಿಕ್ಷಕರು, ಉಪನ್ಯಾಸಕರು ಒಳಗೊಂಡಂತೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಸಿಬ್ಬಂದಿಗೆ ಮುಂಬಡ್ತಿಗೆ ಪರಿಗಣಿಸುವ ಬಗ್ಗೆ ಪ್ರಸ್ತುತ ಚಾಲ್ತಿಯಲ್ಲಿರುವ 2011ರ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸಮಗ್ರವಾಗಿ ಪರಿಷ್ಕರಿಸಲಾಗುತ್ತಿದೆ.

ಹೆಚ್ಚು ಸೇವೆ ಸಲ್ಲಿಸಿದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗದ ಪ್ರಥಮ ದರ್ಜೆ ಸಹಾಯಕರುಗಳಿಗೆ, ಶಿಕ್ಷಕರಿಗೆ, ಉಪನ್ಯಾಸಕರಿಗೆ ಮುಂಬಡ್ತಿ ಬಗ್ಗೆ ಗಮನ ಹರಿಸಿ ಪ್ರಥಮ ದರ್ಜೆ ಸಹಾಯಕರುಗಳಿಗೆ ಈಗಾಗಲೇ ಖಾಲಿ ಇರುವ ಮುಂಬಡ್ತಿ ಹುದ್ದೆಗಳಿಗೆ ನಿಯಮಾನುಸಾರ ಬಡ್ತಿ ನೀಡಲಾಗಿದೆ. ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿಗೆ ಸಂಬಂಧಿಸಿದಂತೆ ಗಮನ ಹ-ರಿಸಿದ್ದು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸುವಾಗ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ನಿಯಮಗಳನ್ನು ಪಾಲಿಸಲಾಗಿದೆ. ಶಿಕ್ಷಕರು, ಉಪನ್ಯಾಸಕರು ಒಳಗೊಂಡಂತೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಸಿಬ್ಬಂದಿಗಳಿಗೆ ಮುಂಬಡ್ತಿಗೆ ಪರಿಗಣಿಸುವುದು ಒಳಗೊಂಡಂತೆ ಪ್ರಸ್ತುತ ಚಾಲ್ತಿಯಲ್ಲಿರುವ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ 2011ರ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸಮಗ್ರವಾಗಿ ಪರಿಷ್ಕರಿಸುವ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಯ ಸಹಮತಿಗಾಗಿ ಕಳುಹಿಸಲಾಗಿದ್ದು, ಪರಿಶೀಲನೆಯಲ್ಲಿದೆ ಎಂದು ಸಚಿವರು ತಿಳಿಸಿದರು.

# ಬನಹಟ್ಟಿಯಲ್ಲಿ ಸಂಭ್ರಮದ ವೀರಭದ್ರ ದೇವರ ಕಾರ್ತಿಕೋತ್ಸವ

ರಬಕವಿ–ಬನಹಟ್ಟಿ,ಡಿ17: ನಗರದ ಮಂಗಳವಾರ ಪೇಟೆಯಲ್ಲಿರುವ ವೀರಭದ್ರ ದೇವರ ಕಾರ್ತಿಕೋತ್ಸವ ಸೋಮವಾರ ಸಂಭ್ರಮ ಸಡಗರದಿಂದ ನಡೆಯಿತು. ದೇವಸ್ಥಾನದ ಮುಂಭಾಗದಲ್ಲಿ ನಿರ್ಮಾಣ ಮಾಡಲಾದ ಅಗ್ನಿಕುಂಡದಲ್ಲಿ ಪುರುಷರು, ಮಹಿಳೆಯರು ಸೇರಿದಂತೆ ಮಕ್ಕಳು ಪ್ರವೇಶ ಮಾಡಿ ಹರಕೆಯನ್ನು ಪೂರೈಸಿದರು.

ಕಾರ್ತಿಕೋತ್ಸವದ ಅಂಗವಾಗಿ ಬೆಳಗ್ಗೆ ದೇವಸ್ಥಾನದಲ್ಲಿ ರುದ್ರಾಭಿಷೇಕ, ಬುತ್ತಿ ಪೂಜೆ ಕಾರ್ಯಕ್ರಮ ನಡೆಯಿತು. ನಂತರ ವೀರಭದ್ರ ದೇವರ ಪಲ್ಲಕ್ಕಿ ಉತ್ಸವದ ಸೇವೆ ನಗರದ ಪ್ರಮುಖ ಬೀದಿಗಳಲ್ಲಿ ವಾದ್ಯ ಮೇಳದೊಂದಿಗೆ ನಡೆಯಿತು. ನಂತರ ಪುರುವಂತರು ನಗರದ ಪ್ರಮುಖ ಬೀದಿಗಳಲ್ಲಿ ವೀರಗಾಸೆ ಕಲೆಯನ್ನು ಪ್ರದರ್ಶನ ಮಾಡಿದರು. ಮಾರ್ಗ ಮಧ್ಯದಲ್ಲಿ ಭಕ್ತರು ವೀರಭದ್ರರ ಪಲ್ಲಕ್ಕಿಗೆ ಪೂಜೆ ಸಲ್ಲಿಸಿ ಬರಮಾಡಿಕೊಂಡರು.

ಅಗ್ನಿಕುಂಡದ ಸುತ್ತ ಪುರುವಂತರು ನಡೆಸಿದ ವೀರಗಾಸೆ ಪ್ರದರ್ಶನ ಗಮನ ಸೆಳೆಯಿತು. ನಂತರ ದೇವಸ್ಥಾನದ ಮುಂಭಾಗದಲ್ಲಿರುವ ಅಗ್ನಿ ಕುಂಡವನ್ನು ನಂದಿಕೋಲು ಹೊತ್ತವರು ನಂತರ ಪಲ್ಲಕ್ಕಿ ಹೊತ್ತ ಪುರುವಂತರು ಪ್ರವೇಶ ಮಾಡಿದರು. ನಂತರ ನೂರಾರು ಭಕ್ತರು ಅಗ್ನಿಕುಂಡ ಪ್ರವೇಶ ಮಾಡಿದರು.

ಶ್ರೀಶೈಲ ಧಬಾಡಿ, ರಾಜಶೇಖರ ಮಾಲಾಪುರ, ಕಾಡಪ್ಪ ಪಟ್ಟಣ, ಶ್ರೀಪಾದ ಬಾಣಕಾರ, ಪಂಡಿತ ಪಟ್ಟಣ, ಬಸವರಾಜ ಪಟ್ಟಣ, ಸದಾಶಿವ ಗಂಜ್ಯಾಳ, ಶೇಖರ ಗಂಜ್ಯಾಳ, ಮಲ್ಲಪ್ಪಗೇಣಿ, ಮಲ್ಲಪ್ಪ ಉದಗಟ್ಟಿ, ಕಾಡಪ್ಪ ಬಾಬಾನಗರ, ರಮೇಶ ಪಟ್ಟಣ, ದಾನಪ್ಪ ಮಂಡಿ, ನಾಗಪ್ಪ ಮಂಡಿ, ಮಲ್ಲಪ್ಪ ಹುನ್ನೂರ, ರೇವಣಪ್ಪ ಶಿವಸಿಂಪಿ, ಶಂಕರ ಜುಂಜಪ್ಪನವರ ಸೇರಿದಂತೆ ಅನೇಕರು ಇದ್ದರು.



# ಎಸ್.ಸಿ, 189 ಎಸ್.ಟಿ ಮತ್ತು 2,351 ಒಬಿಸಿ ಫಲಾನುಭವಿಗಳ 5,177 ಸೂಕ್ಷ್ಮ ಆಹಾರ ಸಂಸ್ಕರಣಾ ಘಟಕಗಳಿಗೆ ಸಾಲಗಳ ಮಂಜೂರು

ಮೂಡಲಗಿ : ಪ್ರಧಾನ ಮಂತ್ರಿ ಕಿರು ಆಹಾರ ಸಂಸ್ಕರಣಾ ಘಟಕ ಯೋಜನೆಯಡಿ ಕರ್ನಾಟಕ ರಾಜ್ಯದಲ್ಲಿ 375 ಎಸ್.ಸಿ, 189 ಎಸ್.ಟಿ ಮತ್ತು 2,351 ಒಬಿಸಿ ಫಲಾನುಭವಿಗಳ 5,177 ಸೂಕ್ಷ್ಮ ಆಹಾರ ಸಂಸ್ಕರಣಾ ಘಟಕಗಳಿಗೆ ಸಾಲಗಳನ್ನು ಮಂಜೂರು ಮಾಡಲಾಗಿದೆ ಮತ್ತು ಸುಮಾರು 21,852 ನೇರ/ಪರೋಕ್ಷ ಉದ್ಯೋಗಗಳನ್ನು ಸೃಷ್ಟಿಸಲಾಗಿದೆ ಎಂದು ಕೇಂದ್ರ ಆಹಾರ ಸಂಸ್ಕರಣಾ ಕೈಗಾರಿಕೆಗಳ ರಾಜ್ಯ ಸಚಿವ ರವನೀತ್ ಸಿಂಗ್ ಅವರು ಲಿಖಿತ ಉತ್ತರದಲ್ಲಿ ಮಾಹಿತಿ ನೀಡಿದ್ದಾರೆ ಎಂದು ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ತಿಳಿಸಿದ್ದಾರೆ. ನವದೆಹಲಿಯಲ್ಲಿ ನಡೆಯುತ್ತಿರುವ ಚಳಿಗಾಲ ಅಧಿವೇಶನದಲ್ಲಿ ಕರ್ನಾಟಕ ರಾಜ್ಯದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಆಹಾರ ಸಂಸ್ಕರಣಾ ಘಟಕಗಳ ಯೋಜನೆಯ ಅನುಷ್ಠಾನದ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು ಪ್ರಧಾನ ಮಂತ್ರಿ ಕಿರು ಆಹಾರ ಸಂಸ್ಕರಣಾ ಘಟಕ ಯೋಜನೆಯನ್ನು ದೇಶದಲ್ಲಿನ ಸೂಕ್ಷ್ಮ ಆಹಾರ ಸಂಸ್ಕರಣಾ ಉದ್ಯಮಗಳ ಉನ್ನತೀಕರಣಕ್ಕಾಗಿ ಆರ್ಥಿಕ, ತಾಂತ್ರಿಕ ಮತ್ತು ವಾಣಿಜ್ಯ ಸಹಾಯವನ್ನು ಒದಗಿಸಲು ಜಾರಿಗೊಳಿಸುತ್ತಿದೆ. ಈ ಯೋಜನೆಯು 2020–21 ರಿಂದ 2025–26 ರವರೆಗೆ 10,000 ಕೋಟಿ ರೂ. ಅನುದಾನ ನೀಡಲಾಗಿದೆ.

ದೇಶದಲ್ಲಿ 9,298 ಎಸ್.ಸಿ, 5,201 ಎಸ್.ಟಿ ಮತ್ತು 56,540 ಒಬಿಸಿ ಫಲಾನುಭವಿಗಳಿಗೆ 1,08,580 ಸೂಕ್ಷ್ಮ ಆಹಾರ ಸಂಸ್ಕರಣಾ ಘಟಕಗಳಿಗೆ ಸಾಲಗಳನ್ನು ಮಂಜೂರು ಮಾಡಲಾಗಿದೆ ಮತ್ತು ಸುಮಾರು 3,78,004 ಉದ್ಯೋಗಗಳನ್ನು ಸೃಷ್ಟಿಸಲಾಗಿದೆ ಎಂದರು. ಆಹಾರ ಸಂಸ್ಕರಣೆ ಮತ್ತು ಸಂರಕ್ಷಣೆ ಸಾಮಥ–ರ್ಯ ಸೃಷ್ಟಿ/ವಿಸ್ತರಣೆ ಯೋಜನೆಯಡಿ ಕರ್ನಾಟಕ ರಾಜ್ಯಕ್ಕೆ 14 ಯೋಜನೆಗಳನ್ನು ಅನುಮೋದಿಸಲಾಗಿದೆ. ಮೆಗಾ ಫುಡ್ ಪಾರ್ಕ್ ಯೋಜನೆಯಡಿ ಕರ್ನಾಟಕ ರಾಜ್ಯಕ್ಕೆ 2 ಯೋಜನೆಗಳನ್ನು ಅನುಮೋದಿಸಲಾಗಿದೆ, ಇದು ಸರಿಸುಮಾರು 5620 ನೇರ/ಪರೋಕ್ಷ ಉದ್ಯೋಗಗಳನ್ನು ಸೃಷ್ಟಿಸುತ್ತದೆ. 726 ಜಿಲ್ಲೆಗಳಿಗೆ ಒಂದು ಜಿಲ್ಲೆ ಒಂದು ಉತ್ಪನ್ನವನ್ನು ಅನುಮೋದಿಸಿದೆ.



ಪ್ರಧಾನ ಮಂತ್ರಿ ಕಿರು ಆಹಾರ ಸಂಸ್ಕರಣಾ ಘಟಕ ಯೋಜನೆಯಡಿ ಯೋಜನಾ ವೆಚ್ಚದ 35% ದರದಲ್ಲಿ ಕ್ರೆಡಿಟ್ ಲಿಂಕ್ಡ್ ಕ್ಯಾಪಿಟಲ್ ಸಬ್ಸಿಡಿ, ಪ್ರತಿ ಯೂನಿಟ್‌ಗೆ ಗರಿಷ್ಠ 10 ಲಕ್ಷ ರೂ. ಹಣಕಾಸಿನ ಸಹಾಯವನ್ನು ನೀಡಲಾಗುತ್ತದೆ. ಸ್ವಸಹಾಯ ಗುಂಪುಗಳ ಪ್ರತಿ ಸದಸ್ಯರಿಗೆ ರೂ 40,000 ದರದಲ್ಲಿ ಆರಂಭಿಕ ಬಂಡವಾಳ, ಸ್ವಸಹಾಯ ಗುಂಪುಗಳ ಒಕ್ಕೂಟಕ್ಕೆ ಗರಿಷ್ಠ ರೂ 4 ಲಕ್ಷ. ರೂ.ಗೆ ಒಳಪಟ್ಟಿರುತ್ತದೆ. ಎಫ್‌ಪಿಓಗಳು, ಎಸ್‌ಎಚ್‌ಜಿಗಳು, ಸಹಕಾರಿ ಸಂಘಗಳು ಅಥವಾ ಮೈಕ್ರೋ ಫುಡ್ ಪ್ರೊಸೆಸಿಂಗ್ ಎಂಟರ್‌ಪ್ರೈಸಸ್‌ಗಳ ಬ್ರ್ಯಾಂಡಿಂಗ್ ಮತ್ತು ಮಾರ್ಕೆಟಿಂಗ್‌ಗಾಗಿ 50% ವರೆಗೆ ಅನುದಾನ ನೀಡಲಾಗುತ್ತದೆ ಎಂದು ಸಚಿವರು ಉತ್ತರಿಸಿದ್ದಾರೆಂದು ಸಂಸದ ಈರಣ್ಣ ಕಡಾಡಿ ತಿಳಿಸಿದ್ದಾರೆ.

## ದಿ 25 ರಂದು ಗೋಕಾಕದಿಂದ ಗುಡ್ಡಾಪುರಕ್ಕೆ ಪಾದಯಾತ್ರೆ

ಗೋಕಾಕ : ಪ್ರತಿ ವರ್ಷದಂತೆ ಗೋಕಾಕ ನಗರದಿಂದ ಗುಡ್ಡಾಪುರ ದಾನಮ್ಮ ದೇವಿಯ ದರ್ಶನಕ್ಕಾಗಿ ಹೊರಡುವ ಪಾದಯಾತ್ರೆಯು ಇದೇ ದಿನಾಂಕ 25 ರಂದು ಗೋಕಾಕ ನಗರದ ದಾನಮ್ಮ ದೇವಿಯ ಗುಡಿಯಿಂದ ಬೆಳಿಗ್ಗೆ 5 ಗಂಟೆಗೆ ಹೊರಡುತ್ತದೆ ಎಂದು ಪಾದಯಾತ್ರೆ ಆಯೋಜಕರಾದ ಶ್ರೀ ಸೋಮಯ್ಯ ಹಿರೇಮಠ ಅವರು ತಿಳಿಸಿದ್ದಾರೆ. ಕಲ್ಲೋಳಿ ಮಾರ್ಗವಾಗಿ ಹೊರಡುವ ಪಾತ್ರೆಯಾತ್ರೆಯ ಅವಧಿ ಸರಿಯಾಗಿ 5 ದಿಸವಾಗುತ್ತದೆ. ಇದೇ ತಿಂಗಳ ದಿನಾಂಕ 29 ರಂದು ಬೆಳಿಗ್ಗೆ 6 ಗಂಟೆಗೆ ಗುಡ್ಡಾಪುರದ ದಾನಮ್ಮ ದೇವಿಗೆ ಪೂಜೆ ನೆರವೇರಿಸಲಾಗುವುದು.

ದಾನಮ್ಮ ದೇವಿಯ ಪಾದಯಾತ್ರೆಗೆ ಬರುವ ಭಕ್ತಾದಿಗಳು ಹೆಚ್ಚಿನ ಮಾಹಿತಿಗಾಗಿ ಸೋಮಯ್ಯ ಹಿರೇಮಠ 9916267250 ಗೋಕಾಕ , ಮಹಾದೇವಿ ಡವಳೇಶ್ವರ 9880435237 ಮೆಳವಂಕಿ, ಸುರೇಶ ಬೈರುಗೋಳ 9886942899 ರಾಜಾಪುರ, ಜಗದೀಶ್ ಕೋತಂಬರಿ 9448916081 ಬೈಲಹೊಂಗಲ, ಶೇಖರ ಮಲಾಮರಡಿ 9008194959 ಚಚಡಿ, ಸಂತೋಷಕುಮಾರ ನಂದೆನ್ನವರ 8147733436 ಸಂಪಗಾವ, ಶಿವನಗೌಡ ಪೊಲೀಸ್ ಪಾಟೀಲ್ 9663005222 ವಕುಂದ ಇವರನ್ನು ಸಂಪರ್ಕಿಸಲು ಕೋರಲಾಗಿದೆ.

## ಗೋಕಾಕ ದಿ. 29 ರಂದು ಅಯ್ಯಪ್ಪ ಸ್ವಾಮಿ ಮಹಾಪೂಜೆ

ಗೋಕಾಕ : ಗೋಕಾಕ ನಗರದ ಸೋಮವಾರ ಪೇಟೆಯಲ್ಲಿಯ ಶ್ರೀ ನಾಗದೇವರ ಯುವಕ ಮಂಡಳ ಇವರ ಆಶ್ರಯದಲ್ಲಿ 17ನೇ ವರ್ಷದ ಶ್ರೀ ಅಯ್ಯಪ್ಪ ಸ್ವಾಮಿ ಮಹಾಪೂಜೆಯು ಇದೇ ದಿನಾಂಕ ರವಿವಾರ 29 ರಂದು ಮುಂಜಾನೆಯ 7 ಘಂಟೆಗೆ ಜರುಗಲಿದೆ.

ನಂತರ ಮುಂಜಾನೆ 9 ಘಂಟೆಯಿಂದ ಮಹಾಪ್ರಸಾದ ಜರುಗಲಿದ್ದು ಭಕ್ತಾದಿಗಳು ಆಗಮಿಸಿ ಭಗವಂತನ ಕೃಪೆಗೆ ಪಾತ್ರರಾಗಬೇಕೆಂದು ಆಯೋಜಕರು ಕೋರಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಮಂಜು ತೇಲಿ 9972125521 ಇವರನ್ನು ಸಂಪರ್ಕಿಸಲು ವಿನಂತಿಸಿದ್ದಾರೆ.

# ಮಕ್ಕಳ ಸಾಹಿತ್ಯದಲ್ಲಿ ಮಕ್ಕಳಲ್ಲಿ ಕುತೂಹಲ ಮೂಡಿಸುವ-ಮಾನವೀಯ ಮೌಲ್ಯಗಳನ್ನು ಒಳಗೊಂಡಿರಬೇಕು



ಬಸವನಬಾಗೇವಾಡಿ, ಮಕ್ಕಳಲ್ಲಿ ಕುತೂಹಲ ಕೆರಳಿಸುವ, ಅವರು ಏಕಾಗ್ರತೆಯಿಂದ ನೋಡುವ, ಮಾನವೀಯ ಮೌಲ್ಯಗಳನ್ನು ಬೀರುವಂತಹ ಅಂಶಗಳು ಮಕ್ಕಳ ಸಾಹಿತ್ಯದಲ್ಲಿರಬೇಕು. ಈ ನಿಟ್ಟಿನಲ್ಲಿ ಇಂದು ಬಿಡುಗಡೆಗೊಂಡ ಇಂದುಮತಿ ಲಮಾಣಿಯವರ ಕಾಡಿನ ಕರಡಿ ನಾಡಿಗೆ ಬಂತು ಶಿಶು ಕಥಾ ಸಂಕಲನ ಒಳಗೊಂಡಿದೆ ಎಂದು ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ, ಸಾಹಿತಿ ಜಂಬುನಾಥ ಕಂಚ್ಯಾಣಿ ಹೇಳಿದರು. ಪಟ್ಟಣದ ವಿರಕ್ತಮಠದಲ್ಲಿ ತಾಲೂಕು ಶರಣ ಸಾಹಿತ್ಯ ಪರಿಷತ್ತು, ವಿಜಯಪುರದ ಗೋರಬಾಯಿ ಟೋಳಿ ಮಹಿಳಾ ಸಮೂಹ ಸಂಸ್ಥೆಯ ಸಹಯೋಗದಲ್ಲಿ ದಿ.ಶಂಕರ ಡಾಕಪ್ಪ ಲಮಾಣಿ ಸ್ಮರಣಾರ್ಥ ಶನಿವಾರ ಹಮ್ಮಿಕೊಂಡಿದ್ದ ಶಂಕರಶ್ರೀ ದತ್ತಿನಿಧಿ ಪ್ರಶಸ್ತಿ ಪ್ರಧಾನ ಮತ್ತು ಇಂದುಮತಿ ಲಮಾಣಿಯವರ ಕಾಡಿನ ಕರಡಿ ನಾಡಿಗೆ ಬಂತು ಶಿಶು ಕಥಾ ಸಂಕಲನ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಕ್ಕಳ ಬುದ್ಧಿಮಟ್ಟವನ್ನು ವಿಕಾಸಗೊಳಿಸುವ ಶಕ್ತಿ ಸಾಮರ್ಥ್ಯ ಮಕ್ಕಳ ಸಾಹಿತ್ಯದಲ್ಲಿರಬೇಕು. ಮಕ್ಕಳ ಒಡನಾಡಿಗಳು, ಅವರ ಪ್ರೀತಿ ವಿಶ್ವಾಸಗಳಿಸಿದ್ದರೆ ಮಾತ್ರ ಅಂತಹವರಿಂದ ಉತ್ತಮ ಮಕ್ಕಳ ಸಾಹಿತ್ಯ ಹೊರಬರುತ್ತದೆ ಎಂದರು.

ಗ್ರಾಮೀಣ ಭಾಗದಲ್ಲಿ ಜನಿಸಿದ ಇಂದುಮತಿ ಲಮಾಣಿ ಅವರು ಹಲವಾರು ಕೃತಿಗಳನ್ನು ರಚಿಸಿ ಸಾಹಿತ್ಯ ಸಾರಸ್ವತ ಲೋಕಕ್ಕೆ ನೀಡಿದ್ದಾರೆ. ಇಂದು ಬಿಡುಗಡೆಗೊಂಡ ಅವರ ಶಿಶು ಕಥಾ ಸಂಕಲನ ಕಾಡಿನ ಕರಡಿ ನಾಡಿಗೆ ಬಂತು ಕೃತಿಯಲ್ಲಿ ಮೂಢನಂಬಿಕೆಗಳನ್ನು ಯಾವ ರೀತಿಯಿಂದಲೂ ನಂಬಬಾರದು ಸೇರಿದಂತೆ ಹಲವಾರು ಅಂಶಗಳು ಮಕ್ಕಳು ಕುತೂಹಲದಿಂದ ಓದುವಂತೆ ಕಥೆಗಳು ಮೂಡಿ ಬಂದಿವೆ ಎಂದರು.

ಶಂಕರಶ್ರೀ ದತ್ತಿನಿಧಿ ಪ್ರಶಸ್ತಿ ಸ್ವೀಕರಿಸಿದ ಸಾಹಿತಿ ಬಾಬು ಕೃಷ್ಣಮೂರ್ತಿ ಮಾತನಾಡಿ, ಸಾಹಿತಿಗಳಿಗೆ ಜಾತಿಬೇಧಭಾವ ಇರುವದಿಲ್ಲ. ಸಾಹಿತ್ಯಕ್ಕೆ ಬಡತನ–ಶ್ರೀಮಂತಿಕೆ ಇರುವದಿಲ್ಲ. ಸಾಹಿತ್ಯಾಸಕ್ತರೆಲ್ಲರೂ ಸರಸ್ವತಿಯ ಆರಾಧಕರು. ಈ ಸಾಲಿನಲ್ಲಿ ಗ್ರಾಮೀಣ ಸೊಗಡಿನಲ್ಲಿ ಬೆಳೆದ ಬಂಜಾರ ಸಮುದಾಯಕ್ಕೆ ಸೇರಿದ ಸಾಹಿತ್ಯ ಕ್ಷೇತ್ರಕ್ಕೆ ಹಲವಾರು ಕೃತಿಗಳನ್ನು ನೀಡಿರುವ ಇಂದುಮತಿ ಲಮಾಣಿ ಅವರು ನಿಲ್ಲುತ್ತಾರೆ ಎಂದರೆ ತಪ್ಪಾಗಲಾರದು. ಇವರಿಂದ ಸಮಾಜಕ್ಕೆ ಆದರ್ಶಪ್ರಾಯವಾಗುವಂತಹ ಒಳ್ಳೆಯ ಕೃತಿಗಳು ಮುಂಬರುವ ದಿನಗಳಲ್ಲಿಯೂ ಬರುವಂತಾಗಲೆಂದು ಆಶಿಸಿದರು.

ಕಾರ್ಯಕ್ರಮ ಉದ್ಘಾಟಿಸಿದ ವಿಜಯಪುರದ ಅಂಬಾಭವಾನಿ ಮಹಿಳಾ ಸಂಘದ ಅಧ್ಯಕ್ಷೆ ಸುಧಾ ಬಿಜ್ಜರಗಿ ಮಾತನಾಡಿ, ಜಿಲ್ಲೆಯ ಮಹಿಳಾ ಸಾಹಿತಿಗಳಲ್ಲಿ ಒಬ್ಬರಾಗಿರುವ ಇಂದುಮತಿ ಲಮಾಣಿ ಅವರು ಇದುವರೆಗೂ ಒಳ್ಳೆಯ ಕೃತಿಗಳನ್ನು ನೀಡಿದ್ದಾರೆ. ಇವರಿಂದ ಉತ್ತಮ ಕೃತಿಗಳು ಮೂಡಿಬರುವಂತಾಗಲೆಂದರು.

ಸಾಹಿತಿ ಕಮಲಾ ಗೆಜ್ಜಿ ಕಾಡಿನ ಕರಡಿ ನಾಡಿಗೆ ಬಂತು ಶಿಶು ಕಥಾ ಸಂಕಲನ ಕೃತಿ ಪರಿಚಯಿಸಿದರು. ಸಾನಿಧ್ಯ ವಹಿಸಿದ್ದ ವಿರಕ್ತಮಠದ ಸಿದ್ದಲಿಂಗ ಸ್ವಾಮೀಜಿ, ಅಧ್ಯಕ್ಷತೆ ವಹಿಸಿದ್ದ ತಾಲೂಕು ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ವೀರಣ್ಣ ಮರ್ತುರ, ರಾಷ್ಟ್ರೋತ್ಥಾನ ಸಾಹಿತ್ಯ ಪರಿಷತ್ತಿನ ವಿಘ್ನೇಶ್ವರ ಮಾತನಾಡಿದರು.

ವೇದಿಕೆಯಲ್ಲಿ ಜನಪದ ಕಲಾವಿದರಾದ ವಸಂತ ಚವ್ಹಾಣ, ಆರ್.ಬಿ.ನಾಯಕ, ಡಾವಣಗೇರಿ ಡಿವೈಎಸ್ಪಿ ಬಿ.ಎಸ್.ಬಸವರಾಜ, ತುಕರಾಮ ರಜಪೂತ, ರಾಜು ರಾಠೋಡ, ಶಾಂತಾ ಪಾಟೀಲ, ತಾಲೂಕು ಕಸಾಪ ಅಧ್ಯಕ್ಷ ಶಿವಾನಂದ ಡೋಣೂರ, ನ್ಯಾಯವಾದಿಗಳ ಸಂಘದ ಅಧ್ಯಕ್ಷ ಎಚ್.ಎಸ್.ಗುರಡ್ಡಿ ಇತರರು ಇದ್ದರು. ವಿವೇಕಾನಂದ ಕಲ್ಯಾಣಶೆಟ್ಟಿ ಸ್ವಾಗತಿಸಿದರು. ಆರ್.ಜಿ.ಅಳ್ಳಗಿ ನಿರೂಪಿಸಿದರು. ಇದೇ ಸಂದರ್ಭದಲ್ಲಿ ಮಕ್ಕಳ ಸಾಹಿತ್ಯ ಪರಿಷತ್ತಿನ ಜಿಲ್ಲೆಯ ಎಲ್ಲ ತಾಲೂಕುಗಳ ಅಧ್ಯಕ್ಷರನ್ನು ಸನ್ಮಾನಿಸಲಾಯಿತು.

# ಜಂಗಮ ವಟುಗಳಿಗೆ ಅಯ್ಯಾಚಾರ ದೀಕ್ಷಾ



ರಬಕವಿ–ಬನಹಟ್ಟಿ,ಡಿ17: ನಗರದ ಹಿರೇಮಠದಲ್ಲಿ ಲಿಂ. ಶಾಂತವೀರ ಶಿವಾಚಾರ್ಯರ ಚಿರಲಿಂಗಾಂಗ ಸಾಮರಸ್ಯ ಕಾರ್ಯಕ್ರಮದ ಸಮಾರೋಪದಲ್ಲಿ 30 ಕ್ಕೂ ಅಧಿಕ ಜಂಗಮ ವಟುಗಳಿಗೆ ಅಯ್ಯಾಚಾರ ದೀಕ್ಷಾ ಕಾರ್ಯಕ್ರಮ ನಡೆಸಲಾಯಿತು.

ಮಂಗಳವಾರ ಹಿರೇಮಠದ ಶರಣಬಸವ ಶಿವಾಚಾರ್ಯರು ವಟುಗಳಿಗೆ ಮಂತ್ರ ಬೋಧನೆ ಮಾಡಿ ಇಷ್ಟಲಿಂಗ ಪೂಜೆಯ ಮಹತ್ವದ ಬಗ್ಗೆ ತಿಳಿಸಿದರು. ಇದೇ ಸಂದರ್ಭ ಮಾತನಾಡಿ ಸಂಸ್ಕಾರದ ಹಿಂದಿನ ವೈಜ್ಞಾನಿಕ ಮಹತ್ವ ತಿಳಿಸಿ, ಸಜ್ಜನ ಸಮಾಜದ ನಿರ್ಮಾಣದಲ್ಲಿ ಮಾನವರಿಂದ ದೇವಮಾನವರಾಗಲು ದಾರಿಮಾಡಿಕೊಡುತ್ತದೆ ಎಂದು ತಿಳಿಸಿದರು. ಮಂಗಳವಾರ ಪೇಟೆ ದೈವ ಮಂಡಳಿ ಚೇರಮನ್ ಶ್ರೀಶೈಲ ದಭಾಡಿ ಮಾತನಾಡಿ, ಹಿರೇಮಠದಲ್ಲಿ ಪ್ರತಿ ವರ್ಷ ಅಯ್ಯಾಚಾರ ಹಮ್ಮಿಕೊಳ್ಳುತ್ತದೆ. ಈ ಕಾರ್ಯಕ್ರಮವನ್ನು ಜಂಗಮ ಬಂಧುಗಳು ಸದುಪಯೋಗಪಡಿಸಿಕೊಳ್ಳಬೇಕೆಂದರು.

ಪಟ್ಟಣದ ಪ್ರಮುಖ ಬೀದಿಗಳಲ್ಲಿ ಪಲ್ಲಕ್ಕಿ ಉತ್ಸವ ಜರುಗಿತು. ಬೆಂಗಳೂರಿನ ಹಿರೇಮಠದ ಅನ್ನದಾನಿ ಸ್ವಾಮೀಜಿ, ದಾನಪ್ಪ ಹುಲಜತ್ತಿ, ಶೇಖರ ಮಾಲಾಪುರ, ಜಗದೀಶಯ್ಯ ಹಿರೇಮಠ, ಕೊಕಟನೂರ, ಶಶಿಕಾಂತ ಹುನ್ನೂರ, ಬಸವರಾಜ ಬೆಳಗಲಿ, ಶ್ರೀಶೈಲ ಮಠಪತಿ, ಬಸು ಚರ್ಕಿ, ನಿಂಗಯ್ಯ ಮುಧೋಳಮಠ ಸೇರಿದಂತೆ ಅನೇಕರಿದ್ದರು.

# ಡಿಸೆಂಬರ್. 22 ರಂದು ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನ ಶತಮಾನೋತ್ಸವ ಸಂಭ್ರಮ

ಬೆಳಗಾವಿ : ಮಹಾತ್ಮಾ ಗಾಂಧಿಜಿಯವರ ಅಧ್ಯಕ್ಷತೆಯ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನ ಶತಮಾನೋತ್ಸವ ಸಂಭ್ರಮವನ್ನು ನಗರದ ಕನ್ನಡ ಭವನದಲ್ಲಿ ಡಿ. 22 (ರವಿವಾರ) ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ವರೆಗೆ ಹಮ್ಮಿಕೊಳ್ಳಲಾಗಿದೆ.

ಕಾನೂನು ಮತ್ತು ಪ್ರವಾಸೋದ್ಯಮ ಸಚಿವರಾದ ಎಚ್.ಕೆ.ಪಾಟೀಲ ಅವರು 10.30ಕ್ಕೆ. ಉದ್ಘಾಟಿಸಲಿದ್ದಾರೆ, ನಿವೃತ್ತ ಅಧೀಕ್ಷಕ ಅಭಿಯಂತರಾದ ರಮೇಶ ಜಂಗಲ್ ಅವರು ಅಧ್ಯಕ್ಷತೆ ವಹಿಸುವರು, ಗದಗ ಎಡೆಯೂರು ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠದ ಪೂಜ್ಯ ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸುವರು.

ಮಾಜಿ ಮುಖ್ಯಸಚೇತಕರು, ಕೆ.ಎಲ್.ಇ ಸಂಸ್ಥೆಯ ನಿರ್ದೇಶಕರಾದ ಮಹಾಂತೇಶ ಕವಟಗಿಮಠ ಅವರು ಮುಖ್ಯ ಅತಿಥಿಗಳಾಗಿ ಆಗಮಿಸುವರು.

ಮಧ್ಯಾಹ್ನ 12 ಗಂಟೆಗೆ ವಿಚಾರ ಸಂಕಿರಣ ನಡೆಯಲಿದ್ದು, ಸಾಹಿತಿಗಳಾದ ಡಾ. ಬಸವರಾಜ ಜಗಜಂಪಿ ಅವರು ಅಧ್ಯಕ್ಷತೆ ವಹಿಸುವರು. ಸಾಹಿತಿಗಳಾದ ಡಾ. ಪಿ.ಜಿ ಕೆಂಪಣ್ಣವರ (ಬೆಳಗಾವಿ ಅಧಿವೇಶನ ಮತ್ತು ಗಾಂಧೀಜಿ), ಧಾರವಾಡ ರಂಗಕರ್ಮಿಗಳಾದ ಡಾ. ಪ್ರಕಾಶ ಗರುಡ (ಕನ್ನಡ ರಂಗಭೂಮಿಯಲ್ಲಿ ಗಾಂಧೀಜಿ) ಅವರ ವಿಚಾರ ಸಂಕಿರಣ ಹೇಳುವರು.

ಮಧ್ಯಾಹ್ನ 2.30 ಗಂಟೆಗೆ ಸಾಹಿತಿಗಳಾದ ಬಿ.ಎಸ್ ಗವಿಮಠ ಅವರ ಅಧ್ಯಕ್ಷತೆಯಲ್ಲಿ ರಂಗಗೌರವ ಮತ್ತು ಸಮಾರೋಪ ಜರುಗಲಿದೆ.

ವಿಶ್ವಜ್ಯೋತಿ ನಾಟಕ ಮಂಡಳಿಯ ಮಾಲೀಕರಾದ ರಾಜಣ್ಣ ಜೇವರಗಿ, ಸಾಹಿತಿಗಳಾದ ರವಿ ಕೋಟಾರಗಸ್ತಿ, ಬೆಂಗಳೂರು ರಂಗಕರ್ಮಿ ಮತ್ತು ಪ್ರಕಾಶಕರಾದ ಬಿ.ಎಸ್ ವಿದ್ಯಾರಣ್ಯ, ಭಾಗವತರು ಸಂಘಟನೆ ಉಪಾಧ್ಯಕ್ಷರಾದ ಹೆಚ್.ಬಿ. ಚಂದ್ರೇಗೌಡ ಅವರು ಅತಿಥಿಗಳಾಗಿ ಆಗಮಿಸಲಿದ್ದಾರೆ.

ಪ್ರೊ. ಎಂ.ಎಸ್ ಇಂಚಲ, ಎಲ್.ಎಸ್. ಶಾಸ್ತ್ರಿ, ಸುಭಾಷ ಕುಲಕರ್ಣಿ, ಎಂ.ಕೆ ಜೈನಾಪುರ, ವಿ.ಎಸ್. ಬೆಂಬಳಗಿ, ಡಾ. ಎಚ್.ಬಿ. ರಾಜಶೇಖರ, ಅಶೋಕ ಚಂದರಗಿ, ಪಿ.ಬಿ ಯಲಿಗಾರ, ಡಾ. ಎ.ಬಿ ಘಾಟಗೆ, ಡಾ. ಡಿ.ಎಸ್, ಚೌಗಲೆ, ಡಾ.ಗುರುದೇವಿ ಹುಲೆಪ್ಪನವರಮಠ, ಅರವಿಂದ ಕುಲಕರ್ಣಿ, ಶ್ಯಾಮರಾವ ಎನ್. ಕಿತ್ತೂರ, ಯ.ರು. ಪಾಟೀಲ, ಡಾ. ಇಂಗಳಗಿ, ಡಾ. ದಯಾನಂದ ನೂಲಿ, ಎಂ.ಬಿ. ಝಿರಲಿ, ಶಿವಾಜಿರಾವ ಕಾಗಣೀಕರ, ಡಾ. ಶ್ರೀಧರ ಹುಕ್ಕೇರಿ, ರಾಮಣ್ಣ ಮುಳ್ಳೂರ, ಬಸವರಾಜ ಬಾವಲತ್ತಿ, ಎಂ.ಡಿ. ಪಾಟೀಲ, ಸ,ರಾ. ಸುಳಕೂಡೆ, ಮುರುಗೇಶ ಶಿವಪೂಜಿಮಠ, ರವಿ ಆಚಾರ್ಯ, ಜಗದೀಶ ಹೊಸಮನಿ, ಬಿ.ಕೆ. ಕುಲಕರ್ಣಿ, ಮಧುಕರ ಗುಂಡೇನಟ್ಟಿ, ಬಿ.ಎನ್. ನಾಡಗೌಡ, ಆರ್.ಬಿ. ದಾಮಣ್ಣನವರ, ಎಂ.ಬಿ ಕುಲಕರ್ಣಿ, ಕೆ.ಎಫ್. ಚವರದ, ಬಿ.ಆರ್. ಸಿಂಗಾಯಿ, ಆರ್.ಎಸ್. ಪಾಟೀಲ, ಪ್ರಕಾಶ ಗಿರಿಮಲ್ಲನವರ, ಡಿ.ಕೆ ನಿಂಬಾಳ, ಜಿ.ಕೆ ಕುಲಕರ್ಣಿ, ಎ.ಎ. ಸನದಿ, ಶ್ವೇತಾ ನರಗುಂದ, ಸರ್ವಮಂಗಳಾ ಅರಳಿಮಟ್ಟಿ, ಸಿ.ಕೆ ಜೋರಪುರ, ಪ್ರೇಮಕ್ಕ ಅಂಗಡಿ, ಸುಮಾ ಕಾಟ್ಕರ್, ರಾಯನಗೌಡ ಪಾಟೀಲ, ಹೇಮಾವತಿ ಸೊನೊಳ್ಳಿ, ಜ್ಯೋತಿ ಬದಾಮಿ, ಡಾ. ವೈ.ಬಿ. ಹಿಮ್ಮಡಿ, ಡಾ. ಕೆ.ಎನ್. ದೊಡಮನಿ, ಡಾ ಎಚ್.ಐ ತಿಮ್ಮಾಪುರ, ಅನಂತ ಪಪ್ಪು, ಇಂದಿರಾ ಮೋಟೆಬೆನ್ನೂರು, ಬಾಳು ಸದಲಗೆ, ಮೋಹನ ಗುಂಡ್ಲೂರ, ಶಿವಪ್ಪ ದಳವಾಯಿ, ಆರ್.ಬಿ. ಕಟ್ಟಿ ನಿರ್ಮಲಾ ಬಟ್ಟಲ ಅವರುಗಳು ವಿಶೇಷ ಆಹ್ವಾನಿತರಾಗಿ ಆಗಮಿಸಲಿದ್ದಾರೆ ಎಂದು ರಂಗಸೃಷ್ಟಿ ಅಧ್ಯಕ್ಷರಾದ ರಮೇಶ ಜಂಗಲ್, ಬೆಂಗಳೂರು ಭಾಗವತರು ಅಧ್ಯಕ್ಷರು ಹಾಗೂ ಕನ್ನಡ ಭವನ ಕ್ಷೇಮಾಭಿವೃದ್ಧಿ ಸಂಘ ಸರ್ವಸದಸ್ಯರಾದ ಕೆ. ರೇವಣ್ಣ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಡಿ.23 ರಂದು ಸಮುದಾಯ ಭವನ ಉದ್ಘಾಟನೆ

**ಜಿ.ಪಿ. ಘೋರ್ಪಡೆ**

ತಾಳಿಕೋಟೆ, ತಾಳಿಕೋಟೆ ಪಟ್ಟಣದಲ್ಲಿಯ ಶ್ರೀ ವಿರಕ್ತಮಠ ಟ್ರಸ್ಟ ಕಮಿಟಿ ಅಪೇಕ್ಷಿತ ಬಹುದಿನಗಳ ಬೇಡಿಕೆಯಾದ ಶ್ರೀ ಖಾಸ್ಗತೇಶ್ವರ ಸಮುದಾಯ ಭವನವು ನಿರ್ಮಾಣಗೊಂಡಿದ್ದು ಇದೇ ಡಿಸೇಂಬರ್ 23 ರಂದು ಉದ್ಘಾಟನೆಗೆ ಸಜ್ಜಾಗಿ ನಿಂತಿದೆ.

ಈ ಸಮುದಾಯ ಭವನ ನಿರ್ಮಾಣ–ಕ್ಕಾಗಿ ಸರ್ಕಾರದಿಂದ 2 ಕೋಟಿ ರೂ. ಅನುದಾನ ದೊರಕಿದ್ದು ಇನ್ನೂ 2 ಕೋಟಿ ರೂ. ವಿರಕ್ತಮಠ ಟ್ರಸ್ಟ ವತಿಯಿಂದ ಖರ್ಚು ಮಾಡಲಾಗಿದ್ದು ಒಟ್ಟು 4 ಕೋಟಿ ರೂ. ಈ ಸಮುದಾಯ ಭವನ ನಿರ್ಮಾಣ–ಕ್ಕೆ ವೆಚ್ಚ ತಗುಲಿದೆ ಎಂದು ಶ್ರೀಖಾಸ್ಗತೇಶ್ವರ ಮಠದ ಉಸ್ತುವಾರಿ ವೇ.ಮುರುಘೇಶ ವಿರಕ್ತಮಠ ಅವರು ತಿಳಿಸಿದ್ದಾರೆ.

ಶ್ರೀ ವಿರಕ್ತಮಠ ಟ್ರಸ್ಟ ಅಧ್ಯಕ್ಷರಾದ ಶ್ರೀ ಖಾಸ್ಗತೇಶ್ವರ ಮಠದ ಪೀಠಾಧಿಪತಿ ಶ್ರೀ ಸಿದ್ದಲಿಂಗ ದೇವರು ಸಮಸ್ತ ಭಕ್ತಾಧಿಗಳ ಸೇವಾ ಕಾರ್ಯಕ್ಕೆ ಮುಂದಾಗಿದ್ದು ಈ ಭವನದಲ್ಲಿ ವಿವಿಧ ಕಾರ್ಯಕ್ರಮಗಳನ್ನು ನಡೆಸಲು ಅನುವು ಮಾಡಿಕೊಟ್ಟಂತಾಗಿದೆ.

ಒಟ್ಟು 44 ಸಾವಿರ ಸ್ಕ್ವಾಯಿರ್ ಪೂಟ್‌ಗಳ ಜಾಗೆಯಲ್ಲಿ ನಿರ್ಮಾಣಗೊಂಡ ಈ ಸಮುದಾಯ ಭವನದ ಜಾಗೆಯಲ್ಲಿಯ ಒಳ ಆವರಣದಲ್ಲಿ 130><70 ಅಡಿಗಳ ಉದ್ದಗಲತೆ ಉಳ್ಳ ಸಭಾ ಭವನ ನಿರ್ಮಾಣಗೊಂಡಿದೆ ಈ ಭವನದ ಎಡಬದಿಯಲ್ಲಿ ಮಹಿಳೆಯರಿಗೆ ಊಟಕ್ಕಾಗಿ 100><30 ಅಡಿಗಳ ಉದ್ದಗಲೆಯುಳ್ಳ ಹಾಲ್‌ನ್ನು ಹಾಗೂ ಭಲಭಾಗದಲ್ಲಿ ಪುರುಷರಿಗಾಗಿಯೂ 100><30 ಅಡಿಗಳ ಉದ್ದಗಲತೆ ಉಳ್ಳ ಹಾಲ್‌ನ್ನು ನಿರ್ಮಿಸಲಾಗಿದೆ.

ಈ ಸಭಾಭವನದ ಒಳಭಾಗದ ಎಡಬಲದಲ್ಲಿ ಸ್ಟೀಲ್ ಗ್ರೀಲ್ ನಿರ್ಮಿಸಲಾಗಿದ್ದು ಸಭಾಭವನದ ಒಳ ಆವರಣ ಹಾಗೂ ಎಡಭಲ ಜಾಗೆಯಲ್ಲಿ ಪ್ಲೋರಿಂಗ್ ಕಾರ್ಯವನ್ನು ಮಾಡಲಾಗಿದೆ. ಅಡುಗೆ ಮನೆಗಾಗಿ 100><26 ಅಡಿಗಳ ಉದ್ದಗಲತೆ ಉಳ್ಳ ಅಡುಗೆ ಮನೆ



ನಿರ್ಮಾಣಗೊಂಡಿದೆ. ಈ ಮನೆಯಲ್ಲಿಯೇ ಗ್ಯಾಸ್ ವ್ಯವಸ್ಥೆಗಾಗಿ ಅಲ್ಲಲ್ಲಿ ಸಿಲಿಂಡಿರ್‌ಗಳ ಜೋಡಣೆಗೆ ಬರುವಂತಹ ಗ್ಯಾಸ್ ಪೈಪುಗಳನ್ನು ಹಾಕಿ ಅಗತ್ಯ ಸ್ಥಳಗಳಲ್ಲಿ ಪಾಯಿಂಟ್‌ಗಳನ್ನು ಹಾಗೂ ಒಲೆಗಳಿಗೆ ಗ್ಯಾಸ್ ಜೋಡಣೆಗಾಗಿ ಅವಕಾಶ ಕಲ್ಪಿಸಲಾಗಿದೆ.

ಇದು ಅಲ್ಲದೇ ವ್ಹಿ.ಆಯ್.ಪಿ. ಅಧಿಕಾರಿ ವರ್ಗದವರಾಗಲಿ, ಶಾಸಕ, ಸಚಿವರಾಗಲಿ ಬರು ಹೋಗುವವ ಕುರಿತು 50><40 ಅಡಿಗಳ ಉದ್ದಗಲತೆ ಉಳ್ಳ ಸುಸರ್ಜಿತವಾದ ಸುಂದರ ಹಾಲ್‌ನ್ನು ನಿರ್ಮಾಣ ಮಾಡಲಾಗಿದ್ದು ಬರುವ ಅತಿಥಿ ಮಹೋದಯ–ರಿಗೆ ಆಸನಗಳ ವ್ಯವಸ್ಥೆ ಕೂಡಾ ಮಾಡಲಾಗಿದೆ.

ಮಹಿಳೆಯರಿಗಾಗಿ 10ಶೌಚಾಲಯಗಳು ಹಾಗೂ 10 ಜಳಕದ ಕೋಣೆಗಳನ್ನು ಅದರಂತೆ ಪುರುಷ–ರಿಗಾಗಿಯೂ 10ಶೌಚಾಲಯಗಳನ್ನು ಹಾಗೂ 10 ಜಳಕದ ಕೋಣೆಗಳನ್ನು ನಿರ್ಮಿಸಲಾಗಿದ್ದು ದೊಡ್ಡ ದೊಡ್ಡ ಏರ್ ಪ್ಯಾನ್‌ಗಳು ಹಾಗೂ 1000 ಕ್ಕೂ ಮೇಲ್ಪಟ್ಟು ಆಸನಗಳ ವ್ಯವಸ್ಥೆ ಮಾಡಲಾಗಿದೆ. ಮೇಲೆ ಕುಳಿತು ನೋಡುವ ಇಚ್ಚಿತರಿಗಾಗಿ ಬಾಲ್ಕನಿ ವ್ಯವಸ್ಥೆ ಕೂಡಾ ಮಾಡಲಾಗಿದ್ದು ಕಾರ್ಯಕ್ರಮ ನಡೆಯುವ ಸುಸರ್ಜಿತ ವೇದಿಕೆಯು ಕೈಮಾಡಿ ಕರೆಯುವಂತೆ ನಿರ್ಮಾಣ ಗೊಂಡಿದೆ.

ಇದು ಅಲ್ಲದೇ ವಿವಿಧ ಪೂಜಾ ಪುನಃಸ್ಕಾರಕ್ಕಾಗಿಯೇ ಈ ಸಮುದಾಯ ಭವನದ ಮುಂಭಾಗದ ಬೃಹತ್ ಆಕಾರದ ಜಾಗೆಯ ಭಲಭಾಗದಲ್ಲಿ ಶ್ರೀ ಶಿವ ಬಸವ ಮಹಾ ಸ್ವಾಮಿಗಳ ಹೆಸರಿನ ಮಂದಿರವನ್ನು ಕಟ್ಟಲಾಗಿದ್ದು ಅದೂ ಕೂಡಾ ಮುಕ್ತಾಯಗೊಂಡಿದೆ ಈ ಸ್ಥಳದಲ್ಲಿ ಪೂಜೆ ಪುನಃಸ್ಕಾರಗಳು ನೆರವೇರಲಿವೆ ಅಲ್ಲದೇ ಸಮುದಾಯ ಭವನದ ಬೃಹತ್ ಆಕಾರದ ಸ್ಥಳಗಳಲ್ಲಿ ಸಾವಿರಾರು ಕಾರು ಪಾರ್ಕಿಂಗ್ ಮಾಡುವಂತಹ ವಾಹನಗಳ ನಿಲುಗಡೆಗೂ ವ್ಯವಸ್ಥೆ ಕೂಡಾ ಕಲ್ಪಿಸಲಾಗಿದ್ದು ಬರು ಹೋಗುವವರಿಗೆ ಕುಡಿಯುವ ನೀರಿನ ನಳಗಳ ಜೋಡಣೆಯೂ ಕೂಡಾ ಪೂರ್ಣಗೊಂಡಿದೆ.

ಈ ಸಮುದಾಯ ಭವನದ ಉದ್ಘಾಟನೆಯು ಇದೇ ಡಿಸೇಂಬರ್ 23 ರಂದು ನೆರವೇರಲಿದ್ದು ಈ ಉದ್ಘಾಟನಾ ಕಾರ್ಯಕ್ರಮದ ದಿನದಂದು ಶ್ರೀ ಖಾಸ್ಗತೇಶ್ವರ ಮಠದ ಪೀಠಾಧಿಪತಿಗಳಾದ ಬಾಲ ಶಿವಯೋಗಿ ಶ್ರೀ ಸಿದ್ದಲಿಂಗ ದೇವರು ಅವರ ಆದೇಶದಂತೆ ಸಾಮೂಹಿಕ ವಿವಾಹಗಳನ್ನು ಏರ್ಪಡಿಸಲಾಗಿದೆ.

ಈ ಸಮಾರಂಭದ ದಿವ್ಯ ಸಾನಿದ್ಯವನ್ನು ಇಂಗಳೇಶ್ವರ ವಚನಶೀಲಾ ಮಂಟಪದ ಶ್ರೀ ಚನ್ನಬಸವ ಮಹಾಸ್ವಾಮಿಗಳು, ಯರನಾಳ ವಿರಕ್ತಮಠದ ಶ್ರೀ ಸಂಗನಬಸವ ಮಹಾಸ್ವಾಮಿಗಳು, ಅಫಜಲಪೂರ ಹಿರೇಮಠದ ಶ್ರೀ ವಿಶ್ವರಾದ್ಯ ಮಳೇಂದ್ರ ಶಿವಾಚಾರ್ಯರು, ಕೊಡೇಕಲ್ಲ ದುರದುಂಡೇಶ್ವರ ಮಠದ ಶ್ರೀ ಶಿವಕುಮಾರ ಮಹಾಸ್ವಾಮಿಗಳು ಹಾಗೂ ಆಸಂಗಿಯ ಪೂಜ್ಯ ಶ್ರೀ ವಿರಬಸವ ಮಹಾಸ್ವಾಮಿಗಳು ವಹಿಸುವರು.

ಮುಖ್ಯ ಅತಿಥಿಗಳಾಗಿ ಕರ್ನಾಟಕ ಸರ್ಕಾರದ ಸಣ್ಣ ಕೈಗಾರಿಕಾ ಸಚಿವರಾದ ಶರಣಬಸಪ್ಪ ದರ್ಶನಾಪೂರ, ಜವಳಿ ಮತ್ತು ಕಬ್ಬು ಅಭಿವೃದ್ದಿ ಮತ್ತು ಸಕ್ಕರೆ, ಕೃಷಿ ಉತ್ಪನ್ನ ಮಾರುಕಟ್ಟೆ ಸಚಿವರಾದ ಶಿವಾನಂದ ಪಾಟೀಲ, ಕರ್ನಾಟಕ ಸೋಪ ಮತ್ತು ಡಿಟರ್ಜಂಟ್ ನಿ, ಅಧ್ಯಕ್ಷ ಶಾಸಕ ಸಿ.ಎಸ್.ನಾಡಗೌಡ(ಅಪ್ಪಾಜಿ), ದೇವರ ಹಿಪ್ಪರಗಿ ಮತಕ್ಷೇತ್ರದ ಶಾಸಕ ರಾಜುಗೌಡ ಪಾಟೀಲ(ಕುದರಿಸಾಲವಾಡಗಿ), ಮಾಜಿ ಶಾಸಕ ಎ. ಎಸ್.ಪಾಟೀಲ(ನಡಹಳ್ಳಿ), ಅವರು ಆಗಮಿಸುವರು.

ಈ ಸಮಾರಂಭದಲ್ಲಿ ಜರುಗಲಿರುವ ಸಾಮೂಹಿಕ ವಿವಾಹದ ಸಂಪೂರ್ಣ ಸೇವಾ ಕಾರ್ಯವನ್ನು ಢವಳಗಿಯ ಗಣ್ಯ ಉದ್ಯಮಿದಾರರಾದ ಸಿದ್ದನಗೌಡ ಬಸವಂತ್ರಾಯಗೌಡ ಬಿರಾದಾರ ಅವರು ಕೈಕೊಳ್ಳಲಿದ್ದಾರೆಂದು ಶ್ರೀ ಖಾಸ್ಗತೇಶ್ವರ ಮಠದ ಉಸ್ತುವಾರಿ ವೇ.ಮುರುಘೇಶ ವಿರಕ್ತಮಠ ಅವರು ತಿಳಿಸಿದ್ದಾರೆ. ---

> **ಇದೇ ದಿ. 24 ರಿಂದ 26ವರೆಗೆ ಈಶಾವಾಷೋ ಉಪನಿಷತ್ ಆದ್ಯಾತ್ಮೀಕ ಪ್ರವಚನ**
> ತಾಳಿಕೋಟೆ, ಪಟ್ಟಣದ ಶ್ರೀ ಖಾಸ್ಗತೇಶ್ವರ ಶಿವಯೋಗಿಗಳ ನೂತನವಾಗಿ ನಿರ್ಮಾಣಗೊಂಡ ಸಮುದಾಯ ಭವನದಲ್ಲಿ ಇದೇ ದಿ.24 ರಿಂದ 26ರವರೆಗೆ ಈಶಾವಾಷೋ ಉಪನಿಷತ್ ಎಂಬ ಆದ್ಯಾತ್ಮೀಕ ಪ್ರವಚನವು ನಡೆಯಲಿದ್ದು ಪ್ರತಿದಿನ ಬೆಳಿಗ್ಗೆ 6–30 ಗಂಟೆಯಿಂದ 7–15 ಗಂಟೆಯವರೆಗೆ 45 ನಿಮಿಷ ಈ ಪ್ರವಚನ ಜರುಗುವದು.
> 3 ದಿನಗಳ ಕಾಲಾವದಿಯಲ್ಲಿ ಜರುಗಲಿರುವ ಈ ಪ್ರವಚನವನ್ನು ಶ್ರೀ ಖಾಸ್ಗತೇಶ್ವರ ಮಠದ ಪೀಠಾಧಿಪತಿಗಳಾದ ಶ್ರೀ ಸಿದ್ದಲಿಂಗ ದೇವರು ಇಡೀ ಭಕ್ತ ಸಮೂಹಕ್ಕೆ ಉಣಬಡಿಸಲಿದ್ದಾರೆ.
> ಈ ಪ್ರವಚನದಲ್ಲಿ ಮುಖ್ಯವಾಗಿ ದೇವನು ನಿರ್ಮಾಣ ಮಾಡಿದ ಸೃಷ್ಟಿಯ ಕುರಿತು ಹಾಗೂ ಈ ಉಪನಿಷತ್‌ದಲ್ಲಿಯ 18 ಶ್ಲೋಕ್‌ಗಳ ಕುರಿತು ಇಡೀ ಭಕ್ತ ಸಮೂಹಕ್ಕೆ ಶ್ರೀಗಳು ವಿವರಿಸಿ ಆದ್ಯಾತ್ಮದ ರಸದೌತಣವನ್ನು ಉಣಬಡಿಸಲಿದ್ದಾರೆಂದು ಶ್ರೀ ಮಠದ ಮೂಲಗಳು ತಿಳಿಸಿವೆ.

## ವಿಕಲಚೇತನರ ಕ್ರೀಡಾಕೂಟ, ಗುಂಡು ಎಸೆಯುವ ಮೂಲಕ ಚಾಲನೆ



ಮುದ್ದೇಬಿಹಾಳ: ವಿಕಲಚೇತನರನ್ನು ವಿಶ್ವಚೇತನರು ಎಂದು ಕರೆಯಬೇಕು. ಸಾಮಾನ್ಯ ಜನರಿಗಿಂತ ಅವರು ವಿಶೇಷವಾಗಿದ್ದು ಅವರಲ್ಲಿ ವಿಶೇಷ ಪ್ರತಿಭೆ ಇರುತ್ತದೆ. ಅದನ್ನು ಹೊರತರುವ ಕೆಲಸವನ್ನು ಎಲ್ಲರೂ ಮಾಡಬೇಕು. ಇವರು ಪ್ಯಾರಾಲಿಂಪಿಕ್ ಕ್ರೀಡಾಕೂಟದ ಸದುಪಯೋಗ ಮಾಡಿಕೊಳ್ಳಬೇಕು. ಇವ–ರಿಗೆ ಅನುಕಂಪದ ಬದಲು ಅವಕಾಶ, ಸೌಲಭ್ಯ ಸಿಗಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಎಸ್.ಸಾವಳಗಿ ಹೇಳಿದರು.

ವಿಶ್ವ ವಿಕಲಚೇತನರ ದಿನಾಚರಣೆ ಅಂಗವಾಗಿ ಇಲ್ಲಿನ ವಿಬಿಸಿ ಪ್ರೌಢಶಾಲೆ ಮೈದಾನದಲ್ಲಿ ಸೋಮವಾರ ಸರ್ಕಾರಿ ಇಲಾಖೆಗಳು, ವಿಕಲಚೇತನರ ಸಂಘಟನೆಗಳ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಿದ್ದ 2024–25ನೇ ಸಾಲಿನ ಮುದ್ದೇಬಿಹಾಳ ತಾಲೂಕು ಮಟ್ಟದ ವಿಕಲಚೇತನರ ಕ್ರೀಡಾಕೂಟವನ್ನು ಕ್ರೀಡಾಧ್ವಜಾರೋಹಣ ಮಾಡಿ, ಗುಂಡು ಎಸೆಯುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ಮುಖ್ಯ ಅತಿಥಿಯಾಗಿದ್ದ ಚಿಂತಕ ಅರವಿಂದ ಕೊಪ್ಪ ಅವರು ಮಾತನಾಡಿ, ಅವಕಾಶಗಳ ಕೊರತೆಯ ನಡುವೆಯೂ ದಿವ್ಯಾಂಗರು ತಮ್ಮ ಸಾಮಥ–ರ್ಯ ಅನಾವರಣಗೊಳಿಸುತ್ತಿರುವುದು ಹೆಮ್ಮೆಯ ಸಂಗತಿ. ಪ್ಯಾರಾಲಿಂಪಿಕ್‌ನಲ್ಲಿ ಸಾಧಿಸಿದವರ ಯಶೋಗಾಥೆ ಎಲ್ಲರಿಗೂ ಸ್ಫೂರ್ತಿಯಾಗಿರಬೇಕು. ದಿವ್ಯಾಂಗರ ಕಾರ್ಯಕ್ರಮಗಳಲ್ಲಿ ತಾಲೂಕಾಡಳಿತ, ಜನಪ್ರತಿನಿಧಿಗಳು ಭಾಗಿಯಾಗದೆ ನಿರ್ಲಕ್ಷ್ಯ ತೋರುತ್ತಿರುವುದು ನೋವಿನ ಸಂಗತಿ. ಸರ್ವಾಂಗರು ದಿವ್ಯಾಂಗರ ಸೇವೆಯ ಜೊತೆಗೆ ಪ್ರೋತ್ಸಾಹ ನೀಡುವ ಮನೋಭಾವ ರೂಢಿಸಿಕೊಳ್ಳಬೇಕು ಎಂದರು.

ಪುರಸಭೆ ಅಧ್ಯಕ್ಷ ಮಹಿಬೂಬ ಗೊಳಸಂಗಿ ಅಧ್ಯಕ್ಷತೆ ವಹಿಸಿದ್ದರು. ಪುರಸಭೆ ಉಪಾಧ್ಯಕ್ಷೆ ಪ್ರೀತಿ ದೇಗಿನಾಳ, ದೈಹಿಕ ಶಿಕ್ಷಣ ಪರಿವೀಕ್ಷಕ ಬಿ.ವೈ.ಕವಡಿ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಣಿ ಅನುಸೂಯಾ ತೇರದಾಳ, ಯುವ ಸಂಘಟನೆಗಳ ಒಕ್ಕೂಟದ ಜಿಲ್ಲಾಧ್ಯಕ್ಷ ಪುಂಡಲೀಕ ಮುರಾಳ, ವಿಕಲಚೇತನರ ಒಕ್ಕೂಟದ ಜಿಲ್ಲಾಧ್ಯಕ್ಷ ಎಸ್.ಕೆ.ಘಾಟಿ, ಒಕ್ಕೂಟದ ಪದಾಧಿಕಾರಿಗಳಾದ ಸಂಗಣ್ಣ ಹುಣಶ್ಯಾಳ, ಅಡಿವೆಪ್ಪ ಕೊಡಗಾನೂರ, ನಗರ ಘಟಕ ಅಧ್ಯಕ್ಷ ನಾಗೇಶ ಅಮರಾವತಿ, ತಾಲೂಕಿನ ವಿವಿಧೆಡೆಯಿಂದ ಆಗಮಿಸಿದ್ದ ದಿವ್ಯಾಂಗರು ಪಾಲ್ಗೊಂಡಿದ್ದರು.

ಈರಣ್ಣ ಬಿಜ್ಜೂರ ಪ್ರಾರ್ಥಿಸಿದರು. ರುದ್ರಗೌಡ ಗೌಡರ ಸ್ವಾಗತಿನಿ ನಿರೂಪಿಸಿದರು. ಈರಯ್ಯ ಹಿರೇಮಠ ವಂದಿಸಿದರು. ಉದ್ಘಾಟನಾ ಸಮಾರಂಭದ ನಂತರ ನಡೆದ ಕ್ರೀಡಾಕೂಟದಲ್ಲಿ ಗುಂಡು ಎಸೆತ, ಓಟ, ಹಾಡು, ಮ್ಯೂಜಿ–ಕಲ್ ಚೇರ್ ಸೇರಿ ವಿವಿಧ ಸ್ಪರ್ಧೆ ನಡೆಸಲಾಯಿತು. ವಿವಿಧ ಶಾಲೆಗಳ ದೈಹಿಕ ಶಿಕ್ಷಕರಾದ ಚಂದ್ರಕಾಂತ ಮನಗೂಳಿ, ಶೇಖರ ಲಮಾಣಿ, ಗುರುಪಾದಯ್ಯ ಸಾಲಿಮಠ, ಶರಣು ಇದ್ದಲಗಿ, ಬಸವರಾಜ ರಾಮವಾಡಗಿ ಇನ್ನಿತರರು ತೀರ್ಪುಗಾರರಾಗಿ ಭಾಗವಹಿಸಿದ್ದರು.

# ಅಪ್ರಾಪ್ತ ವಯಸ್ಸಿನ ಬಾಲಕಿಗೆ ಅತ್ಯಾಚಾರ ಎಸಗಿದ ಆರೋಪಿಗೆ ಶಿಕ್ಷೆ

ಕೊಪ್ಪಳ : ಅಪ್ರಾಪ್ತ ವಯಸ್ಸಿನ ಬಾಲಕಿಂ–ಯನ್ನು ಅಪಹರಿಸಿ ಅತ್ಯಾಚಾರ ಎಸಗಿದ ಶೌಕತ್‌ಅಲಿ ಗುಡ್ಡದಬಾವಿ ಸಾ: ಕುಷ್ಟಗಿ ಇತನ ಮೇಲಿನ ಆರೋಪ ಸಾಭಿತಾಗಿದೆ ಎಂದು ಕೊಪ್ಪಳ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ಹಾಗೂ ತ್ವರಿತ ವಿಲೇವಾರಿ ನ್ಯಾಯಾಲಯ [ಪೋಕ್ಸೊ] ಕೊಪ್ಪಳ ರವರು ಆರೋಪಿಗೆ ಶಿಕ್ಷೆ ವಿಧಿಸಿರುತ್ತಾರೆ.

ಕುಷ್ಟಗಿ ಪೊಲೀಸ್ ಠಾಣೆ ವ್ಯಾಪ್ತಿಯ ಕುಷ್ಟಗಿ ಪಟ್ಟಣ ನಿವಾಸಿ ಶೌಕತ್‌ಅಲಿ ಗುಡ್ಡದಬಾವಿ ಇತನು ಅಪ್ರಾಪ್ತ ವಯಸ್ಸಿನ ಬಾಧಿತಳಿಗೆ ಪರಿಚಯ ಮಾಡಿಕೊಂಡು ಪ್ರೀತಿಸಿ ಮದುವೆಯಾಗುವುದಾಗಿ ನಂಬಿಸಿದ್ದರಿಂದ ಬಾಧಿತಳು ಅವನೊಂದಿಗೆ ಸಲುಗೆಯಿಂದ ಮಾತನಾಡುತ್ತಿದ್ದು 2023ರ ಏಪ್ರಿಲ್ 3ರಂದು ಬಾಧೀತಳು ಟ್ಯೂಶನ್ ಮುಗಿಸಿಕೊಂಡು ಮನೆಗೆ ಬರುತ್ತಿದ್ದಾಗ ಮಶೀದಿ ಹತ್ತಿರ ಎಲ್ಲಿಯಾದರೂ ಹೋಗಿ ಮದುವೆಯಾಗೋಣ ಎಂದು ಹೇಳಿ ತನ್ನ ಸಂಬಂಧಿಕರ ಮನೆಗೆ ಕರೆದುಕೊಂಡು ಹೋಗಿ ಅದೇ ದಿನ ಸಂಬಂಧಿಕರ ಮನೆಯಲ್ಲಿ ರಾತ್ರಿ ಊಟ ಮಾಡಿ ಮಲಗಿದ ನಂತರ ಬಾಧಿತಳಿಗೆ ಆರೋಪಿತನು ಬಲವಂತವಾಗಿ ಅತ್ಯಾಚಾರ ಮಾಡಿದ್ದಾನೆ. ಮರುದಿನ ಕೂಡ ಅತ್ಯಾಚಾರ ಮಾಡಿರುವ ಆರೋಪದ ಹಿನ್ನೆಲೆಯಲ್ಲಿ ಕುಷ್ಟಗಿ ಪೋಲಿಸ ಠಾಣೆಯ ಪಿ.ಎಸ್.ಐ ಚಂದ್ರಶೇಖರ ಅವರು ದೂರು ಸ್ವೀಕರಿಸಿದ್ದರು. ಪ್ರಕರಣದ ತನಿಖೆಯನ್ನು ಸಿಪಿಐ ನಿಂಗಪ್ಪ ಅವರು ನಿರ್ವಹಿಸಿದ್ದು, ತನಿಖೆಯಲ್ಲಿ ಆರೋಪಿತನ ಮೇಲಿನ ಆರೋಪಣೆಗಳು ಮೇಲ್ನೋಟಕ್ಕೆ ಸಾಭಿತಾಗಿದ್ದರಿಂದ ಆರೋಪಿತನ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು.

ಈ ಪ್ರಕರಣವು ಸ್ಪೇ.ಎಸ್‌ಸಿ[ಪೋಕ್ಸೊ] ಸಂ: 30/2023ರಲ್ಲಿ ದಾಖಲಾಗಿದ್ದು, ವಿಚಾರಣೆಯನ್ನು ನಡೆಸಿದ ನ್ಯಾಯಾಲಯ ಆರೋಪಿ ಶೌಕತ್‌ಅಲಿ ಗುಡ್ಡದಬಾವಿ ಸಾ: ಕುಷ್ಟಗಿ ಇತನ ಮೇಲಿನ ಆರೋಪಣೆಗಳು ಸಾಭೀತಾಗಿವೆ ಎಂದು 20 ವರ್ಷಗಳ ಜೈಲು ಶಿಕ್ಷೆ ಹಾಗೂ ರೂ. 30,000 ಗಳ ದಂಡವನ್ನು ಭರಿಸುವಂತೆ ಆದೇಶಿಸಿ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ಹಾಗೂ ತ್ವರಿತ ವಿಲೇವಾರಿ[ಪೋಕ್ಸೊ] ನ್ಯಾಯಾಧೀಶರಾದ ಕುಮಾರ ಡಿ.ಕೆ ಅವರು 2024ರ ಡಿಸೆಂಬರ್ 5ರಂದು ತೀರ್ಪು ಹೊರಡಿಸಿರುತ್ತಾರೆ.

ಸರ್ಕಾರದ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕಿ ಗೌರಮ್ಮ ದೇಸಾಯಿ ಅವರು ಈ ಪ್ರಕರಣ ನಡೆಸಿ ವಾದ ಮಂಡಿಸಿದ್ದರು. ಕುಕನೂರ ಪೊಲೀಸ್ ಠಾಣೆಯ ಸಿಬ್ಬಂದಿ ಹನುಮೇಶ ಜಗ್ಗಲ್ ಅವರು ಸಾಕ್ಷಿದಾರರನ್ನು ನ್ಯಾಯಾಲಯಕ್ಕೆ ಸಕಾಲಕ್ಕೆ ಹಾಜರಪಡಿಸುವಲ್ಲಿ ಸಾಕಷ್ಟು ಸಹಕರಿಸಿರುತ್ತಾರೆ ಎಂದು ಕೊಪ್ಪಳ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯದ ವಿಶೇಷ ಸರ್ಕಾರಿ ಅಭಿಯೋಜಕರ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.

# ಜನಸಾಮಾನ್ಯರಿಗೆ ಕಾನೂನು ಅರಿವು ಅತ್ಯವಶ್ಯಕವಾಗಿದೆ: ನ್ಯಾ. ಚಂದ್ರಶೇಖರ ಸಿ

ಕೊಪ್ಪಳ : ಜನಸಾಮಾನ್ಯರಿಗೆ ಕಾನೂನು ಅರಿವು ಅತ್ಯವಶ್ಯಕವಾಗಿದೆ ಎಂದು ಕೊಪ್ಪಳ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಚಂದ್ರಶೇಖರ ಸಿ ಹೇಳಿದರು.

ಅವರು ಮಂಗಳವಾರ ಕೊಪ್ಪಳ ನಗರಸಭೆ ಹಿಂದುಗಡೆಯ ಕ್ರಿಸ್ತ ಜ್ಯೋತಿ ಚರ್ಚ್‌ನಲ್ಲಿ ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ, ನವ ದೆಹಲಿ, ರಾಷ್ಟ್ರೀಯ ಮಹಿಳಾ ಆಯೋಗ, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಿ, ಕೊಪ್ಪಳ ಇವರ ಸಹಯೋಗದಲ್ಲಿ ಹಮ್ಮಿಕೊಂಡಿದ್ದ "ವಿಧಾನ ಸೆ ಸಮಾಧಾನ" ಎಂಬ ಮಹಿಳೆಯರಿಗಾಗಿ ಕಾನೂನು ಅರಿವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

"ವಿಧಾನ ಸೆ ಸಮಾಧಾನ" ಎಂದರೆ ಕಾನೂನು ಮೂಲಕ ಪರಿಹಾರ ಪಡೆಯುವುದೇ ಆಗಿದೆ. ಈ ಹಿನ್ನೆಲೆಯಲ್ಲಿ



ಎಲ್ಲರಿಗೂ ಕಾನೂನು ಅರಿವು ಮೂಡಿಸಲು ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದಿಂದ ಈ ಕಾರ್ಯಕ್ರಮ ಆಯೋಜಿಸಲಾಗಿದೆ.

ವೈವಾಹಿಕ ಸಂಬಂಧಗಳಲ್ಲಿ ಬರುವ ತೊಂದರೆಗಳು, ಆಸ್ತಿಗೆ ಸಂಬಂಧಿಸಿದ ಪ್ರಕರಣಗಳು, ಜೀವನಾಂಶ ಪ್ರಕರಣಗಳಲ್ಲಿ ಬರುವ ಅಪ್ರಾಪ್ತ ಮಕ್ಕಳನ್ನು ನೋಡಿಕೊಳ್ಳದೆ ಇರುವುದು, ಹೆಂಡತಿ ಮತ್ತು ತಂದೆ ತಾಯಿನ್ನು ನೋಡಿಕೊಳ್ಳದಿದ್ದಾಗ ಯಾವ ರೀತಿ ಕಾನೂನು ನೆರವು ಪಡೆಯಬೇಕು ಎಂಬುವುದರ ಬಗ್ಗೆ ಎಲ್ಲರು ತಿಳಿದುಕೊಂಡಿರಬೇಕು ಎಂದರು.

ಕಾನೂನು ಮೂಲಕ ಜನರ ಕಷ್ಟಗಳನ್ನು, ಸಮಸ್ಯೆಗಳನ್ನು ಬಗೆಹ–ರಿಸುವುದು ಕಾನೂನು ಸೇವಾ ಪ್ರಾಧಿಕಾರದ ಮುಖ್ಯ ಉದ್ದೇಶವಾಗಿದ್ದು, ಜನರಿಗೆ ಕಾನೂನು ಅರಿವು ನೆರವು ನೀಡಲಾಗುತ್ತಿದೆ ಎಂದು ಹೇಳಿದರು.

ಕೊಪ್ಪಳ ತಾಲ್ಲೂಕು ಪಾಸ್ಟರ್ಸ್ ಅಸೋಸಿಯೇಷನ ಅಧ್ಯಕ್ಷರಾದ ರೆವೆರೆಂಡ ಜೆ.ರವಿಕುಮಾರ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಕೌಟುಂಬಿಕ ನ್ಯಾಯಾಲಯದ ನ್ಯಾಯಾಧೀಶರಾದ ಸರಸ್ವತಿದೇವಿ, ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಮಹಾಂತೇಶ ಎಸ್ ದರಗದ, ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಭಾಗ್ಯಲಕ್ಷ್ಮೀ, ಹಿರಿಯ ವಕೀಲರಾದ ಶ್ಯಾಮಸುಂದರ ಹುಣಸಿಮರದ ಅವರು ವಿಶೇಷ ಉಪನ್ಯಾಸ ನೀಡಿದರು.

ಈ ಸಂದರ್ಭದಲ್ಲಿ ಕೊಪ್ಪಳ ಕಲ್ವಾರಿ ಚಾಪಲ ಟ್ರಸ್ಟ್ ಮುಖ್ಯಸ್ಥರಾದ ರೆವೆರೆಂಡ ನವನೀತ ಕುಮಾರ, ಕ್ರಿಸ್ತ ಜ್ಯೋತಿ ಇ ಸಿ ಐ ಚರ್ಚ್‌ನ ಕಾರ್ಯದರ್ಶಿ ಶಾಂತರಾಜ್ ಎಮ್ ಮುರ್ತೋಟಿ ಹಾಗೂ ಚರ್ಚ್‌ನ ಸಿಬ್ಬಂದಿಗಳು ಹಾಗೂ ಮಹಿಳೆಯರು ಶಾಲಾ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಚೂರು–ಪಾರು

### ಯುವಜನರನ್ನು ಸಶಕ್ತಗೊಳಿಸುವ ನಿಟ್ಟಿನಲ್ಲಿ ಪೋಷಕರಿಗೆ ಯುವ ಸ್ಪಂದನ ವಿಶೇಷ ಕಾರ್ಯಾಗಾರ

ಗದಗ : ಯುವ ಸ್ಪಂದನ ಕಾರ್ಯಕ್ರಮವು ಕರ್ನಾಟಕ ಸರ್ಕಾರದ ಮಹಾತ್ವಾಕಾಂಕ್ಷಿ ಕಾರ್ಯಕ್ರಮವಾಗಿದ್ದು, ಯುವಜನ ಸಂಬಂಧಿ ಯಾವುದೇ ಗೊಂದಲಗಳಿಗೆ ಮಾರ್ಗದರ್ಶನ ನೀಡುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಈ ಕಾರ್ಯಕ್ರಮದ ಅಂಗವಾಗಿ ಪೋಷಕರಿಗೆ ಯುವ ಸ್ಪಂದನ ವಿಶೇಷ ಕಾರ್ಯಾಗಾರವನ್ನು ಡಿಸೆಂಬರ್ 29 ರಂದು ಬೆಳಿಗ್ಗೆ 10 ಗಂಟೆಯಿಂದ 1 ಗಂಟೆಯವರೆಗೆ ಯುವ ಸ್ಪಂದನ ಕೇಂದ್ರ, ಒಳಾಂಗಣ ಕ್ರೀಡಾಂಗಣದ ಆವರಣ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಗದಗ ಜಿಲ್ಲೆ, ಇಲ್ಲಿ ನಡೆಸಲು ತೀರ್ಮಾನಿಸಲಾಗಿದೆ.

ಜಿಲ್ಲೆಯ ಎಲ್ಲಾ ಪೋಷಕರು ಸದರಿ ಕಾರ್ಯಾಗಾರದಲ್ಲಿ ಭಾಗವಹಿಸಿ ಪ್ರಯೋಜನ ಪಡೆದುಕೊಳ್ಳಬಹುದಾಗಿದೆ. ಈ ಕಾರ್ಯಾಗಾರದಲ್ಲಿ 10ನೇ ತರಗತಿ ಮತ್ತು 2ನೇ ಪಿ.ಯು.ಸಿಯಲ್ಲಿ ಓದುತ್ತಿರುವ ಯುವಜನರ ಪೋಷಕರಿಗೆ ಆದ್ಯತೆ ನೀಡಲಾಗುವುದು. ಒಂದು ಕಾರ್ಯಾಗಾರದಲ್ಲಿ ಪೋಷಕರಲ್ಲಿ ಒಬ್ಬರಿಗೆ ಮಾತ್ರ ಅವಕಾಶವಿರುತ್ತದೆ. ಈ ಕಾರ್ಯಾಗಾರವನ್ನು ಮಕ್ಕಳ ಪೋಷಣೆ, ಪೋಷಕರ ಆತಂಕ ನಿವಾರಣೆ, ಒತ್ತಡ ನಿರ್ವಹಣೆ, ಮಕ್ಕಳೊಂದಿಗಿನ ಸಂವಹನ ಇತ್ಯಾದಿ ವಿಷಯಗಳ ಬಗ್ಗೆ ಚಟುವಟಿಕೆಗಳ ಮೂಲಕ ಕೈಗೊಳ್ಳಲಾಗುವುದು.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08372–220375, ಮೊಬೈಲ್ ಸಂಖ್ಯೆ 9008343253, 7349223455 ಸಂಪರ್ಕಿಸಬಹುದಾಗಿದೆ ಮೊದಲು ಬಂದ 50 ಜನ ಪಾಲಕರು/ಪೋಷಕರಿಗೆ ಮೊದಲ ಆದ–್ಯತೆ ನೀಡಲಾಗುವುದು. ಕಾರ್ಯಕ್ರಮವು ಸಂಪೂರ್ಣ ಉಚಿತವಾಗಿರುತ್ತದೆ ಎಂದು ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ನೇರ ಸಂದರ್ಶನ

ಗದಗ : ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ, ಗದಗ ವತಿಯಿಂದ ನೇರ ಸಂದರ್ಶನವಿದ್ದು ಡಿಸೆಂಬರ್ 20 ರಂದು ಬೆಳಿಗ್ಗೆ 09–30 ಗಂಟೆಗೆ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ ಎರಡನೆ ಮಹಡಿ ರೂಮ ನಂ 215 ಜಿಲ್ಲಾಡಳಿತ ಭವನ ಹುಬ್ಬಳಿ ರೋಡ ಗದಗ ಇಲ್ಲಿ ನೇರ ಸಂದರ್ಶನ ಹಮ್ಮಿಕೊಳ್ಳಲಾಗಿದೆ. ಸದರಿ ನೇರ ಸಂದರ್ಶನದಲ್ಲಿ ಈ ಕೆಳಗಿನ ಕಂಪನಿಗಳು ಭಾಗವಹಿಸಲಿವೆ.

ಚೈತನ್ಯ ಇಂಡಿಯಾ ಫೈನಾನ್ಸ್ ಕ್ರೆಡಿಟ್ ಪ್ರೈವೇಟ್ ಲಿಮಿಟೆಡ್ , ಬೆಟಗೇರಿ ಗದಗ ವಿದ್ಯಾರ್ಹತೆ : ಎಸ್.ಎಸ್.ಎಲ್.ಸಿ, ಪಿ,ಯು.ಸಿ ( 10+2) ,ಡಿಪ್ಲೋಮೊ ಮತ್ತು ಯಾವುದೆ ಪದವಿ. ಹುದ್ದೆ : ಕಸ್ಟ್ಮರ ರಿಲೇಷನಶಿಪ್ ಆಫೀಸರ. ಕಡ್ಡಾಯವಾಗಿ ದ್ವಿಚಕ್ರ ವಾಹನ ಹೊಂದಿರಬೇಕು. ವಯಸ್ಸು : 18 ರಿಂದ 28. ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಭಾಗವಹಿಸಬಹುದು.

ಜಿಂದಾಲ್ ಸವರಫೀಲ್ಡ್ ಸ್ಟ್ರಕ್ಚರ್ಸ ಲಿಮಿಟೆಡ್ ತೋರನಗಲ್. ವಿದ್ಯಾರ್ಹತೆ : ಐ.ಟಿ.ಐ. ಎಲ್ಲಾ ಟ್ರೇಡಗಳು ಹುದ್ದೆ : ಅಪ್ರೆಂಟಿಸ್ಸ್ ವಯಸ್ಸು : 18 ರಿಂದ 25 ಕೆಲಸದ ಸ್ಥಳ : ತೋರಣಗಲ್ಲ ಬಳ್ಳಾರಿ. ನೇರ ಸಂದರ್ಶನದಲ್ಲಿ ಪಾಲ್ಗೊಳುವ ಅಭ್ಯರ್ಥಿಗಳು ತಮ್ಮ ವಿದ್ಯಾರ್ಹತೆಯ ಅಂಕಪಟ್ಟಿಗಳ ಝೆರಾಕ್ಸ್ ಪ್ರತಿಗಳು, 2 ರೆಸ್ಯೂಮೆ(ಬಯೋಡಾಟಾ)ಪ್ರತಿಗಳು, ಮತ್ತು ಆಧಾರ ಕಾರ್ಡ್ ಝೆರಾಕ್ಸೊಂದಿಗೆ ಭಾಗವಹಿಸಬಹುದು. ನೇರ ಸಂದರ್ಶನದಲ್ಲಿ ಭಾಗವಹಿಸಿದ ಅಭ್ಯರ್ಥಿಗಳಿಗೆ ನೋಂದಣಿ ಕಡ್ಡಾಯವಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಕಚೇರಿ ದೂರವಾಣಿ ಸಂಖ್ಯೆ, 6363330688, ಕ್ಕೆ ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಉದ್ಯೋಗಾಧಿಕಾರಿ ಬಸವಂತ ಪಿ ಎನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ನೇರ ಸಂದರ್ಶನದಲ್ಲಿ ಭಾಗವಹಿಸುವ ಅಭ್ಯರ್ಥಿಗಳು ನೋಂದಣಿಯನ್ನು ನೇರ ಸಂದರ್ಶನದದಿನದಂದೇ ಮಾಡಿಸಬೇಕಾಗಿರುತ್ತದೆ.

### ಗದಗ ಜಿಲ್ಲೆಯ ಚರ್ಮಕುಶಲ ಕರ್ಮಿಗಳ ಲಿಡ್ಕರ್ ನಿಗಮದ ಫಲಾನುಭವಿಗಳ ಆಯ್ಕೆ ಸಭೆ

ಗದಗ : ಲಿಡ್ಕರ್ ನಿಗಮ ಕೇಂದ್ರ ಕಚೇರಿ ಬೆಂಗಳೂರು ಇವರ ವತಿಯಿಂದ ಗದಗ ಜಿಲ್ಲೆ 2024–25 ನೇ ಸಾಲಿನ ವಿವಿಧ ಯೋಜನೆ ಬಗ್ಗೆ ಚರ್ಮ ಕುಶಲಕರ್ಮಿಗಳ ಆಯ್ಕೆಗಾಗಿ ಉಪನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಗದಗ ಇವರ ಆದೇಶದ ಮೇರೆಗೆ ಡಿಸೆಂಬರ್ 20 ರಂದು ಬೆ 11 ಗಂಟೆಗೆ ಡಾ.ಬಿ.ಆರ್.ಅಂಬೇಡ್ಕರ್ ಭವನ ಗದಗ ಇಲ್ಲಿ ಸಭೆಯನ್ನು ಕರೆಯಲಾಗಿದೆ. ಫಲಾಪೇಕ್ಷಿಗಳು ಸಮಯಕ್ಕೆ ಸರಿಯಾಗಿ ಆಗಮಿಸಿ ಸಭೆಯನ್ನು ಯಶಸ್ವಿಗೊಳಿಸಬೇಕೆಂದು ಲಿಡ್ಕರ್ ನಿಗಮದ ಜಿಲ್ಲಾ ಸಂಯೋಜಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ: ವಿವಿಧ ಯೋಜನೆಗಳಡಿ ಅರ್ಜಿ ಆಹ್ವಾನ

ಕೊಪ್ಪಳ : ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ 2024–25 ನೇ ಸಾಲಿಗೆ ಪರಿಶಿಷ್ಟ ಜಾತಿಯ ಜನರ ಆರ್ಥಿಕ ಅಭಿವೃದ್ಧಿಗಾಗಿ ವಿವಿಧ ಯೋಜನೆಗಳಿಗೆ ಅರ್ಹ ಫಲಾಪೇಕ್ಷಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಸ್ವಾವಲಂಬಿ ಸಾರಥಿ ಯೋಜನೆಯಡಿ ಫುಡ್ ಕಾರ್ಟ–ಉದ್ದೇಶಗಳಿಗೆ, ಸ್ವಯಂ ಉದ್ಯೋಗ ನೇರಸಾಲ ಯೋಜನೆಯಡಿ ಕು–ರಿಸಾಕಾಣಿಕೆ ಉದ್ದೇಶಗಳಿಗೆ ಸೌಲಭ್ಯ ಪಡೆಯಲು ಅರ್ಜಿದಾರರು ಪರಿಶಿಷ್ಟ ಜಾತಿಗೆ ಸೇರಿದವರಾಗಿರಬೇಕು ಹಾಗೂ ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ಗ್ರಾಮೀಣ ಪ್ರದೇಶದಲ್ಲಿ 1,50,000 ರೂ. ಮತ್ತು ನಗರ ಪ್ರದೇಶದಲ್ಲಿ 3,00,000 ರೂ.ಗಳ ಮಿತಿಯಲ್ಲಿರಬೇಕು. ಸ್ವಾವಲಂಬಿ ಸಾರಥಿ ಯೋಜನೆ ಅರ್ಜಿದಾರರು ಕನಿಷ್ಠ 21 ವರ್ಷಗಳಿಂದ ಗರಿಷ್ಟ 50 ವರ್ಷದೊಳಗಿರಬೇಕು.

ಅರ್ಜಿದಾರರು ಅಥವಾ ಅವರ ಕುಟುಂಬದವರು ಈ ಹಿಂದೆ ನಿಗಮದಿಂದ ಯಾವುದೇ ಸೌಲಭ್ಯ ಪಡೆದಿರಬಾರದು ಮತ್ತು ಸರ್ಕಾರಿ, ಅರೆ ಸರ್ಕಾರಿ ಸಂಸ್ಥೆಯಲ್ಲಿ ನೌಕರಿಯಲ್ಲಿರಬಾರದು.

2023–24 ಮತ್ತು 2024–25ನೇ ಸಾಲಿನಲ್ಲಿ ಈ ಯೋಜನೆಗಳಡಿ ಅರ್ಜಿ ಸಲ್ಲಿಸಿದವರು ಮತ್ತೊಮ್ಮೆ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ. ಈಗಾಗಲೆ ಈ ಸಾಲುಗಳಲ್ಲಿ ಈ ಯೋಜನೆಯಡಿ ಅರ್ಜಿ ಸಲ್ಲಿಸಿದವರು ಉದ್ದೇಶ ಬದಲಾವಣೆಗೆ ಇಚ್ಛಿಸಿದಲ್ಲಿ ನೇರವಾಗಿ ನಿಗಮದ ವೆಬ್‌ಸೈಟ್ https//swdcorp.karnataka.gov.in/ADCL portal ನಲ್ಲಿ ಉದ್ದೇಶ ಬದಲಾವಣೆ ಮಾಡಿಕೊಳ್ಳುವ ಬಗ್ಗೆ ಅವಕಾಶ ಕಲ್ಪಿಸಲಾಗಿದೆ. ವಾಹನಗಳಿಗೆ ಸೌಲಭ್ಯ ಪಡೆಯಲು ಫಲಾಪೇಕ್ಷಿಗಳು ಡ್ರೈವಿಂಗ್ ಲೈಸಸನ್ನ ಹೊಂದಿರಬೇಕು. ಫುಡ್ ಕಾರ್ಟ ಉದ್ದೇಶಕ್ಕಾಗಿ ಜಿಲ್ಲಾ ಕೇಂದ್ರ, ನಗರ ಪ್ರದೇಶಗಳ ವ್ಯಾಪ್ತಿಯಲ್ಲಿ ವ್ಯಾಪಾರ ಮಾಡುವ ಸಲುವಾಗಿ ಮಾತ್ರ ಬ್ಯಾಂಕುಗಳ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲಾಗುವುದು.

ಅರ್ಜಿ ಸಲ್ಲಿಸಲು ಡಿಸೆಂಬರ್ 29 ಕೊನೆಯ ದಿನವಾಗಿದ್ದು, ಅರ್ಜಿಯನ್ನು ಸೇವಾ ಸಿಂಧು ಪೋರ್ಟಲ್

https:.karnataka.gov.in ನಲ್ಲಿ ಕರ್ನಾಟಕ ಒನ್ ಮತ್ತು ಬೆಂಗಳೂರು ಒನ್ ಕೇಂದ್ರದಲ್ಲಿ ಆನ್‌ಲೈನ್ ಮುಖಾಂತರ ಸಲ್ಲಿಸಿ ಸದುಪಯೋಗ ಪಡೆದುಕೊಳ್ಳುವಂತೆ ಡಾ. ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಕೊಪ್ಪಳ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನರೇಗಾ ಯೋಜನೆಯ ದತ್ತು ಗ್ರಾಮ ಕಾಮನೂರಿಗೆ ಜಿ.ಪಂ ಸಿಇಒ ಭೇಟಿ: ವಿವಿಧ ಕಾಮಗಾರಿಗಳ ಪರಿಶೀಲನೆ

ಕೊಪ್ಪಳ : ಮಹಾತ್ಮಾ ಗಾಂಧಿ ನರೇಗಾ ಯೋಜನೆಯಡಿ ಕೊಪ್ಪಳ ಸಂಸದರ ದತ್ತು ಗ್ರಾಮವಾಗಿ ಆಯ್ಕೆಯಾದ ಲೇಬಗೇರಿ ಗ್ರಾಮ ಪಂಚಾಯತಿಯ ಕಾಮನೂರು ಗ್ರಾಮಕ್ಕೆ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೆಯ ಅವರು ಮಂಗಳವಾರ ಭೇಟಿ ನೀಡಿ, ಸಂಜಿವಿನಿ ಸಂಘದ ಶೆಡ್ ನಿರ್ಮಾಣ, ಶಾಲಾ ಶೌಚಾಲಯ, ಚರಂಡಿ ನಿರ್ಮಾಣ, ಸಿಸಿ ರಸ್ತೆ ನಿರ್ಮಾಣ ಸೇ–ರಿದಂತೆ ವಿವಿಧ ಕಾಮಗಾರಿಗಳ ಮಾರ್ಕೌಟ್ ಮಾಡಿರುವ ಕುರಿತು ಪರಿಶೀಲಿಸಿದರು.



ಮಹಾತ್ಮಾ ಗಾಂಧಿ ನರೇಗಾ ದತ್ತು ಗ್ರಾಮದ ಕ್ರಿಯಾ ಯೋಜನೆಯಲ್ಲಿರುವ ಎಲ್ಲಾ ಕಾಮಗಾರಿಗಳನ್ನು ಪ್ರಾರಂಭಿಸಿ ಬರುವ ಮಾರ್ಚ್–2025ರೊಳಗಾಗಿ ಮುಕ್ತಾಯಗೊಳಿಸಲು ಸಂಬಂಧಿಸಿದ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹಾಗೂ ತಾಂತ್ರಿಕ ಸಹಾಯಕ–ರಿಗೆ ಸೂಚನೆ ನೀಡಿದ ಸಿಇಓ ಅವರು, ಕಾಮಗಾರಿಗಳು ಗುಣಮಟ್ಟದ್ದಾಗಿರಬೇಕು. ಗ್ರಾಮಸ್ಥರ ಸಂಪೂರ್ಣ ಸಹಕಾರದಿಂದ ಎಲ್ಲಾ ಕಾಮಗಾರಿಗಳು ಮುಕ್ತಾಯವಾಗಬೇಕು. ಯಾವುದೇ ರೀತಿಯಾಗಿ ಕಾಮಗಾರಿಗಳು ಅಪೂರ್ಣವಾಗುವಂತಿಲ್ಲ. ಅಂ–ದಾಜು ಪತ್ರಿಕೆಯಲ್ಲಿ ಕಾಣಿಸಿದಂತೆ ಐಟಂವಾರು ಕಾಮಗಾರಿಗಳು ಅನುಷ್ಠಾನಿಸಬೇಕೆಂದು ಕಟ್ಟು ನಿಟ್ಟಾಗಿ ಸೂಚಿಸಿದರು.

ಶಾಲಾ ಮಕ್ಕಳ ಬರವಣಿಗೆ ಹಾಗೂ ಗಣಿತ ಕಲಿಕಾ ಸಾಮಾರ್ಥ್ಯ ಪರಿವೀಕ್ಷಣೆ: ಸಿಇಒ ಅವರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ 8 ತರಗತಿಗೆ ವಿದ್ಯಾರ್ಥಿಗಳ ಕೊಠಡಿಗೆ ಭೇಟಿ ನೀಡಿ ಕನ್ನಡ ಬರವಣಿಗೆ ಹಾಗೂ ಗಣಿತ ಕಲಿಕಾ ಸಾಮಾಥ–್ರ್ಯ ಇರುವ ಕುರಿತು ಪರಿವೀಕ್ಷಣೆ ಮಾಡಿದರು. ನಂತರ ಮಕ್ಕಳೊಂದಿಗೆ ಆರೋಗ್ಯ ತಪಾಸಣೆ ಜರುಗಿದ ಕು–ರಿತು ಚರ್ಚಿಸಿದರು. ಪ್ರತಿ ದಿನ ಆಹಾರ ವಿತರಣೆ, ಮೊಟ್ಟೆ ಇತ್ಯಾದಿ ವಿತರಣೆ ಕುರಿತು ಮುಕ್ತವಾಗಿ ಚರ್ಚಿಸಿದರು. ಈಗಾಗಲೇ ಎಲ್ಲ–ರಿಗೂ ಶೂ ಸಾಕ್ಸ್ ನೀಡಲಾಗಿದ್ದು ತಪ್ಪದೇ ಕಡ್ಡಾಯವಾಗಿ ಪ್ರತಿ ದಿನ ಎಲ್ಲಾ ಮಕ್ಕಳು ಧರಿಸಿ ತರಗತಿಗೆ ಹಾಜರಾಗುವಂತೆ ಮಕ್ಕಳಿಗೆ ಕರೆ ನೀಡಿದರು.

ಶೌಚಾಲಯ ಜಾಗೃತಿ ಮೂಡಿಸಿದ ಸಿಇಒ: ಗ್ರಾಮದ ಕೆಲ ಮನೆಗಳಿಗೆ ಭೇಟಿ ನೀಡಿ ಶೌಚಾಲಯ ಇರುವ ಬಗ್ಗೆ ಮಾಹಿತಿ ಪಡೆದು ಪ್ರತಿ ದಿನ ಶೌಚಾಲಯ ಬಳಕೆ ಮಾಡುವಂತೆ ಮನವೋಲಿಸಿದರು. ಈಗಾಗಲೇ ಸರ್ಕಾರದಿಂದ ಪ್ರೋತ್ಸಾಹಧನ ವಿತರಿಸಿದ್ದು ನಿಮ್ಮ ಶೌಚಾಲಯವನ್ನು ಸ್ವಚ್ಚಗೊಳಿಸಿ ಅದನ್ನು ನಿಮ್ಮ ಕುಟುಂಬದ ಸದಸ್ಯರು ಕಡ್ಡಾಯವಾಗಿ ಬಳಕೆ ಮಾಡುವಂತೆ ತಿಳಿಸಬೇಕು. ಶೌಚಾಲಯ ಬಳಕೆಯಿಂದ ನಮ್ಮ ಆರೋಗ್ಯ ಸುರಕ್ಷಿತ ಹಾಗೂ ಗ್ರಾಮದ ಸುತ್ತ–ಮುತ್ತಲೂ ನೈರ್ಮಲ್ಯ ವಾತಾವರಣ ಉಂಟಾಗುತ್ತದೆ ಎಂದರು.

ಗ್ರಾಮದಲ್ಲಿ ಜನಪ್ರತಿನಿಧಿಗಳು, ಗ್ರಾಮಸ್ಥರು, ಅಧಿಕಾ–ರಿಗಳ ಸಹಭಾಗಿತ್ವದಲ್ಲಿ ಒಂದು ದಿನ ಇಡೀ ಗ್ರಾಮವನ್ನು ಸ್ವಚ್ಛಗೊಳಿಸಲು ಶ್ರಮದಾನ ಕಾರ್ಯಕ್ರಮವನ್ನು ಜರುಗಿಸಲು ಶೀಘ್ರದಲ್ಲಿ ದಿನಾಂಕವನ್ನು ನಿಗದಿಪಡಿಸಲಾಗುವುದು. ಆ ದಿನದಂದು ಗ್ರಾಮಸ್ಥರು, ಎಲ್ಲಾ ಸಂಘ–ಸಂಸ್ಥೆಗಳು ಕೈ ಜೋಡಿಸಿ ಕಾಮನೂರನ್ನು ಮಾದರಿ ಸ್ವಚ್ಛತಾ ಗ್ರಾಮನ್ನಾಗಿ ನಿರ್ಮಿಸಲು ಶ್ರಮಿಸಬೇಕು ಎಂದು ಸಿಇಒ ಅವರು ಹೇಳಿದರು.

ಈ ಸಂದರ್ಭದಲ್ಲಿ ಕೊಪ್ಪಳ ತಾಲೂಕ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ದುಂಡಪ್ಪ ತುರಾದಿ, ನರೇಗಾ ಸಹಾಯಕ ನಿರ್ದೇಶಕ ಯಂಕಪ್ಪ, ಪಂಚಾಯತ ಅಭಿವೃದ್ಧಿ ಅಧಿಕಾರಿ ಸಂಗಮೇಶ ತೇರಿನ, ತೋಟಗಾ–ರಿಕೆ ಇಲಾಖೆ ಹೋಬಳಿ ಅಧಿಕಾರಿ ವಿಜಯಮಹಾಂತೇಶ ಹೊಟ್ಟಿನ, ತಾಂತ್ರಿಕ ಸಂಯೋಜಕರಾದ ಯಮನೂರ ಹಾಗೂ ಕವಿತಾ, ತಾಲೂಕ ಐಇಸಿ ಸಂಯೋಜ–ಕ ದೇವರಾಜ ಪತ್ತಾರ, ತಾಂತ್ರಿಕ ಸಹಾಯಕ ಮಲ್ಲಿಕಾರ್ಜುನ ಮೇಗಳಮನಿ, ಮಂಜುನಾಥ ಮಾದಾಪುರ, ಬಿಎಫ್.ಟಿ ಹಾಗೂ ಗ್ರಾಮ ಪಂಚಾಯತ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಜಿಲ್ಲೆಯಲ್ಲಿ ಒಟ್ಟು 34604 ಪ್ರಕರಣಗಳು ರಾಜೀ ಸಂಧಾನದ ಮೂಲಕ ಇತ್ಯರ್ಥ - ಜಿಲ್ಲಾ ನ್ಯಾ. ಬಸವರಾಜ

ಗದಗ : ಗದಗ ಜಿಲ್ಲೆಯಲ್ಲಿ ಡಿಸೆಂಬರ 14 ರಂದು ರಾಷ್ಟ್ರೀಯ ಲೋಕ ಅದಾಲತ್ ಹಮ್ಮಿಕೊಳ್ಳಲಾಗಿತ್ತು. ಜಿಲ್ಲೆಯಲ್ಲಿ ಒಟ್ಟು 15 ಬೆಂಚ್‌ಗಳನ್ನು ರಚಿಸಿ ರಾಜೀ ಸಂಧಾನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿತ್ತು. ಅದರಲ್ಲಿ 3042 ನ್ಯಾಯಾಲಯದಲ್ಲಿರುವ ಚಾಲ್ತಿ ಪ್ರಕರಣಗಳನ್ನು ರಾಜೀ ಮೂಲಕ ಇತ್ಯರ್ಥಪಡಿಸಲಾಗಿದೆ ಹಾಗೂ 31562 ವ್ಯಾಜ್ಯ ಪೂರ್ವ ಪ?ರಕರಣಗಳನ್ನು ರಾಜೀ ಮೂಲಕ ಇತ್ಯರ್ಥಪಡಿಸಲಾಗಿದ್ದು, ಒಟ್ಟು 34604 ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಇತ್ಯರ್ಥಪಡಿಸಲಾಗಿದೆ.

ಇತ್ಯರ್ಥಗೊಂಡ ಪ್ರಕರಣಗಳಲ್ಲಿ 24 ಮೋಟಾರು ವಾಹನ ಅಪಘಾತ ಪ್ರಕರಣಗಳು, 124 ಚೆಕ್‌ಬೌನ್ಸ್ ಪ್ರಕರಣಗಳು, 33 ಕ್ರಿಮಿನಲ್ ಕಂಪೌಂಡೆಬಲ್ ಪ್ರಕರಣಗಳು, 130 ಪಾಲುವಾಟ್ನಿ ಪ್ರಕರಣಗಳು, 65 ಬ್ಯಾಂಕ್ ಹಾಗೂ ಹಣ ವಸೂಲಾತಿ ಪ್ರಕರಣಗಳು, 60ವೈವಾಹಿಕ ಪ್ರಕರಣಗಳು, 59 ವಿದ್ಯುತ್‌ಕಾಯ್ದೆಪ್ರಕರಣಗಳು ಹಾಗೂ ಇತರೆ ಪ್ರಕರಣಗಳು ಸೇರಿದಂತೆ ಒಟ್ಟು 3042 ಚಾಲ್ತಿ ಪ್ರಕರಣಗಳು ಇತ್ಯರ್ಥವಾಗಿದ್ದು, ಒಟ್ಟು ರೂ.12,65,14,437/–ಗಳಿಗೆ ಪರಿಹಾರ ಒದಗಿಸುವುದರ ಮೂಲಕ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ.

ವ್ಯಾಜ್ಯಪೂರ್ವ ಪ್ರಕರಣಗಳಿಗೆ ಸಂಬಂಧಿಸಿದಂತೆವಿವಿಧ ಬ್ಯಾಂಕ್ ಪ್ರಕರಣಗಳು, ಕಂದಾಯಅದಾಲತ್ ಪ್ರಕರಣಗಳು ಸೇರಿದಂತೆ ಒಟ್ಟು 31562 ವ್ಯಾಜ್ಯಪೂರ್ವ ಪ್ರಕರಣಗಳು ರೂ.3,03,02,015/– ಗಳಿಗೆ ರಾಜೀ ಸಂಧಾನವಾಗಿದೆ. ಗದಗ ಜಿಲ್ಲೆಯಲ್ಲಿ ವಿವಿಧ ಕೌಟುಂಬಿಕ ಪ್ರಕರಣಗಳಲ್ಲಿ ಒಟ್ಟು 17 ಜೋಡಿಗಳು ಪುನಃ ಒಂದುಗೂಡಿಹೋಗಿರುತ್ತಾರೆ.

ಗದಗದಲ್ಲಿ ಜರುಗಿದ ರಾಷ್ಟ್ರೀಯ ಲೋಕ ಅದಾಲತ್ ಕಾರ್ಯಕ್ರಮದಲ್ಲಿ ಗೌರವಾನ್ವಿತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧಯಕ್ಷರಾದ ಬಸವರಾಜ,ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರ ಎಸ್ ಶೆಟ್ಟಿ, ಪ್ರಧಾನ ಕೌಟುಂಬಿಕ ನ್ಯಾಯಾಲಯದ ಪ್ರಧಾನ ನ್ಯಾಯಾಧೀಶರಾದ ಖಾಶಿಮ ಚೂರಿಖಾನ್, 1ನೇ ಹೆಚ್ಚುವರಿ ಕೌಟುಂಬಿಕ ನ್ಯಾಯಾಲಯದ ಪ್ರಧಾನ ನ್ಯಾಯಾಧೀಶರಾದ ಖಾದರಸಾಬ ಎಚ್ ಬೆನಕಟ್ಟಿ, ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ವ ಸಿಜೆಎಂ ಜಿ.ಆರ್. ಶೆಟ್ಟರ, ಅಪರ ಹಿರಿಯ ದಿವಾಣಿ ನ್ಯಾಯಾಧೀಶರಾದ ಶ್ರೀಮತಿ ಪದ್ಮಶ್ರೀ ಆರ್ ಪಾಟೀಲ, ಜೆಎಂಎಫ್‌ಸಿ 1 ನೇ ನ್ಯಾಯಾಲಯದ ದಿವಾಣಿ ನ್ಯಾಯಾಧೀಶರಾದ ದೀಪ್ತಿ ನಾಡಗೌಡ್ರ, ಜೆಎಂಎಫ್‌ಸಿ 2 ನೇ ನ್ಯಾಯಾಲಯದ ದಿವಾಣಿ ನ್ಯಾಯಾಧೀಶರಾದ ಬೀರಪ್ಪ ಕಾಂಬಳೆ ಹಾಗೂ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾದ ಎಂ.ಐ.ಹಿರೇಮನಿ ಪಾಟೀಲ, ಉಪಾಧ?ಯಕ್ಷರಾದ ಎ.ಎಂ. ಹದ್ಲಿ, ಪ್ರಧಾನ ಕಾರ್ಯದರ್ಶಿ ಬಿ.ಎಚ್. ಮಾಡಲಗೇರಿ, ಜಂಟಿ ಕಾರ್ಯದರ್ಶಿ ಪಿ.ಬಿ. ಕಣಗಿನಹಾಳ, ಖಜಾಂಚಿ ವಿ.ಎಚ್. ಮೇರವಾಡೆ, ಸರ್ಕಾರಿ ಅಭಿಯೋಜ–ಕರಾದ ಸವಿತಾ ಎಂ.ಶಿಗ್ಲಿ, ಜಿಲ್ಲಾ ಸರ್ಕಾರಿ ವಕೀಲರಾದ ಎಂ.ಎಂ. ಕುಕನೂರ, ಅಪರ ಜಿಲ್ಲಾ ಸರ್ಕಾರಿ ವಕೀಲರಾದ ಜಿ.ಬಿ. ನೀಲರಡ್ಡಿ, ಹಾಗೂ ವಕೀಲ ವೃಂದದವರು, ಸಂಧಾನಕಾರ ವಕೀಲರು, ಪಕ್ಷಗಾರರು ಹಾಗೂ ಎಲ್ಲಾ ನ್ಯಾಯಾಲಯಗಳ ಸಿಬ್ಬಂದಿ ವರ್ಗ ಉಪಸ್ಥಿತರಿದ್ದು ಲೋಕ ಅದಾಲತ್ ಯಶಸ್ವಿಗೊಳಿಸಿದರು. ಅದೇ ರೀತಿ ಎಲ್ಲಾ ತಾಲೂಕಗಳ ನ್ಯಾಯಾಧೀಶರು ಹಾಗೂ ವಕೀಲ ವೃಂದದವರು, ಸಿಬ್ಬಂದಿವರ್ಗ, ಅಭಿಯೋಜನಾ ಇಲಾಖೆ, ಪೊಲೀಸ್ ಇಲಾಖೆ, ಅಬಕಾರಿ ಇಲಾಖೆ, ಗಣಿ ಮತ್ತು ಭೂ ಇಲಾಖೆ, ಕಾರ್ಮಿಕ ಇಲಾಖೆ, ಕಂದಾಯ ಇಲಾಖೆ ಅಧಿಕಾರಿಗಳು ಕೂಡಾ–ಆಯಾತಾಲೂಕಾ ನ್ಯಾಯಾಲಯಗಳಲ್ಲಿ ಲೋಕ ಅದಾಲತ್‌ದಲ್ಲಿ ಪಾಲ್ಗೊಂಡು ರಾಜೀ ಸಂಧಾನ ಯಶಸ್ವಿಗೊಳಿಸಿದರು.

ರಾಷ್ಟ್ರೀಯ ಲೋಕ ಅದಾಲತ್‌ಗೆ ಪ್ರಮುಖವಾಗಿ ಸಹಕಾರ ನೀಡಿದ ಗದಗ ಜಿಲ್ಲೆಯ ಎಲ್ಲಾ ವಕೀಲರ ಸಂಘದ ಸರ್ವಸದಸ್ಯರಿಗೆ ಹಾಗೂ ಪಕ್ಷಗಾರರಿಗೆ, ಜಿಲ್ಲೆಯಎಲ್ಲಾ ನ್ಯಾಯಾಧೀಶರಿಗೆ, ಸಿಬ್ಬಂದಿ ವರ್ಗದವರಿಗೆ, ಜಿಲ್ಲಾ ನ್ಯಾಯಾಲಯದ ತಾಂತ್ರಿಕ ಸಿಬ್ಬಂದಿ ವರ್ಗದವರಿಗೆ, ಜಿಲ್ಲಾಡಳಿತ, ಪೊಲೀಸ್ ಇಲಾಖೆ ಸೇ–ರಿದಂತೆ ವಿವಿಧ ಇಲಾಖೆಗಳಿಗೆ, ಎಲ್ಲಾ ಮಾಧಯಮದವರಿಗೆ, ಲೋಕ ಅದಾಲತ್‌ಗೆ ಸಹಕಾರ ನೀಡಿದ ಎಲ್ಲರಿಗೂ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಅಧ?ಯಕ್ಷರಾದ ಬಸವರಾಜ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸಿ.ಎಸ್. ಶಿವನಗೌಡ್ರ ಅವರು ಧನ್ಯವಾದಗಳನ್ನು ಅರ್ಪಿಸಿದ್ದಾರೆ.

# ಪ್ರವಾಸೋದ್ಯಮ ಅತಿಥ್ಯ ಕ್ಷೇತ್ರದಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿಗೆ ಅರ್ಜಿ ಆಹ್ವಾನ

ಕೊಪ್ಪಳ : ಪ್ರವಾಸೋದ್ಯಮ ಇಲಾಖೆಯಿಂದ 2024–25 ನೇ ಸಾಲಿನ ಎಸ್.ಸಿ.ಎಸ್.ಪಿ, ಟಿ.ಎಸ್.ಪಿ ಯೋಜನೆ ಅಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಪ್ರವಾಸೋದ್ಯಮ ಅತಿಥ್ಯ ಕ್ಷೇತ್ರದಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿಗೆ ಅರ್ಜಿ ಅಹ್ವಾನಿಸಲಾಗಿದೆ.

ಪ್ರವಾಸೋದ್ಯಮ ಕ್ಷೇತ್ರದಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಪರಿಶಿಷ್ಟ ಜಾತಿಗೆ ಸೇರಿದ 292 ಅಭ್ಯರ್ಥಿಗಳಿಗೆ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ 162 ಅಭ್ಯರ್ಥಿಗಳಿಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಅತಿಥ್ಯ ಕ್ಷೇತ್ರದ ಫುಡ್ ಕ್ರಾಫ್ಟ್ ಇನ್ಸಿಟ್ಯೂಟ್ (FCI) ಮೈಸೂರು ಹಾಗೂ ಇನ್ಸಿಟ್ಯೂಟ್ ಆಫ್ ಹೋಟೆಲ್ ಮ್ಯಾನೇಜ್ಮೆಂಟ್ (IHM) ಬೆಂಗಳೂರು ರವರ ಮೂಲಕ ವಸತಿ ಸಹಿತ ಕಾರ್ಯಕ್ರಮವನ್ನು ಜಾರಿಗೊಳಿಸದೆ.

ಆಸಕ್ತಿ ಇರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಅರ್ಜಿಯನ್ನು ಡಿಸೆಂಬರ್ 28 ರೊಳಗಾಗಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, 2ನೇ ಮಹಡಿ ಜಿಲ್ಲಾಡಳಿತ ಭವನ, ಹೋಸಪೇಟೆ ರಸ್ತೆ, ಕೊಪ್ಪಳ ಕಛೇರಿ ಅಥವಾ ದೂ.ಸಂ 08539–225566 ಗೆ ಸಂಪರ್ಕಿಸಬಹುದಾಗಿದೆ ಎಂದು ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆ ತಿಳಿಸಿದ್ದಾರೆ.

# ಇಂದು ಗ್ರಾಹಕರು ಸಂವಾದ ಸಭೆ

ಕಾರವಾರ – ಕಾರ್ಯ ಮತ್ತು ಪಾಲನಾ ಉಪವಿಭಾಗ ಹೆಸ್ಕಾಂ, ಕಾರವಾರ ಕಚೇರಿಯಲ್ಲಿ ಡಿ.19 ರಂದು ಮಧ್ಯಾಹ್ನ 3.30 ಗಂಟೆಯಿಂದ ಸಂಜೆ 5.30 ಗಂಟೆಯವರೆಗೆ ಗ್ರಾಹಕರ ಸಂವಾದ ಸಭೆಯು ನಡೆಯಲಿದೆ.

ಗ್ರಾಹಕರು ತಮ್ಮ ವಿದ್ಯುತ್ ಸಂಬಂಧಿತ ಸಮಸ್ಯೆಗಳೇನಾದರು ಇದ್ದಲ್ಲಿ ಸಭೆಗೆ ಹಾಜರಾಗಿ ತಮ್ಮ ಕುಂದು ಕೊರತೆಗಳ ಅವಾಹಲುಳನ್ನು ನೀಡಬಹುದಾಗಿದೆ ಎಂದು ಕಾರ್ಯ ಮತ್ತು ಪಾಲನಾ ಉಪ ವಿಭಾಗ ಹೆಸ್ಕಾಂ, ಕಾರವಾರದ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್ (ವಿ) ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

# ವಿಶ್ವಮಾನವ ದಿನಾಚರಣೆ: ಡಿ.21ರಂದು ಪೂರ್ವಭಾವಿ ಸಭೆ

ಕೊಪ್ಪಳ ವಿಶ್ವಮಾನವ ದಿನಾಚರಣೆಯನ್ನು ಡಿಸೆಂಬರ್ 29ರಂದು ಆಚರಿಸುವ ಕುರಿತು ಪೂರ್ವಭಾವಿ ಸಭೆಯನ್ನು ಡಿ.21ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾಧಿಕಾ–ರಿಗಳ ಕಛೇರಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಸಭೆಯ ಅಧ್ಯಕ್ಷತೆಯನ್ನು ಕೊಪ್ಪಳ ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಅವರು ವಹಿಸುವರು. ಜಿಲ್ಲಾ ಮಟ್ಟದ ಇಲಾಖೆಗಳ ಅಧಿಕಾರಿಗಳು ಸಭೆಗೆ ತಪ್ಪದೇ ಹಾಜರಾಗಬೇಕು ಹಾಗೂ ಸಾಹಿತಿಗಳು ಈ ಸಭೆಯಲ್ಲಿ ಭಾಗವಹಿಸಿ ಅಗತ್ಯ ಸಲಹೆಗಳನ್ನು ನೀಡುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕೊಟ್ರೇಶ ಮರಬನಳ್ಳಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


**ಕರ್ನಾಟಕ ನೀರಾವರಿ ನಿಗಮ ನಿಯಮಿತ**
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಘ.ಬ.ದಂ.ಕಾ.ನಿ. ವಿಭಾಗ–4, ಚಿಕ್ಕೋಡಿ
ಫೋನ ನಂ:08338–272485 Email:ee_knnlgrbc4ckd@rediffmail.com

**ಅಲ್ಪಾವಧಿ ಟೆಂಡರ ಪ್ರಕಟಣೆ (2ನೇ ಕರೆ)**
**(ಇ–ಪ್ರೊಕ್ಯೂರಮೆಂಟ ಮುಖಾಂತರ ಮಾತ್ರ)**

ಪ್ರಕಟಣೆ ಸಂಖ್ಯೆ:KNNL/GRBCC-4/Tender/2024-25/ 19 Date: 17-12-2024

ವ್ಯವಸ್ಥಾಪಕ ನಿರ್ದೇಶಕರು,ಕನೀನಿನಿ ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಕೆ.ಪಿ.ಪಿ ಪೋರ್ಟಾಲ್ (https://kppp.karnataka.gov.in) 4701 ಅಡಿಯಲ್ಲಿನ 20 ರಸ್ತೆ ಕಾಮಗಾರಿಗಳಿಗೆ ಮೇಲ್ಕಾಣಿಸಿದ ಪ್ರಕಟಣೆಯಲ್ಲಿ ಅರ್ಹ ಗುತ್ತಿಗೆದಾರರಿಂದ ಟೆಂಡರಗಳನ್ನು ಕರೆಯಲಾಗಿರುತ್ತದೆ (Two cover system). **ವಿವರ :**

ಟೆಂಡರ ಪ್ರಕಟಣೆ ಸಂ:19 dtd 17-12-2024,ಕೆ.ಪಿ.ಪಿ. ಪೋರ್ಟಾಲ್ ಇಂಡೆಂಟ ಸಂಖ್ಯೆ:Two Cover System:General:Indent No 2335, 2336, 2337,2350, 2353, 2355, 2357, 2358, 2359, 2360, 2362, 2363, 2364, 2365 & 2374 SC reserved: Indent No 2351, 2354 & 2356 ST reserved: Indent No 2352 & 2361, ಅಂದಾಜು ಪತ್ರಿಕೆಯಂತೆ ಟೆಂಡರಿಗೆ ಇಡಲಾದ ಮೊತ್ತ ರೂ:50.00 lakhs each. ಇಎಂಡಿ ಮೊತ್ತ ರೂ:42,500/- to 85,000/-, ಟೆಂಡರ ಕುರಿತ ಪ್ರಶ್ನೆಗಳಿಗಾಗಿ /ಸ್ಪಷ್ಟೀಕರಣಗಳಿಗಾಗಿ ಕೊನೆಯ ದಿನಾಂಕ & ಸಮಯ:26–12–2024, Up to 17.00 hrs. ಭರ್ತಿ ಮಾಡಿದ ಟೆಂಡರಗಳನ್ನು ಇ–ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ & ಸಮಯ: 27-12-2024 at 16.00 hrs. ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ:30-12-2024 at 16.30 hrs. ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ : 31-12-2024 at 16.30 hrs.

ಕಾಮಗಾರಿಗಳ ಹೆಸರು/ಗುತ್ತಿಗೆದಾರರ ಅರ್ಹತೆ/ ಟೆಂಡರಿನ ನಿಯಮ/ ಟೆಂಡರ ಪ್ರೋಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ https://kppp.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದು. ಟೆಂಡರಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರನ್ನು ಅಥವಾ ಎಲ್ಲಾ ಟೆಂಡರಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/–ಕಾರ್ಯನಿರ್ವಾಹಕ ಅಭಿಯಂತರು,
ಕನೀನಿನಿ, ಘಬದಂಕಾನಿ ವಿಭಾಗ–4, ಚಿಕ್ಕೋಡಿ

DIPR/BGM/RO-NO-1323/KSMCA/2024-25

## ನಾನಾ ಪಾಟೇಕರ್ ' ಜೊತೆಗಿನ ಶೂಟಿಂಗ್ ಅನುಭವ ಹಂಚಿಕೊಂಡ ನಟ ಉತ್ಕರ್ಷ್ ಶರ್ಮಾ



ನಟ ಉತ್ಕರ್ಷ್ ಶರ್ಮಾ ಅವರು ನಾನಾ ಪಾಟೇಕರ್ ಅವರೊಂದಿಗೆ ಕೆಲಸ ಮಾಡಿದ ಅನುಭವವನ್ನು ಹಂಚಿಕೊಂಡರು.

'ಗದರ್' ನಂತರ ಅನಿಲ್ ಶರ್ಮಾ ಈಗ ತಮ್ಮ ಮುಂದಿನ ಚಿತ್ರ 'ವನವಾಸ್'ಗಾಗಿ ಸುದ್ದಿಯಲ್ಲಿದ್ದಾರೆ. ಅನಿಲ್ ಶರ್ಮಾ ಅವರ ಪುತ್ರ ಉತ್ಕರ್ಷ್ ಶರ್ಮಾ ಮತ್ತು ಹಿರಿಯ ನಟ ನಾನಾ ಪಾಟೇಕರ್ ಈ ಚಿತ್ರದಲ್ಲಿ ಪ್ರಮುಖ ಪಾತ್ರಗಳಲ್ಲಿದ್ದಾರೆ. ಇದೊಂದು ಕೌಟುಂಬಿಕ ಚಿತ್ರವಾಗಿದ್ದು, ಶೀಘ್ರದಲ್ಲೇ ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲಿದೆ. ಹೀಗಿರುವಾಗ ಚಿತ್ರತಂಡ ಮತ್ತು ನಿರ್ದೇಶಕರು ಪ್ರಚಾರದಲ್ಲಿ ಬ್ಯುಸಿಯಾಗಿದ್ದಾರೆ. ವಿಶೇಷ ಸಂವಾದದಲ್ಲಿ, ಉತ್ಕರ್ಷ್ ಶರ್ಮಾ ಅವರು ನಾನಾ ಪಾಟೇಕರ್ ಅವರೊಂದಿಗೆ ಕೆಲಸ ಮಾಡಿದ ಅನುಭವವನ್ನು ಹಂಚಿಕೊಂಡರು.

ನಾನಾ ಪಾಟೇಕರ್ ಸೆಟ್ ನಲ್ಲಿ ಹೇಗಿದ್ದಾರೆ? :

ವಿಶೇಷ ಸಂವಾದದ ಸಂದರ್ಭದಲ್ಲಿ, ಸೆಟ್‌ನಲ್ಲಿ ನಾನಾ ಪಾಟೇಕರ್ ಅವರ ನಡವಳಿಕೆಯ ಬಗ್ಗೆ ಉತ್ಕರ್ಷ್‌ಗೆ ಪ್ರಶ್ನೆಯನ್ನು ಕೇಳಲಾಯಿತು. ಈ ಹಿಂದೆ ನಾನಾ ಅವರ ಕಟ್ಟುನಿಟ್ಟಿನ ಸ್ವಭಾವದ ಬಗ್ಗೆ ತಾನು ಕೇಳಿದ್ದೆ ಮತ್ತು ಈ ಬಗ್ಗೆ ಸಾಕಷ್ಟು ಆತಂಕಗೊಂಡಿದ್ದೆ ಎಂದು ಅವರು ಹೇಳಿದರು. ಆದರೆ ಸೆಟ್‌ನಲ್ಲಿ ನಾನಾ ಪಾಟೇಕರ್ ತನ್ನೊಂದಿಗೆ ಎಂದಿಗೂ ಕಟ್ಟುನಿಟ್ಟಾಗಿರಲಿಲ್ಲ ಮತ್ತು ಚಿತ್ರದ ಸಮಯದಲ್ಲಿ ಅವರು ತನಗೆ ಸಾಕಷ್ಟು ಸೃಜನಶೀಲ ಸ್ವಾತಂತ್ರ್ಯವನ್ನು ನೀಡಿದರು ಎಂದರು.

ನಾನಾ ಪಾಟೇಕರ್ ಅವರೊಂದಿಗೆ ಕೆಲಸ ಮಾಡಿದ ಅನುಭವವನ್ನು ಹಂಚಿಕೊಳ್ಳುವಾಗ, ಉತ್ಕರ್ಷ್ ಶರ್ಮಾ ನಾನಾರ ಹಾಸ್ಯ ಪ್ರವೃತ್ತಿಯನ್ನು ಹೇಳುತ್ತಾ 'ಸರ್ ಅವರಿಗಿಂತ ದೊಡ್ಡ ಕುಚೇಷ್ಟೆ ಮಾಡುವವರನ್ನು



ನಾನು ನೋಡಿಲ್ಲ, ಅವರು ಸೆಟ್‌ನಲ್ಲಿ ಹೆಚ್ಚು ಚೇಷ್ಟೆಗಳನ್ನು ಹಾಸ್ಯಗಳನ್ನುಮಾಡುತ್ತಿದ್ದರು ಮತ್ತು ನಾನಾ ಪಾಟೇಕರ್ ಅವರು ಸೆಟ್‌ನಲ್ಲಿ ಸಮಯಪ್ರಜ್ಞೆಯನ್ನು ಹೊಂದಿದ್ದರು' ಎಂದು ಹೇಳಿದರು.

'ವನವಾಸ್' ಯಾವಾಗ ರಿಲೀಸ್?: 'ಗದರ್', 'ಗದರ್ 2' ಇಂತಹ ಬ್ಲಾಕ್ ಬಸ್ಟರ್ ಚಿತ್ರಗಳನ್ನು ಮಾಡಿದ್ದ ಅನಿಲ್ ಶರ್ಮಾ ಈ ಬಾರಿ ತಂದಿರುವ ಚಿತ್ರ ಕುಟುಂಬ ಸಮೇತ ನೋಡಬಯಸುವಂಥಾ ಚಿತ್ರವಾಗಿದೆ. ವನವಾಸ್ ಚಿತ್ರ ಡಿಸೆಂಬರ್ 20 ರಂದು ಥಿಯೇಟ-ರ್‌ಗೆ ಬರಲಿದ್ದು, ನಟಿ ಸಿಮ್ರತ್ ಕೌರ್ ಚಿತ್ರದಲ್ಲಿ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. 'ಗದರ್ 2' ನಲ್ಲಿ ಸಿಮ್ರತ್ ಮತ್ತು ಉತ್ಕರ್ಷ್ ಜೋಡಿಯನ್ನು ಜನರು ಇಷ್ಟಪಟ್ಟಿದ್ದಾರೆ ಮತ್ತು ಈಗ ಇಬ್ಬರೂ ಮತ್ತೆ ಒಟ್ಟಿಗೆ ಕಾಣಿಸಿಕೊಳ್ಳಲಿದ್ದಾರೆ.

## ವಯಸ್ಕರ ವೀಡಿಯೋ ಪ್ರಕರಣದಲ್ಲಿ ರಾಜ್ ಕುಂದ್ರಾ ಅವರ ಸಂವೇದನಾಶೀಲ ಪ್ರತಿಕ್ರಿಯೆ



**"ನಾನು ಯಾವುದೇ ತಪ್ಪು ಮಾಡಿಲ್ಲ"**

ನಟಿ ಶಿಲ್ಪಾ ಶೆಟ್ಟಿಯ ಪತಿ ಮತ್ತು ಉದ್ಯಮಿ ರಾಜ್ ಕುಂದ್ರಾ ಅಶ್ಲೀಲ ವೀಡಿಯೋ ಪ್ರಕರಣದ ಬಗ್ಗೆ ಮೌನ ಮುರಿದಿದ್ದಾರೆ. ಈ ವಿಚಾರಕ್ಕೂ ತಮಗೂ ಯಾವುದೇ ಸಂಬಂಧವಿಲ್ಲ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಬಾಲಿವುಡ್ ನಟಿ ಶಿಲ್ಪಾ ಶೆಟ್ಟಿ ಅವರ ಪತಿ ರಾಜ್ ಕುಂದ್ರಾ ಅಶ್ಲೀಲ ಚಿತ್ರ ಪ್ರಕರಣದಲ್ಲಿ ಸಂಕಷ್ಟಕ್ಕೆ ಸಿಲುಕಿದ್ದಾರೆ. ಇತ್ತೀಚೆಗಷ್ಟೇ ಇಡಿ ರಾಜ್‌ಗೆ ಸಮನ್ಸ್ ಕಳುಹಿಸಿ ವಿಚಾರಣೆಗೆ ಕರೆದಿದ್ದರೂ ಅವರು ಹಾಜರಾಗಿರಲಿಲ್ಲ. ಈ ವಿಷಯದ ಬಗ್ಗೆ ಬಹಳ ದಿನಗಳಿಂದ ದೂರವಿದ್ದ ರಾಜ್ ಕುಂದ್ರಾ, ಇದೇ ಮೊದಲ ಬಾರಿಗೆ ಮೌನ ಮು-ರಿದಿದ್ದಾರೆ.

2021ರಲ್ಲಿ ಈ ಪ್ರಕರಣದಲ್ಲಿ ರಾಜ್ ಕುಂದ್ರಾ ಅವರನ್ನು ಕೂಡ ಬಂಧಿಸಲಾಗಿತ್ತು.

ಪತ್ರಿಕಾಗೋಷ್ಠಿ ನಡೆಸುವ ಮೂಲಕ ಮೌನ ಮುರಿದರು:

ರಾಜ್ ಕುಂದ್ರಾ ನಿರಂತರವಾಗಿ ಅಶ್ಲೀಲ ವೀಡಿಯೋ ಪ್ರಕರಣದ ಮುಖ್ಯಾಂಶಗಳಲ್ಲಿ ಇದ್ದಾರೆ. ರಾಜ್ ಇದೇ ಮೊದಲ ಬಾರಿಗೆ ಮೌನ ಮುರಿದಿದ್ದಾರೆ. ರಾಜ್ ಅವರು ಪತ್ರಿಕಾ ಗೋಷ್ಠಿಯಲ್ಲಿ ಚರ್ಚಿಸಿದ್ದಾರೆ. ಅವರು, 'ಇಲ್ಲಿಯವರೆಗೆ ನಾನು ಯಾವುದೇ ಅಶ್ಲೀಲತೆ, ಯಾವುದೇ ನಿರ್ಮಾಣ ಅಥವಾ ಅಶ್ಲೀಲತೆಗೆ ಸಂಬಂಧಿಸಿದ ಯಾವುದೇ ಪ್ರಕರಣದಲ್ಲೂ ಭಾಗವಾಗಿಲ್ಲ. ಈ ಆರೋಪ ಬೆಳಕಿಗೆ ಬಂದಾಗ ನನಗೆ ಆಘಾತವಾಗಿತ್ತು. ಈ ಪ್ರಕರಣದಲ್ಲಿ ಯಾವುದೇ ಸಾಕ್ಷ್ಯಾಧಾರಗಳಿಲ್ಲದ ಕಾರಣ ಜಾಮೀನು ಪಡೆದಿದ್ದೇನೆ" ಎಂದರು.

'ನಾನೇನೂ ತಪ್ಪು ಮಾಡಿಲ್ಲ ಅಂತ ಗೊತ್ತು. ಆ?ಯಪ್ ಚಾಲನೆಯಲ್ಲಿರುವಂತೆ, ನನ್ನ ಮಗನ ಹೆಸರಿನಲ್ಲಿ ಪಟ್ಟಿ ಮಾಡಲಾದ ಕಂಪನಿ ಇತ್ತು. ಮತ್ತು ನಾವು ತಂತ್ರಜ್ಞಾನ ಸೇವೆಗಳನ್ನು ಒದಗಿಸುತ್ತಿದ್ದೆವು. ನಾವು ನನ್ನ ಸೋದರ ಮಾವನ ಕಂಪನಿ ಕೆನ್ರಿನ್‌ಗೆ ತಂತ್ರಜ್ಞಾನ ಸೇವೆಗಳನ್ನು ಒದಗಿಸಿದ್ದೇವೆ, ಅದರಲ್ಲಿ ಅವರು ಯುಕೆ ಮೂಲದ ಅಪ್ಲಿಕೇಶನ್ ನ್ನು ಪ್ರಾರಂಭಿಸಿದರು, ಇದನ್ನು ಹೆಚ್ಚಿನ ಪ್ರೇಕ್ಷಕರಿಗಾಗಿ ನಿರ್ಮಿಸಲಾಗಿದೆ ಮತ್ತು ಅವು ಎ-ರೇಟೆಡ್ ಚಲನಚಿತ್ರಗಳಾಗಿವೆ .ಆದರೆ ಅವು ಅಶ್ಲೀಲವಾಗಿರಲಿಲ್ಲ?" ಎಂದರು.

ತನ್ನ ಸಂಪರ್ಕದಲ್ಲಿ ಯಾವ ಹುಡುಗಿಯೂ ಇಲ್ಲ: ರಾಜ್ ಕುಂದ್ರಾ ಹೇಳಿದರು- 'ನನ್ನ ಒಳಗೊಳ್ಳುವಿಕೆಗೆ ಸಂಬಂಧಿಸಿದಂತೆ, ಇದು ಸಂಪೂರ್ಣವಾಗಿ ತಂತ್ರಜ್ಞಾನ ಪೂರೈಕೆದಾರನ ಪಾತ್ರವಾಗಿದೆ. ಯಾವುದೇ ಹುಡುಗಿ ಮುಂದೆ ಬಂದು ನಾನು ರಾಜ್ ಕುಂದ್ರಾ ಅವರನ್ನು ಭೇಟಿ ಮಾಡಿದ್ದೇನೆ ಅಥವಾ ಅವರ ಯಾವುದೇ ಚಿತ್ರಗಳಲ್ಲಿ ಕೆಲಸ ಮಾಡಿದ್ದೇನೆ ಅಥವಾ ರಾಜ್ ಕುಂದ್ರಾ ಅವರು ಯಾವುದೇ ಚಿತ್ರವನ್ನು ನಿರ್ಮಿಸಿದ್ದಾರೆ ಎಂದು ಹೇಳುವರೇ?. ರಾಜ್ ಕುಂದ್ರಾ ಎಲ್ಲಾ 13 ಅಪ್ಲಿಕೇಶನ್‌ಗಳ ಕಿಂಗ್‌ಪಿನ್, ನಾನು ಸಾಫ್ಟ್‌ವೇರ್ ತಂತ್ರಜ್ಞಾನದ ಒಳಗೊಳ್ಳುವಿಕೆಯಲ್ಲಿ ಮಾತ್ರ ತೊಡಗಿಸಿಕೊಂಡಿದ್ದೇನೆ ಮತ್ತು ಆ ಅಪ್ಲಿಕೇಶನ್‌ನಲ್ಲಿ ಯಾವುದೇ ತಪ್ಪಿಲ್ಲ ಎಂದು ಮಾಧ್ಯಮಗಳು ಹೇಳುತ್ತವೆ ಎಂದು ಸಮರ್ಥಿಸಿದರು.

# ವೇಗವಾಗಿ ನಿಮ್ಮ ತೂಕ ಇಳಿಸಿಕೊಳ್ಳಬೇಕೆ? ಈ ಆಹಾರ ಕ್ರಮ ಅನುಸರಿಸಿ ನೋಡಿ!



ತೂಕ ಇಳಿಸಿಕೊಳ್ಳುವುದು ಸವಾಲಿನ ಕೆಲಸ. ತೂಕ ಇಳಿಸಿಕೊಳ್ಳುವ ನಿಮ್ಮ ಗುರಿ ತಲುಪಲು ಸಾಕಷ್ಟು ಶ್ರಮ ಪಡಬೇಕಾಗುತ್ತದೆ. ಸಮಾಜ ನಿಮ್ಮನ್ನು ಡುಮ್ಮ, ಡುಮ್ಮಿ, ಗುಂಡ ಎಂದೆಲ್ಲ ತಮಾಷೆ ಮಾಡಬಹುದು, ಅದೆಲ್ಲದರಿಂದ ತಪ್ಪಿಸಿಕೊಳ್ಳುವುದು ಒಂದೆಡೆಯಾದರೆ ನೀವು ಫಿಟ್ ಆಗಿರುವುದು ನಿಮ್ಮ ಆರೋಗ್ಯದ ದೃಷ್ಟಿಯಿಂದಲೂ ಒಳ್ಳೆಯದು.

ಹೆಚ್ಚಿನ ತೂಕ ನಿಮ್ಮ ಆರೋಗ್ಯವನ್ನು ಕೆಡಿಸಬಹುದು. ನೀವು ಆರೋಗ್ಯವಂತರಾಗಿರಬೇಕೆಂದರೆ ನಿಮ್ಮ ಎತ್ತರಕ್ಕೆ ಸರಿಯಾದ ತೂಕ ಹೊಂದಿರಬೇಕು. ಅತಿಯಾದ ತೂಕ ಅನೇಕ ಅನಾರೋಗ್ಯಕ್ಕೆ ಕಾರಣವಾಗುತ್ತದೆ. ನೀವು ಆನುವಂಶಿಕ ಕಾರಣದಿಂದಲೂ ದಪ್ಪಗಿರಬಹುದು, ಅತಿಯಾಗಿ ತಿನ್ನುವುದರಿಂದ ಮುಖ್ಯವಾಗಿ ಜಂಕ್ ಫುಡ್ ತಿನ್ನುವುದು ಅತಿಯಾದ ತೂಕಕ್ಕೆ ಕಾರಣವಾಗಬಹುದು.

ಆರೋಗ್ಯಕರ ಆಹಾರಕ್ಕಿಂತಲೂ ಕಡಿಮೆ ವೆಚ್ಚದಲ್ಲಿ ಈ ಜಂಕ್‌ಫುಡ್‌ಗಳು ಸಿಗುತ್ತವೆ ಮತ್ತು ರುಚಿಯಾಗಿಯೂ ಇರುತ್ತದೆ. ಆದರೆ ಇದರಿಂದ ಅನಾನುಕೂಲತೆಗಳೇ ಹೆಚ್ಚು. ಅತಿಯಾಗಿ ಸಕ್ಕರೆ (ಸ್ವೀಟ್) ಸೇವಿಸುವುದು ಕೂಡ ನಿಮ್ಮ ತೂಕವನ್ನು ಹೆಚ್ಚಿಸಬಹುದು. ಅನಾರೋಗ್ಯ ಕಾರಣದಿಂದಲೂ, ನೀವು ತೆಗೆದುಕೊಳ್ಳುವ ಔಷಧಿಗಳಿಂದಲೂ ಹೆಚ್ಚಿನ ತೂಕ ಪಡೆದಿರಬಹುದು. ತೂಕ ಇಳಿಸಿಕೊಳ್ಳಲು ಸಾಕಷ್ಟು ಮಾರ್ಗಗಳಿವೆ. ಯೋಗ, ವ್ಯಾಯಾಮ, ಕಟ್ಟುನಿಟ್ಟಿನ ಆಹಾರ ಪದ್ಧತಿ ಅಲ್ಲದೆ ಈಗ ಹೆಚ್ಚಿನವರು ವರ್ಕೌಟ್ ಮಾಡುವುದನ್ನು ತೂಕ ಇಳಿಸಿಕೊಳ್ಳುವ ಮಾರ್ಗವಾಗಿ ಕಂಡುಕೊಂಡಿದ್ದಾರೆ.

**ಈ ವಿಧಾನದಿಂದ ತೂಕ ಇಳಿಸಬಹುದು**

ತೂಕ ಇಳಿಸಿಕೊಳ್ಳಲು ಅನೇಕ ವಿಭಿನ್ನ ವಿಧಾನಗಳನ್ನು ಪ್ರಯತ್ನಿಸಿದ ನಂತರವೂ ನೀವು ಬಯಸಿದ ಫಲಿತಾಂಶಗಳನ್ನು ಪಡೆಯದಿದ್ದರೆ, ಇನ್ಸ್ಟಾಗ್ರಾಮ್ ನಲ್ಲಿ ಪ್ರಸಿದ್ಧರಾದ ಸೋನಿಯಾ ಹೂಡಾ ಅವರ ತೂಕ ಇಳಿಸುವ ಕ್ರಮವನ್ನು ಪ್ರಯತ್ನಿಸಿ. ಈ ವಿಧಾನದಿಂದ ನೀವು ಕೇವಲ ಎರಡು ವಾರಗಳಲ್ಲಿ 4 ರಿಂದ 5 ಕೆಜಿ ತೂಕವನ್ನು ಕಳೆದುಕೊಳ್ಳಬಹುದು ಎಂದು ಸೋನಿಯಾ ಹೇಳುತ್ತಾರೆ.

ವಾಸ್ತವವಾಗಿ, ಈ ವಿಧಾನವು ಆಹಾರಕ್ಕೆ ಸಂಬಂಧಿಸಿದೆ. ದಿನಕ್ಕೆ ಎಷ್ಟು ಬಾರಿ ಆಹಾರ ಸೇವನೆ ಮಾಡಬೇಕು ಮತ್ತು ನಿಮ್ಮ ದೈನಂದಿನ ಆಹಾರ ಕ್ರಮದಲ್ಲಿ ಏನೆಲ್ಲಾ ಸೇರಿಸಿಕೊಳ್ಳಬೇಕು ಎಂಬುದನ್ನು ಸೋನಿಯಾ ತಿಳಿಸಿದ್ದಾರೆ.

**ಒಎಂಎಡಿ ಆಹಾರ ಕ್ರಮ ಎಂದರೇನು?**

ತ್ವರಿತ ತೂಕ ನಷ್ಟವು ನೀವು ಎಷ್ಟು ದೇಹದ ಕೊಬ್ಬನ್ನು ಹೊಂದಿದ್ದೀರಿ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ ಎಂದು ಸೋನಿಯಾ ಹೇಳಿದ್ದಾರೆ.

ನೀವು ಹೆಚ್ಚು ದೇಹದ ಕೊಬ್ಬನ್ನು ಹೊಂದಿದ್ದರೆ, ನೀವು ಹೆಚ್ಚು ತೂಕವನ್ನು ಕಳೆದುಕೊಳ್ಳುತ್ತೀರಿ. ಒಎಂಎಡಿ ಎಂದರೆ ದಿನಕ್ಕೆ ಒಂದು ಊಟ, ಅಂ-ದರೆ ನೀವು ದಿನಕ್ಕೆ ಒಮ್ಮೆ ಮಾತ್ರ ತಿನ್ನಬೇಕು. ಇದನ್ನು ಅನುಸರಿಸಿದರೆ ಯಾವುದೇ ಸಂಶಯವಿಲ್ಲದೆ ತೂಕ ಇಳಿಸಿಕೊಳ್ಳಬಹುದಂತೆ.

**ಒಎಂಎಡಿ ಆಹಾರ ಯಾವುದರಿಂದ ಕೂಡಿರುತ್ತದೆ**

ಒಎಂಎಡಿ ಆಹಾರವು ಸರಿಯಾದ ಪ್ರೋಟೀನ್, ಕಾರ್ಬೋಹೈಡ್ರೇಟ್ ಗಳು, ಫೈಬರ್ ಮತ್ತು ಕೊಬ್ಬನ್ನು ಹೊಂದಿರಬೇಕು. ನೀವು ಒಂದೇ ಬಾರಿ ಊಟ ಮಾಡುವುದರಿಂದ ನಿಮ್ಮ ಊಟ ಉತ್ತಮ ಪೌಷ್ಟಿಕಾಂಶಗಳಿಂದ ತುಂಬಿರಬೇಕು. ಬೇಳೆ ಕಾಳುಗಳು, ತರಕಾರಿ, ಮಾಂಸ ಯಾವುದನ್ನಾದರೂ ನಿಮ್ಮ ಆಹಾರದಲ್ಲಿ ಸೇರಿಸಿಕೊಳ್ಳಬಹುದು.

ನಿಮ್ಮ ದೇಹದ ಆರೋಗ್ಯಕ್ಕೆ ಬೇಕಾದಷ್ಟು ಪ್ರಮಾಣದ ಪೌಷ್ಟಿಕಾಂಶ ಸೇವಿಸಬೇಕು. ದಿನಕ್ಕೆ ಒಮ್ಮೆ ತಿನ್ನುವುದು ದೇಹದಲ್ಲಿ ರೋಗಗಳು ಅಥವಾ ನಿಶ್ಶಕ್ತಿಗೆ ಕಾರಣವಾಗಬಹುದೇ? ಎಂಬ ಪ್ರಶ್ನೆಗೆ, ಸಮಸ್ಯೆ ಕಡಿಮೆ ತಿನ್ನುವುದರಲ್ಲಿ ಅಲ್ಲ, ಹೆಚ್ಚು ತಿನ್ನುವುದರಿಂದ ಎಂದು ಸೋನಿಯಾ ಹೇಳಿದ್ದಾರೆ.

**ಒಎಂಎಡಿ ಹೇಗೆ ತೆಗೆದುಕೊಳ್ಳಬೇಕು?**

ಇದನ್ನು ತೆಗೆದುಕೊಳ್ಳಲು ಉತ್ತಮ ಮಾರ್ಗವೆಂದರೆ ನಿಮ್ಮ ಊಟಕ್ಕೆ 15-20 ನಿಮಿಷಗಳ ಮೊದಲು ಒಂದು ಸ್ಕೂಪ್ ಪ್ರೋಟೀನ್ ಪುಡಿಯನ್ನು ತೆಗೆದುಕೊಳ್ಳುವುದು. ಹಾಲು ಅಥವಾ ಬಿಸಿನೀರಿಗೆ ಪ್ರೋಟಿನ್ ಪುಡಿ ಸೇರಿಸಿ ಕುಡಿಯಬೇಕು. ನೀವು ಪ್ರೋಟೀನ್ ಪುಡಿಯನ್ನು ಕುಡಿಯದಿದ್ದರೆ, ಎಳನೀರನ್ನು ತೆಗೆದುಕೊಳ್ಳಬಹುದು. ಅಥವಾ ಯಾವುದೇ ಹಣ್ಣನ್ನು ತಿನ್ನಬಹುದು.

**ಅಧಿಕ ತೂಕ ಹೊಂದಿದ್ದರೆ**

ನೀವು ಅಧಿಕ ತೂಕ ಹೊಂದಿದ್ದರೆ, ಈ ಪರಿಹಾರವನ್ನು ಒಂದೆರಡು ಬಾರಿ ಪ್ರಯತ್ನಿಸಿ. ನೀವು ತೂಕವನ್ನು ಕಳೆದುಕೊಂಡಿದ್ದೀರಿ ಎಂದು ನಿಮಗೆ ಅನಿಸಿದಾಗ, ನೀವು ಹಿಂದಿನ ದಿನಚರಿಗೆ ಮರಳಬಹುದು. ಅಂತಹ ಸಮಯದಲ್ಲಿ,



ನೀವು ನಿಮ್ಮ ಊಟವನ್ನು ನಿಧಾನವಾಗಿ ಹೆಚ್ಚಿಸಬಹುದು ಮತ್ತು ಸಮತೋಲಿತ ಊಟವನ್ನು ತೆಗೆದುಕೊಳ್ಳಬಹುದು. ಇದು ನಿಮ್ಮ ಕೊಬ್ಬನ್ನು ಮತ್ತೆ ಹೆಚ್ಚಿಸುವುದಿಲ್ಲ ಮತ್ತು ನೀವು ಸದೃಢರಾಗುತ್ತೀರಿ.

ನೀವು ಯಾವುದೇ ಔಷಧಿ ಅಥವಾ ಚಿಕಿತ್ಸೆಗೆ ಬದಲಾಗಿ ಈ ಮಾರ್ಗವನ್ನು ಪ್ರಯತ್ನಿಸಬೇಡಿ. ನೀವು ಯಾವುದೇ ಚಿಕಿತ್ಸೆ ಪಡೆಯುತ್ತಿದ್ದರೆ ಒಎಂಎಡಿ ಅನುಸರಿಸಬೇಡಿ. ಹೆಚ್ಚಿನ ಮಾಹಿತಿಗಾಗಿ ನಿಮ್ಮ ವೈದ್ಯರನ್ನು ಸಂಪರ್ಕಿಸಿ.



# ಪುಟ್ಟ ಮಕ್ಕಳಿಗೆ ನಿಮ್ಮ ಕ್ರಿಸ್ಮಸ್ ಉಡುಗೊರೆ ಆಯ್ಕೆ ಹೀಗಿರಲಿ !

ಇನ್ನೇನು ಕ್ರಿಸ್ಮಸ್ಗೆ ಕೆಲವೇ ದಿನಗಳು ಬಾಕಿ ಉಳಿದಿವೆ. ಈ ಹಬ್ಬವು ಮಕ್ಕಳಿಗೆ ಬಹಳ ವಿಶೇಷವಾಗಿದೆ. ಏಕೆಂದರೆ ಕ್ರಿಸ್ಮಸ್ ದಿನದಂದು ಸಾಂತಾಕ್ಲಾಸ್ ಅವರಿಗೆ ಉಡುಗೊರೆಗಳನ್ನು ತರುತ್ತಾರೆ ಎಂದು ಚಿಣ್ಣರು ನಂಬಿರುತ್ತಾರೆ, ಮತ್ತು ಅದಕ್ಕಾಗಿಯೇ ಮಕ್ಕಳು ಕ್ರಿಸ್ಮಸ್ಗಾಗಿ ಕಾಯುತ್ತಿರುತ್ತಾರೆ. ಕ್ರಿಸ್ಮಸ್ ದಿನದಂದು ಮಕ್ಕಳಿಗೆ ಉಡುಗೊರೆಗಳನ್ನು ನೀಡಿದಾಗ ಎಲ್ಲಿಲ್ಲದ ಖುಷಿಯಾಗುತ್ತದೆ.

ಉಡುಗೊರೆ ಸಿಕ್ಕಾಗ ಯಾರಿಗೆ ತಾನೇ ಖುಷಿಯಾಗುವುದಿಲ್ಲ. ಅದೂ ಅನಿರೀಕ್ಷಿತವಾಗಿ ಉಡುಗೊರೆಗಳು ಸಿಕ್ಕಾಗ ಮಕ್ಕಳ ಖುಷಿ ದುಪ್ಪಟ್ಟಾಗುತ್ತದೆ. ಮಕ್ಕಳಿಗೆ ಖರೀದಿಸುವ ಉಡುಗೊರೆಗಳು ಅವರಿಗೆ ಉಪಯೋಗವಾಗುವಂತಿ-ರಬೇಕು. ಮಕ್ಕಳಿಗೆ ವಿವಿಧ ರೀತಿಯ ಉಡುಗೊರೆಗಳು ಮಾರುಕಟ್ಟೆಯಲ್ಲಿ ಲಭ್ಯವಿರುತ್ತದೆ. ಆಟಿಕೆ, ಬಟ್ಟೆ, ಚಾಕೊಲೇಟ್, ಸ್ಟೇಶನರಿಗಳು ಏನಾದರೂ ನೀಡಬಹುದು. ಹೆಚ್ಚು ಉಪಯುಕ್ತವಾಗುವ ಉಡುಗೊರೆಗಳನ್ನು ಆಯ್ದು ನೀಡಿ.

ಮಕ್ಕಳು ಉಡುಗೊರೆ ನೋಡಿ ಖುಷಿಪಟ್ಟರೆ ಅದರಿಂದ ನಮಗೂ ಖುಷಿಯಾಗುತ್ತದೆ. ಆದರೆ ಪುಟ್ಟ ಮಕ್ಕಳಿಗೆ ಯಾವ ರೀತಿಯ ಉಡ-ುಗೊರೆ ನೀಡಬಹುದು ಎಂದು ನೀವು ಯೋಚಿಸುತ್ತಿದ್ದರೆ ಇಲ್ಲಿದೆ ಕೆಲವು ಆಯ್ಕೆಗಳು. ಪುಟ್ಟ ಮಕ್ಕಳು ನಿಮ್ಮ ಮನೆಯಲ್ಲಿ ಅಥವಾ ನಿಮ್ಮ ಸ್ನೇಹಿತರ, ಸಂಬಂಧಿಕರ ಮನೆಯಲ್ಲಿದ್ದರೆ ಅವರಿಗೆ ಎಂತಹ ಉಡುಗೊರೆ ನೀಡಬಹುದು ಎಂಬುದನ್ನು ಇಲ್ಲಿ ತಿಳಿಸಿದ್ದೇವೆ. ನಿಮ್ಮ ಕ್ರಿಸ್ಮಸ್ ಉಡುಗೊರೆ ಪುಟ್ಟ ಮಕ್ಕಳ ಖುಷಿ ಹೆಚ್ಚಿಸಲಿ.

**ಮೃದುವಾದ ಆಟಿಕೆಗಳು**

ಮೃದುವಾದ ಆಟಿಕೆಗಳು ನವಜಾತ ಶಿಶುವಿಗೆ ಉತ್ತಮ ಆಯ್ಕೆಯಾಗಿದೆ. ಮೃದುವಾದ ಮತ್ತು ಸಣ್ಣ ಆಟಿ-ಕೆಗಳನ್ನು ನಿಮ್ಮ ಮಗುವಿಗೆ ಹುಡುಕಿ. ನೀವು ಮಗುವಿಗೆ ಟೆಡ್ಡಿ ಬೇರ್ ಅಥ-ವಾ ಬನ್ನಿಯನ್ನು ನೀಡಬಹುದು. ಕೆಲವು ಆಟಿಕೆಗಳು ಮ್ಯೂಸಿಕ್ ಅಥವಾ ಧ್ವನಿಯನ್ನು ಸಹ ಹೊಂದಿರುತ್ತವೆ, ಇವು ಮಗುವಿಗೆ ತುಂಬಾ ಉಪಯುಕ್ತವಾಗಿವೆ ಮತ್ತು ಮಕ್ಕಳನ್ನು ಚಟುವಟಿ-ಕೆಯಿಂದಿರುವಂತೆ ಮಾಡುತ್ತವೆ.

**ಬೇಬಿ ಬ್ಲ್ಯಾಂಕೆಟ್**

ಡಿಸೆಂಬರ್ ತಿಂಗಳಲ್ಲಿ ತುಂಬಾ ಚಳಿ ಇರುವುದರಿಂದ, ಈ ಸಮಯದಲ್ಲಿ ನೀವು ಮಗುವಿಗೆ ಮೆತ್ತನೆಯ



ಕಂಬಳಿಯನ್ನು ನೀಡಬಹುದು. ಇದರಲ್ಲಿ, ನೀವು ಮಗುವಿನ ಹೆಸರು, ಹುಟ್ಟಿದ ದಿನಾಂಕ ಅಥವಾ ಹೆಸರಿನ ಮೊದಲ ಅಕ್ಷರವನ್ನು ಬರೆಯಬಹುದು. ಮಗುವಿಗೆ ಹೈಪೋಅಲರ್ಜೆನಿಕ್ ಮತ್ತು ಹತ್ತಿಯಿಂದ ತಯಾರಿಸಿದ ಮೃದುವಾದ ಕಂಬಳಿಯನ್ನು ಆರಿಸಿ. ಅವು ಮಗುವಿಗೆ ಆರಾಮದಾಯಕ ಮತ್ತು ಸುರಕ್ಷಿತವಾಗಿರುತ್ತವೆ.

**ಮಗುವಿನ ಬಟ್ಟೆಗಳು**

ಮಕ್ಕಳಿಗೆ ಬಟ್ಟೆಗಳನ್ನು ಉಡ-ುಗೊರೆಯಾಗಿ ನೀಡುವುದು ಬುದ್ಧಿವಂತ ನಿರ್ಧಾರವಾಗಬಹುದು. ನೀವು ಮಗುವಿಗೆ ಪೈಜಾಮಾ, ಸ್ವೆಟರ್ ಅಥವಾ ಬಾಡಿ ಸೂಟ್ಗಳನ್ನು ಖರೀದಿಸಬಹುದು. ಮಗುವಿನ ಸೂಕ್ಷ್ಮ ಚರ್ಮಕ್ಕೆ ಬಟ್ಟೆ ಸ್ವಲ್ಪ ಮೃದುವಾಗಿರಬೇಕು ಎಂಬುದನ್ನು ನೆನಪಿನಲ್ಲಿಡಿ. ಸಣ್ಣ ಮಕ್ಕಳಿಗೆ ಬಟ್ಟೆ ನೀಡುವಾಗ ಅದರಲ್ಲಿ ಯಾವುದೇ ಚುಚ್ಚುವಂತಹ ವಸ್ತುಗಳು ಇರಬಾರದು.

ಕೆಲವು ಬಟ್ಟೆಗಳು ಆಕರ್ಷಕವಾಗಿ ಕಂಡರೂ ಅಷ್ಟೇನೂ ಆರಾಮದಾಯಕ ಅನುಭವ ನೀಡುವುದಿಲ್ಲ.

ಆದ್ದರಿಂದ ಬಟ್ಟೆ ಆಯ್ದುಕೊಳ್ಳುವಾಗ ಮೆತ್ತಗಿನ ಅಥವಾ ಕಾಟನ್ ಬಟ್ಟೆಯನ್ನು ಆಯ್ದುಕೊಳ್ಳಿ. ಟೋಪಿ, ಟವಲ್, ಸಾಕ್ಸ್ ಮುಂತಾದ ವಸ್ತುಗಳನ್ನು ಜೊತೆಗೆ ನೀಡಬಹುದು.

**ಬೇಬಿ ಬಾತ್ ಕಿಟ್**

ನೀವು ಮಗುವಿಗೆ ಬಾತ್ ಕಿಟ್ ನೀಡಬಹುದು. ಅದು ಮಗುವಿಗೆ ತುಂಬಾ ಉಪಯುಕ್ತವಾಗಲಿದೆ. ಬೇಬಿ ಬಾತ್ ಕಿಟ್ ಮಗುವಿನ ಶಾಂಪೂ, ಬಾಡಿ ವಾಶ್, ಲೋಷನ್ ಮತ್ತು ಮೃದುವಾದ ಟವೆಲ್ ಹೊಂದಿರುತ್ತದೆ.

\ಈ ಉಡುಗೊರೆಯ ಆಕರ್ಷಣೆಯನ್ನು ಹೆಚ್ಚಿಸಲು ನೀವು ಪ್ರಾಣಿಗಳ ವಿನ್ಯಾಸದ ಟವೆಲ್ ಅನ್ನು ಸಹ ತೆಗೆದುಕೊಳ್ಳಬಹುದು. ಈ ಪರಿಕರಗಳನ್ನು ಮಗುವಿನ ಸೂಕ್ಷ್ಮ ಚರ್ಮಕ್ಕೆ ಹಾನಿಯಾಗದ ಹೈಪೋಅಲರ್ಜೆನಿಕ್, ನೈಸರ್ಗಿಕ ಮತ್ತು ಸಾವಯವ ಪದಾರ್ಥಗಳಿಂದ ತಯಾರಿಸಿದ್ದಾಗಿರಬೇಕು ಎಂಬುದನ್ನು ನೆನಪಿನಲ್ಲಿಡಿ.

**ಟೀತಿಂಗ್ ಟಾಯ್ಸ್**

ನಿಮ್ಮ ಮಗುವಿನ ಹಲ್ಲು ಬರಲಾರಂಭಿಸಿದಾಗ ಅದು ತುಂಬಾ ಕಿರಿಕಿರಿಯುಂಟುಮಾಡುತ್ತಿರಬಹುದು. ಆಗ ಮಗು ಸಿಕ್ಕಿದನ್ನೆಲ್ಲಾ ಕಚ್ಚಲು ಶುರುಮಾಡುತ್ತದೆ. ತು-ರಿಕೆಯಂತ ಅನುಭವವಾಗಬಹುದು, ಈ ಸಮಯದಲ್ಲಿ ಮಗುವನ್ನು ಸಮಾಧಾನಪಡಿಸಲು, ನೀವು ಹಲ್ಲುಜ್ಜುವ ಆಟಿಕೆಗಳನ್ನು ಖರೀದಿಸಬಹುದು. ಈ ಆಟಿಕೆಗಳನ್ನು ಬಿಪಿಎ-ಮುಕ್ತ ವಸ್ತುಗಳಿಂದ ತಯಾರಿಸಿದ್ದಾಗಿರಬೇಕು ಮತ್ತು ಅವು ತೀಕ್ಷ್ಣವಾಗಿರಬಾರದು ಯಾವುದೇ ಗಾಯಗಳನ್ನು ಮಾಡುವಂತಿರಬಾರದು.

ಈ ಆಟಿಕೆಗಳು ಮೃದುವಾಗಿರಬೇಕು. ಸಿಲಿಕಾನ್ ಟೀತರ್ ಮತ್ತು ಮರದ ಮೃದುವಾದ ಆಟಿಕೆಗಳು ಹೆಚ್ಚು ಜನಪ್ರಿಯವಾಗಿವೆ. ಅಲ್ಲದೆ ನೀವು ನವಜಾತ ಶಿಶುವಿಗೆ ಡೈಪರ್ ಬ್ಯಾಗ್ ಆರ್ಗನೈಸರ್ ಅನ್ನು ಸಹ ನೀಡಬಹುದು.





# ನೀವೂ ಈ ರೀತಿ ಚಹಾ ತಯಾರಿಸಿ ಕುಡಿತಿದ್ರೆ, ಅದು ತಪ್ಪು ಅಂತಿದ್ದಾರೆ ಡಾಕ್ಟರ್!



ತಪ್ಪಾದ ಸಮಯದಲ್ಲಿ ಚಹಾವನ್ನು ಕುಡಿಯುವುದರಿಂದ ಅದು ಹೊಟ್ಟೆಗೆ ಸಂಬಂಧಿಸಿದ ಸಮಸ್ಯೆಗೆ ಕಾರಣವಾಗಬಲ್ಲದು. ಅದಕ್ಕಾಗಿ ಚಹಾವನ್ನು ಆರೋಗ್ಯಕರವಾಗಿ ಮಾಡುವುದು ಹೇಗೆ ಎಂಬುವುದನ್ನು ಡಾ.ಕುಲ್ಬೀರ್ ತಮ್ಮ ಇನ್ಸ್‌ಸ್ಟಾಗ್ರಾಮ್ ವಿಡಿಯೋದಲ್ಲಿ ತಿಳಿಸಿಕೊಟ್ಟಿದ್ದಾರೆ.

ನಮ್ಮಲ್ಲಿ ಕೆಲವರಿಗೆ ಹಾಲು ಹಾಕಿ ತಯಾರಿಸಿರುವ ಚಹಾ ಇಷ್ಟವಾದರೆ ಇನ್ನೂ ಕೆಲವರು ಹಾಲು ಹಾಕದೇ ಇರುವ ಬ್ಲ್ಯಾಕ್ ಟೀ, ಗ್ರೀನ್ ಟೀ ಕುಡಿಯುತ್ತಾರೆ. ಆದರೆ ಸಾಮಾನ್ಯವಾಗಿ ಮನೆಯಲ್ಲಿ ಚಹಾ ತಯಾರಿಸಿ ಕುಡಿಯುವವರು ಹಾಲು ಹಾಕಿಯೇ ಚಹಾ ತಯಾ-ರಿಸುತ್ತಾರೆ. ಆದರೆ ವೈದ್ಯರು ಇದನ್ನು ಉತ್ತಮ ಎಂದು ಪರಿಗಣಿಸುವುದಿಲ್ಲ. ಆದರೂ ಕೆಲವರ ದಿನಕ್ಕೆ ನಾಲ್ಕೈದು ಕಪ್ ಚಹಾ ಕುಡಿಯುತ್ತಾರೆ. ಆದರೆ ನಿಮಗೆ ಗೊತ್ತಾ ನೀವು 10 ಕಪ್ ಚಹಾ ಕುಡಿಯುವುದಕ್ಕಿಂತಲೂ ಅಪಾಯಕಾರಿ ನೀವು ಮಾಡುವ ಈ ಒಂದು ತಪ್ಪು ಎನ್ನುತ್ತಾರೆ ಡಾ.ಕುಲಬೀರ್ ಜಾಖರ್

**ಟೀ ಕುಡಿಯುವ ಸಮಯ ಮುಖ್ಯ**

ನೀವು ದಿನವಿಡೀ ಬೇಕಾದರೆ 10 ಕಪ್ ಚಹಾ ಕುಡಿಯಿರಿ ಇದರಿಂದ ಆರೋಗ್ಯಕ್ಕೆ ಯಾವುದೇ ಹಾನಿಯಾಗುವುದಿಲ್ಲ. ಆದ-ರೆ ನೀವು ಯಾವ ಸಮಯದಲ್ಲಿ ಚಹಾ ಕುಡಿಯುತ್ತೀರಿ ಎನ್ನುವುದು ಮುಖ್ಯ. ನೀವು ತಪ್ಪಾದ ಸಮಯದಲ್ಲಿ ಚಹಾ ಕುಡಿದರೆ ಅದು ಗಂಭೀರ ಹಾನಿಯನ್ನುಂಟು ಮಾಡಬಲ್ಲದು. ಸುಮಾರು 90% ದಷ್ಟು ಜನರು ಇದೇ ತಪ್ಪನ್ನು ಮಾಡುತ್ತಿದ್ದಾರೆ ಎನ್ನುತ್ತಾರೆ ವೈದ್ಯರು.

**ಜೀರ್ಣಕ್ರಿಯೆಗೆ ಹಾನಿ**

ಚಹಾ ಕುಡಿಯುವುದರಿಂದ ಹೊಟ್ಟೆ ಮತ್ತು ಜೀರ್ಣಕ್ರಿಯೆಗೆ ಹಾನಿಯಾಗುತ್ತದೆ ಎಂದು ತಜ್ಞರು ನಂಬುತ್ತಾರೆ. ಖಾಲಿ ಹೊಟ್ಟೆಯಲ್ಲಿ ಚಹಾ ಕುಡಿಯುವುದು ಅತ್ಯಂತ ಅಪಾಯಕಾರಿ ಎಂದು ಅವರಿಗೆ ಹೇಳಿದರು. ನೀವು ದಿನಕ್ಕೆ 5 ಚಹಾಗಳನ್ನು ಸೇವಿಸಿದರೆ, ಬೆಳಗಿನ ಉಪಾಹಾರದ ಮೊದಲು ಚಹಾವನ್ನು ಬಿಟ್ಟುಬಿಡಿ. ಇದು ಅನಾರೋಗ್ಯಕರವಾಗಿದೆ. ಇದು ಆಮ್ಲೀಯತೆಯನ್ನು ಹೆಚ್ಚಿಸಬಹುದು.

ವೈದ್ಯರ ಸಲಹೆ

**ಕೃತಕ ಸಿಹಿಕಾರಕವನ್ನು ಬಳಸಬೇಡಿ**

ಅನೇಕ ಜನರು ಸಕ್ಕರೆಯ ಬದಲಿಗೆ ಕೃತಕ ಸಿಹಿಕಾರಕವನ್ನು ಬಳಸುತ್ತಾರೆ. ಸಾಮಾನ್ಯವಾಗಿ ಮಧುಮೇಹ ಇರುವವರು ಅಥವಾ ತೂಕ ಇಳಿಸುವ ಆಹಾರಕ್ರಮದಲ್ಲಿರುವವರು ಇದನ್ನು ಹೆಚ್ಚು ಮಾಡುತ್ತಾರೆ. ಆದರೆ ವೈದ್ಯರು ಅದನ್ನು ಸೇರಿಸಲು ಸಂಪೂರ್ಣವಾಗಿ ನಿರಾಕ-ರಿಸಿದ್ದಾರೆ. ಬದಲಿಗೆ ಮನೆಯಲ್ಲಿ ಇಟ್ಟಿರುವ ಸಾಮಾನ್ಯ ಸಕ್ಕರೆಯನ್ನು ಹಾಕಿದರೆ ಉತ್ತಮ ಎಂದಿದ್ದಾರೆ.

**ಚಹಾವನ್ನು ಆರೋಗ್ಯಕರವಾಗಿ ಮಾಡುವುದು ಹೇಗೆ?**

ಚಹಾ ಕುಡಿಯುವುದು ಹಾನಿಕಾರಕ ಎಂದು ವೈದ್ಯರು ಹೇಳಿದ್ದಾರೆ. ಆದರೆ ಇನ್ನೂ ಎರಡು ವಿಷಯಗಳನ್ನು ಸೇರಿಸದೆ ಅದನ್ನು ಸ್ವಲ್ಪ ಉತ್ತಮಗೊಳಿಸಬಹುದು. ಅದಕ್ಕೆ ಚಹಾ ತಯಾರಿಸುವಾಗ ಸಕ್ಕರೆಯನ್ನು ಹಾಕಬೇಡಿ. ನೀವು ಅದನ್ನು ಇನ್ನಷ್ಟು ಆರೋಗ್ಯಕರವಾಗಿಸಲು ಬಯಸಿದರೆ ಹಾಲು ಸೇರಿಸಬೇಡಿ. ತೆಳು ಬ್ಲ್ಯಾಕ್‌ಟೀಯನ್ನು ಕುಡಿಯುವುದು ಆರೋಗ್ಯಕ್ಕೆ ಸ್ವಲ್ಪ ಆರೋಗ್ಯಕರ.

**ಚಹಾದ ಬದಲಿಗೆ ಇದನ್ನು ಕುಡಿಯಬಹುದು**

ಚಹಾದ ಬದಲಿಗೆ 2 ಪಾನೀಯಗಳನ್ನು ಕುಡಿಯಲು ವೈದ್ಯರು ಸಲಹೆ ನೀಡಿದ್ದಾರೆ. ಅವರ ಪ್ರಕಾರ, ಗ್ರೀನ್ ಟೀ ಕುಡಿಯುವುದು ಹೆಚ್ಚಿನ ಪ್ರಯೋಜನಗಳನ್ನು ನೀಡುತ್ತದೆ. ಇದಲ್ಲದೆ, ತೆಳು ಮತ್ತು ಹಾಲುರಹಿತ ಕಾಫಿ ಕೂಡಾ ಆರೋಗ್ಯಕರ ಪಾನೀಯವಾಗಿದೆ.



# ಡ್ರಗ್ ಮಾಫಿಯ ಮಟ್ಟ ಹಾಕಲು ವಿಜಯೇಂದ್ರ ಆಗ್ರಹ




ಬೆಳಗಾವಿ: ಡ್ರಗ್ ಮಾಫಿಯದ ಹಿಂದಿರುವ ಬಲಾಢ್ಯರು, ದೇಶದ್ರೋಹಿಗಳನ್ನು ಮಟ್ಟ ಹಾಕುವ ಕೆಲಸವನ್ನು ರಾಜ್ಯ ಸರಕಾರ ಮಾಡಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ ಅವರು ಆಗ್ರಹಿಸಿದ್ದಾರೆ.

ಬೆಳಗಾವಿಯಲ್ಲಿ ಇಂದು ವಾಣಿಜ್ಯ ಮತ್ತು ವ್ಯಾಪಾರ ಪ್ರಕೋಷ್ಠದ ವತಿಯಿಂದ ಪ್ರತಿಭಟನೆ ನಡೆಯುತ್ತಿರುವ ಸ್ಥಳಕ್ಕೆ ಭೇಟಿ ನೀಡಿದ ಅವರು ಮಾತನಾಡಿದರು. ಸರಕಾರವು ಪರಿಸ್ಥಿತಿಯ ಗಂಭೀರತೆಯನ್ನು ಅರ್ಥ ಮಾಡಿಕೊಳ್ಳಬೇಕು. ಕೇವಲ ಸಣ್ಣಪುಟ್ಟ ವ್ಯಕ್ತಿಗಳನ್ನು ಬಂಧಿಸಿದರೆ ಸಾಲದು ಎಂದು ಒತ್ತಾಯಿಸಿದರು.

ಅಲ್ಲಿ ಇಲ್ಲಿ ಸಣ್ಣಪುಟ್ಟ ಡ್ರಗ್, ಗಾಂಜಾ ಮಾರಾಟಗಾರರನ್ನು ಬಂಧಿಸಿ ಆಮೇಲೆ ಜಾಮೀನಿನಲ್ಲಿ ಬಿಡುತ್ತಿದ್ದಾರೆ. ಸಮಸ್ಯೆಗಳ ಮೂಲಕ್ಕೆ ಹೋಗುತ್ತಿಲ್ಲ. ಎಲ್ಲಿಂದ ಸರಬರಾಜಾಗುತ್ತಿದೆ ಎಂದು ವಿವರ ಪಡೆಯುವುದು ಪೊಲೀಸರಿಗೆ ಕಷ್ಟದ ಕೆಲಸವಲ್ಲ ಎಂದು ತಿಳಿಸಿದರು.

ರಾಜ್ಯದ ಪ್ರತಿ ಜಿಲ್ಲೆ ಮತ್ತು ತಾಲ್ಲೂಕಿನಲ್ಲಿ ಮಾದಕವಸ್ತು ಕುರಿತಂತೆ ಜಾಗೃತಿ ಮೂಡಿಸುವ ಕೆಲಸವೂ ಆಗಬೇಕಿದೆ ಎಂದು ಅವರು ನುಡಿದರು. ಆಗ ಮಾತ್ರ ರಾಜ್ಯ ಸರಕಾರ ಎಚ್ಚತ್ತುಕೊಳ್ಳುತ್ತದೆ. ಇಲ್ಲವಾದರೆ ಕುಂಭಕರ್ಣ ನಿದ್ರೆಯಲ್ಲಿರುವ ರಾಜ್ಯ ಸರಕಾರ, ಮುಖ್ಯಮಂತ್ರಿಗಳು ಮತ್ತು ಗೃಹ ಸಚಿವರು ಬಿಗಿ ಕ್ರಮ ಕೈಗೊಳ್ಳಬೇಕಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಭಾ.ಜ.ಪಾ ಜಿಲ್ಲಾಧ್ಯಕ್ಷರಾದ ಸುಭಾಷ್ ಪಾಟೀಲ, ಶಾಸಕರಾದ ಧೀರಜ್ ಮುನಿರಾಜು, ಹರೀಶ್ ಪೂಂಜಾ, ರಾಜ್ಯ ವ್ಯಾಪಾರ ವಾಣಿಜ್ಯ ಪ್ರಕೋಷ್ಠ ಸಂಚಾಲಕ ವಿಜಯಕುಮಾರ ಕೊಡಗನೂರ,ಸಹ ಸಂಚಾಲಕರಾದ ಭವಾನಿ ಮೋರೆ, ರಾಜ್ಯ ಸಮಿತಿ ಸದಸ್ಯರಾದ ಜ್ಯೋತಿ ಶೆಟ್ಟಿ, ಪಿ.ಆರ್ ಸಂಜಯ್, ಚನ್ನಬಸಪ್ಪ ಹೊಸುರ, ರಾಜ್ಯ ಯುವ ಮೋರ್ಚಾ ಉಪಾಧ್ಯಕ್ಷ ಈರಣ್ಣ ಅಂಗಡಿ,ರಾಜ್ಯ ಮಾಧ್ಯಮ ಸಮಿತಿ ಸದಸ್ಯ ಶರತ್, ಜಿಲ್ಲಾ ಮಾಧ್ಯಮ ಪ್ರಮುಖ್ ಸಚಿನ್ ಕಡಿ, ಜಿಲ್ಲಾ ಎಸ್.ಸಿ ಮೋರ್ಚಾ ಅಧ್ಯಕ್ಷ ಯಲ್ಲೇಶ್ ಕೊಲಕಾರ, ಚೇತನ್ ಕತ್ತಿ ,ಭರತ ಕುಲಕರ್ಣಿ ಹಾಗೂ ಪ್ರಮುಖ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಉಪಸ್ಥಿತರಿದ್ದರು.

# ಅಖಿಲ ಭಾರತ ಎನ್ ಸಿ ಸಿ ಟ್ರ್ಯಾಕಿಂಗ್ (ಚಾರಣ) ಶಿಬಿರಕ್ಕೆ ಚಾಲನೆ

ಬೆಳಗಾವಿ17 : ಯುವ ಜನಾಂಗವು ದೇಶದ ಸಂಪತ್ತಾಗಿದ್ದು ಸಂಸ್ಕೃತಿ ಪರಂಪರೆ ಹಾಗೂ ಪರಿಸರವನ್ನು ತಿಳಿದುಕೊಳ್ಳುವುದು ಅವಶ್ಯವಾಗಿದೆ. ಪರಿಸರವನ್ನು ಸಂರಕ್ಷಿಸಿ ಅದನ್ನು ಪೋಷಿಸಿ ಬೆಳೆಸುವುದು ಕೂಡ ನಮ್ಮಕರ್ತವ್ಯ ಎನ್‌ಸಿಸಿಯ ಪ್ರಮುಖ ಧ್ಯೆಯವಾಗಿದೆ ಎಂದು ಕರ್ನಾಟಕ ಮತ್ತು ಗೋವಾ ಏನ್ ಸಿ ಸಿ ಡೈರೆಕ್ಟರೇಟ್ (ನಿರ್ದೇಶನಾಲಯ) ಡೆಪುಟಿ ಡೈರೆಕ್ಟರ್ ಆಫ್ ಜನರಲ್ ಬಿ ಅರುಣ್ ಕುಮಾರ್ ಹೇಳಿದರು. ಬೆಳಗಾವಿಯ ಜಾಧವ ನಗರದಲ್ಲಿ ಬೆಳಗಾವಿ ಎನ್‌ಸಿಸಿ ಗ್ರೂಪ್ ಅಡಿಯಲ್ಲಿ ಡಿಸೆಂಬರ 15 ದಿಂದ 22ರವರೆಗೆ ಜರುಗುತ್ತಿರುವ ಅಖಿಲ ಭಾರತ ಟ್ರ್ಯಾಕಿಂಗ್ (ಚಾರಣ) ಶಿಬಿರಕ್ಕೆ ಅವರು ಭೆಟ್ಟಿ ನೀಡಿ ಮಾತನಾಡಿದರು.

ಈ ಶಿಬಿರವು ಯುವಕರಲ್ಲಿ ಸಾಹಸ ಪ್ರವೃತ್ತಿಯನ್ನು ಮೂಡಿಸಲಿದೆ ಎಂದರು. ಯುವ ಸಮುದಾಯದಲ್ಲಿ ರಾಷ್ಟ್ರೀಯ ಹಾಗೂ ಪ್ರಜ್ಞೆಯನ್ನು ಮೂಡಿಸುವುದು ಪರಿಸರದ ಕಾಳಜಿಯ ಬಗ್ಗೆ ಜಾಗೃತಿಯನ್ನು ಹುಟ್ಟು ಹಾಕುವುದು ಶಿಬಿರದ ಉದ್ದೇಶವೆಂದರು. ವಿವಿಧ ರಾಜ್ಯಗಳಿಂದ ಆಗಮಿಸಿರುವ ವಿದ್ಯಾರ್ಥಿಗಳು ಒಟ್ಟಾಗಿ ಬೆಳಗಾವಿಯ ಸುತ್ತಮುತ್ತಲಿನ ಪ್ರಾಕೃತಿಕ ಸೌಂದರ್ಯವನ್ನು ಸವಿಯಲಿದ್ದಾರೆ. ಸೌಜನ್ಯತೆಗಳನ್ನು ಸಮಯ ಪಾಲನೆಯನ್ನು ಅಳವಡಿಸಿಕೊಂಡು



ಸಮಾಜಕ್ಕೆತಮ್ಮದೇ ಆದ ಕೊಡುಗೆಯನ್ನು ನೀಡಬೇಕು. ನಾವು ಪ್ರಕೃತಿಯ ಭಾಗವಾಗಿದ್ದು ಅಂತಹ ಪ್ರಕೃತಿ ಕಾಪಾಡಿಕೊಳ್ಳುವುದು ನಮ್ಮಕರ್ತವ್ಯವಾಗಿದೆ. ಪ್ರಕೃತಿಯೊಂದಿಗೆ ನಾವು ಬೆರೆಯಬೇಕು. ಪ್ರಕೃತಿ ಸೌಂದರ್ಯವನ್ನು ಸವಿಯಬೇಕು ಜಾಗೃತಿಯನ್ನು ಮುಟ್ಟಿಸಬೇಕು . ಮುಂದುವರಿದು ಅವರು ಮಾತನಾಡಿ, ಎನ್‌ಸಿಸಿಕೆಡೆಟ್‌ಗಳಲ್ಲಿ ಸಾಹಸಮಯ ಮತ್ತು ಪರಿಶೋಧನಾತ್ಮಕ ಮನೋಭಾವವನ್ನು ಬೆಳೆಸಿಸುವದು, ದೈಹಿಕ ಸಾಮಥ-್ಯ, ಸಹಿಷ್ಣುತೆ, ಆತ್ಮ ವಿಶ್ವಾಸ, ತಂಡದ ಮನೋಭಾವ ಮತ್ತು ಉತ್ಸಾಹವನ್ನು ಬೆಳೆಸಿಸುವದು. ಪ್ರಕೃತಿಯಲ್ಲಿಯ ಸಸ್ಯ ಮತ್ತು ಪ್ರಾಣಿಗಳ ಬಗ್ಗೆ ಪ್ರೀತಿಯನ್ನು ಬೆಳೆಸಿಸುವದು. ಪರಿಸರ ಅರಣ್ಯ, ವನ್ಯಜೀವಿ, ಪರಿಸರ ಸಮತೋಲನದ ಸಂರಕ್ಷಣೆಗಾಗಿ ಕಾಳ-ಜಿಯನ್ನು ಅಭಿವೃದ್ಧಿಪಡಿಸುವುದು, ಪ್ರಾಚೀನ ಸ್ಮಾರಕಗಳು ಮತ್ತು ಸ್ವಚ್ಛತೆ, ಸ್ಥಳೀಯ ಪದ್ಧತಿ ಕುರಿತು ಅರಿವನ್ನುಂಟು ಮಾಡುವುದು ಈ ಶಿಬಿರದ ಉದ್ದೇಶವಾಗಿದೆ ಎಂದು ಹೇಳಿದರು. ದೇಶದ ನಾನಾ ಭಾಗಗಳಿಂದ ಆಗಮಿಸಿರುವ ಎನ್‌ಸಿಸಿ ಕೆಡೆಟ್‌ಗಳು ಒಟ್ಟಿಗೆ ವಾಸಿಸುವ ಮೂಲಕ ರಾಷ್ಟ್ರೀಯ ಪ್ರಜ್ಞೆಏಕತೆಯನ್ನು ಉತ್ತೇಜಿಸಲಿದ್ದಾರೆ ಹೇಳಿದರು.

ಈ ಚಾರಣ ಶಿಬಿರದಲ್ಲಿ ಕರ್ನಾಟಕ, ಗೋವಾ, ಆಂಧ್ರಪ್ರದೇಶ, ತೆಲಂಗಾಣ, , ಗುಜರಾತ್, ತಮಿಳುನಾಡು, ಪಾಂಡಿಚೇರಿ ಕೇರಳ, ಲಕ್ಷದೀಪ ದಿಂದ 510 ಎನ್ ಸಿ ಸಿ ಕೆಡೆಟ್ ಗಳು, 15ಟಿಛಿಛಿ ಅಧಿಕಾರಿಗಳು ಪಾಲ್ಗೊಂಡಿದ್ದಾರೆ.

ಈ ಸಂದರ್ಭದಲ್ಲಿ ಬೆಳಗಾವಿ ಗ್ರೂಪ್ ಎನ್‌ಸಿಸಿಯ ಕಮಾಂಡರ ಕರ್ನಲ್ ಮೋಹನ್ ನಾಯಕ್, 26 ಕರ್ನಾಟಕ ಏನ್ ಸಿ ಸಿ ಬಟಾಲಿಯನ್ ಅಧಿಕಾರಿ ಕರ್ನಲ್ ಸುನಿಲ್ ದಾಗರ್, ಲೆಫ್ಟಿನೆಂಟ್ ಕರ್ನಲ್ ಸಿದ್ದಾಥ-್ ರೇಡು, 8 ಏರ್ ಕಮಾಂಡರ್ ದೀಪಕ್ ಬಲೇರಾ, ಸುಬೇದಾರ್ ಮೇಜರ್‌ಕಲ್ಲಪ್ಪ ಪಾಟೀಲ್, ಮೆಜರ ಮಹೇಶ ಗುರನಗೌಡರ ಉಪಸ್ಥಿತರಿದ್ದರು.

# ನಿಸ್ವಾರ್ಥ ಸೇವಾಕಾರ್ಯ ಎಲ್ಲರಲ್ಲಿಬರಲಿ-ವೇ.ಜೋಶಿ

ತಾಳಿಕೋಟೆ, ಎಲ್ಲ ಸಮಸ್ಯೆಗಳಿಗೆ ಪರಿಹಾರವಾಗಬೇಕಾದರೆ ಸರಿಯಾದ ಜ್ಞಾನವಿದ್ದರೆ ಮಾತ್ರ ಸಾದ್ಯವಾಗಲಿದೆ ತಪ್ಪಾಗಿ ಯೋಚಿಸುವದು ಜೀವನದಲ್ಲಿ ಸಮಸ್ಯೆಗೆ ಕಾರಣವಾಗುತ್ತದೆ ಜೀವನದ ಅಭಿವೃದ್ಧಿ ಹಾಗೂ ಬೆಳವಣಿಗೆಯಾಗಲು ನಿಸ್ವಾರ್ಥ ಸೇವೆ ಮಾಡುವ ಕಾರ್ಯವಾಗಬೇಕೆಂದು ಶ್ರೀ ಕೃಷ್ಣ ಪರಮಾತ್ಮನು ಅರ್ಜುನನಿಗೆ ಉಪದೇಶಿಸಿದ್ದನ್ನು ಇಂದಿನ ದಿನಮಾನದಲ್ಲಿ ನಾವೆಲ್ಲರೂ ಅರೀತುಕೊಳ್ಳಬೇಕಾಗಿದೆ ಎಂದು ಖ್ಯಾತ ಜ್ಯೋತಿಷ್ಯ ಶಾಸ್ತ್ರ ಪರಿಣಿತರಾದ ವೇ.ವಸಂತಬಟ್ ಜೋಶಿ ಅವರು ನುಡಿದರು.



ರವಿವಾರರಂದು ಸ್ಥಳೀಯ ಶ್ರೀ ಮದ್ ಭಗವದ್ಗೀತಾ ಸೇವಾ ಸಮಿತಿ ವತಿಯಿಂದ ಶ್ರೀ ಕೃಷ್ಣ ಮಂದಿರದಲ್ಲಿ ಏರ್ಪಡಿಸಲಾದ 53ನೇ ವರ್ಷದ ಗೀತಾ ಪ್ರವಚನದ ಮಹಾ ಮಂಗಲ ಕಾರ್ಯಕ್ರಮದಲ್ಲಿ ಸನ್ಮಾನ ಸ್ವಿಕರಿಸಿ ಮಾತನಾಡುತ್ತಿದ್ದ ಅವರು ದಿನದ ಎಲ್ಲ ಕೆಲಸ ಕಾರ್ಯಗಳನ್ನು ದೇವರಿಗೆ ಸಮರ್ಪಿಸುವಂತಹ ಕಾರ್ಯವಾಗಬೇಕು ಫಲಿತಾಂಶ ಕುರಿತು ಅಪೇಕ್ಷೀಸುವದು ಬೇಡಾ ನಮ್ಮ ಪಾಡಿಗೆ ನಾವು ಶಾಂತ ಚಿತ್ತತೆಯಿಂದ ಕೆಲಸ ಮಾಡಬೇಕೆಂಬ ವಿಚಾರವನ್ನೂ ಸಹ ಎಲ್ಲರೂ ಅರೀತುಕೊಳ್ಳಬೇಕಾಗಿದೆ ಎಂದರು. ಧರ್ಮಕ್ಕೆ ಆಣಿಯಾದಾಗ ಧರ್ಮ ಉಳಿಸಲು ಹಾಗೂ ಧರ್ಮ ಬೆಳವಣಿಗೆಗೆ ಸಜ್ಜನತೆ ಹೊಂದಿದವರನ್ನು ರಕ್ಷೀಸುವ ಕಾರ್ಯವಾಗಲಿ ಇದರಿಂದ ದುರ್ಜನರು ತಾವಾಗಿಯೇ ನಾಶವಾಗುವಂತಹ ಸ್ಥಿತಿಯನ್ನು ಭಗವಂತನು ತರುತ್ತಾನೆಂದರು. ಪ್ರತಿಯುಗದಲ್ಲಿ ಭಗವಂತನೆಂಬುವನು ಅವತರಿಸಿ ಬರುತ್ತಾನೆ ಸತ್ಯದ ಹಾಗೂ ಧರ್ಮದ ಕುರಿತು ಭಕ್ತ ಸಮೂಹಕ್ಕೆ ತಿಳಿಸಿ ಅಂತವರನ್ನು ಗೌರವದಿಂದ ಕಾಣುವದರೊಂದಿಗೆ ಅವರ ಬೇಕು ಬೇಡಿಕೆಗಳನ್ನೂ ಸಹ ಭಗವಂತ ಇಡೇ-ರಿಸುತ್ತಾನೆಂಬ ಮಾತನ್ನೂ ಸಹ ಶ್ರೀ ಕೃಷ್ಣ ಪರಮಾತ್ಮ ಅರ್ಜುನನಿಗೆ ಉಪದೇಶಿಸಿದ್ದನ್ನು ಭಕ್ತ ಸಮೂಹಕ್ಕೆ ಮನವರಿಗೆ ಮಾಡಿದ ಜೋಶಿ ಅವರು ಭಗವದ್ಗೀತೆಯ 18 ಅಧ್ಯಾಯದಲ್ಲಿಯ ಶ್ರೀ ಕೃಷ್ಣ ಪರಮಾತ್ಮನು ಅರ್ಜುನನಿಗೆ ನೀಡಿದ ಸಂದೇಶ ಕುರಿತು ಭಹು ಮಾರ್ಮಿಕವಾಗಿ ವಿವರಿಸಿದರು.

ಇನ್ನೋರ್ವ ಸನ್ಮಾನ ಸ್ವಿಕರಿಸಿದ ಹಿರಿಯ ಪತ್ರಕರ್ತರಾದ ಜಿ.ಟಿ.ಘೋರ್ಪಡೆ ಅವರು ಮಾತನಾಡಿ ಶ್ರೀ ಮದ್ ಭಗವದ್ಗೀತಾ ಸೇವಾ ಸಮಿತಿ ಪ್ರತಿವರ್ಷ ಆಚರಿಸಿಕೊಂಡು ಬರಲಾಗುತ್ತಿರುವ ಗೀತಾ ಪ್ರವಚನದ ಕಾರ್ಯಕ್ರಮವು ಅತೀವ ಮಹತ್ವ ಪಡೆಯುತ್ತಾ ಸಾಗಿದೆ ಶ್ರೀ ಕೃಷ್ಣ ಪರಮಾತ್ಮನ ಮಂದಿರ ನಿರ್ಮಾಣ ಮಾಡುವದರೊಂದಿಗೆ ಈ ಸಮೀತಿಯವರು ಭಕ್ತಿಭಾವದೊಂದಿಗೆ ಸಾಗಿದ್ದಾರೆ ಇನ್ನೂ ಈ ಸಮಿತಿ ಉತ್ತರೋತ್ತರವಾಗಿ ಬೆಳೆಯಬೇಕಾದರೆ ಶ್ರೀ ಕೃಷ್ಣ ಪರಮಾತ್ಮ ಹೇಳಿದಂತೆ ಬ್ರಾಹ್ಮಣ, ಕ್ಷತ್ರೀಯ, ವೈಶ್ಯ, ಶೂದ್ರ ಈ ಎಲ್ಲ ಜಾತಿ ಧರ್ಮದವರನ್ನೋಳಗೊಂಡು ಶ್ರೀ ಕೃಷ್ಣ ಪರಮಾತ್ಮನ ಸೇವಾ ಕಾರ್ಯಕ್ಕೆ ಮುಂದಾದರೆ ಇನ್ನೂ ಹೆಚ್ಚಿಗೆ ಈ ಒಂದು ಸಮಿತಿ ಬೆಳೆಯುವದರಲ್ಲಿ ಯಾವ ಸಂಶಯವಿಲ್ಲಾ ಕಾರಣ ಶ್ರೀ ಕೃಷ್ಣ ಪರಮಾತ್ಮನ ಅನುಗ್ರಹ ಎಲ್ಲರ ಮೇಲಿದೆ ಶ್ರೀ ಕೃಷ್ಣ ಪರಮಾತ್ಮ ಅರ್ಜುನನಿಗೆ ಹೆಚ್ಚಿಗೆ ಉಪದೇಶ ನೀಡಲು ಕಾರಣವೇನೆಂದರೆ ಆತ ಕ್ಷತ್ರೀಯ ಧರ್ಮದ ಶೂರ ದೀರನಾಗಿದ್ದ ಕಾರಣ ಆತನಿಂದ ದೇಶ ಎಲ್ಲವೂ ರಕ್ಷಣೆ ಆಗಲಿದೆ ಎಂಬ ವಿಸ್ವಾಸವನ್ನು ಪಡೆದಂತಹ ಶ್ರೀ ಕೃಷ್ಣ ಪರಮಾತ್ಮ ಅರ್ಜುನನಿಗೆ ಹೆಚ್ಚಿಗೆ ಪ್ರೋತ್ಸಾಹ ನೀಡಲು ಕಾರಣವಾಗಿತ್ತೆಂದು ಒತ್ತಿ ಹೇಳಿದ ಘೋರ್ಪಡೆ ಅವರು ಗುರುವಿನ ಶಕ್ತಿ ಎಂತಹದ್ದು ಎಂಬುದರ ಕುರಿತು ಗುರು ದ್ರೋಣಾಚಾರ್ಯರ, ಅರ್ಜುನ, ಏಕಲವ್ಯ ಅವರ ನಡೆದಂತಹ ಚಿಕ್ಕ ಕಥೆಯೊಂದನ್ನು ಹೇಳಿ ಮನವರಿಕೆ ಮಾಡಿ ಗುರುವಿನಲ್ಲಿ ನಂಬಿಕೆ ಇಟ್ಟವ ಆತನಿಗೆ ಸದಾ ಗೆಲವು ಸಾದಿಸಲಿದೆ ಎಂಬುದನ್ನು ಅರ್ಥೈಸಿ ತೋ-ರಿಸಿದರು.

ಇನ್ನೋರ್ವ ನಿವೃತ್ತ ಪ್ರಾಚಾರ್ಯ ಡಾ.ಜಿ.ಎಂ.ಘೀವಾರಿ ಅವರು ಮಾತನಾಡಿ ಜ್ಞಾನವೆಂದರೆ ಲೌಕಿಕ ಜ್ಞಾನ, ನಿಜವಾದ ಜ್ಞಾನ ಈ ಎರಡರ ವ್ಯತ್ಯಾಸ ಕುರಿತು ತಿಳಿ ಹೇಳಿದ ಅವರು ನಾನು ಯಾರು ನಾನು ಎಲ್ಲಿಂದ ಬಂದಿದ್ದೇನೆ ನನ್ನ ಉದ್ದೇಶ ಏನು ಎಂಬುದರ ಕುರಿತು ಬ್ರಹ್ಮ ಜ್ಞಾನವೆಂಬುದನ್ನು ತಿಳಿದು ಕೊಳ್ಳಬೇಕು ಆದ್ಯಾತ್ಮೀಕ ಎಂಬುದಕ್ಕೆ ಮಹತ್ವ ಕೊಡದೇ ಲೌಕಿಕಕ್ಕೆ ಇಂದಿನ ದಿನಮಾನದಲ್ಲಿ ಮಹತ್ವ ಕೊಡಲಾಗುತ್ತದೆ ಎಂದು ವಿಷಾದಿಸಿದ ಅವರು ಭಗವಂತ ಹೇಳುವದೇನೆಂದರೆ ಜ್ಞಾನಕ್ಕೆ ಯಾವ ಜಾತಿ ಅಗತ್ಯವಿಲ್ಲಾ ಆದ-್ಯಾತ್ಮ ಎಂಬುದಕ್ಕೆ ಶ್ರದ್ದೆ ಗಟ್ಟಿಯಾದ ನಂಬಿಕೆ ಬೇಕು ನಿತ್ಯ ಜೀವನದಲ್ಲಿ ಭಗವಂತನ ನಾಮ ಸ್ಮರಣೆ ಮಾಡಬೇಕೆಂದರು.

ಇನ್ನೋರ್ವ ಸನ್ಮಾನ ಸ್ವಿಕ-ರಿಸಿದ ಮಹಾ ಪ್ರಸಾದದ ಸೇವಾ ಕಾರ್ಯ ಮಾಡಿದಂತಹ ಶ್ರೀ ನಿಮಿಷಾಂಭಾ ಏಜ್ಯೂಕೇಶನ್ ಸೋಸಾಯಿಟಿ ಅಧ್ಯಕ್ಷ ಘನಶಾಮ ಚವ್ಹಾಣ ಅವರು ಮಾತನಾಡಿ ಪ್ರತಿವರ್ಷ ಗೀತಾ ಪ್ರವಚನ ಸಾಗಿ ಬರುತ್ತಿರುವದು ಒಂದು ಮಹತ್ವದ ಹಾಗೂ ಭಕ್ತರನ್ನು ಸನ್ಮಾರ್ಗದತ್ತ ಕೊಂಡೊಯುವಂತಹ ಕಾರ್ಯ ಇದಾಗಿದೆ ಈ ಪ್ರವಚನ ಸೇವಾ ಸಮಿತಿಯು ಇನ್ನೂ ಹೆಚ್ಚಿಗೆ ತಮ್ಮ ಸೇವಾ ಕಾರ್ಯದಲ್ಲಿ ಮುಂದುವರೆಸುವ ಕಾರ್ಯವಾದರೆ ಭಕ್ತ-ರಿಂದ ಶ್ರೀ ಕೃಷ್ಣ ದೇವಾಲಯ ಇನ್ನೂ ಹೆಚ್ಚಿಗೆ ಭಕ್ತರನ್ನು ಪಡೆಯುವ ಕಾರ್ಯದೊಂದಿಗೆ ಉನ್ನತ ಸ್ಥಾನಮಾನ ಹೊಂದಲಿದೆ ಎಂದರು.

ಸಮಿತಿಯ ಹಿರಿಯರಾದ ಶ್ರೀಮತಿ ಶಾಂತಾಬಾಯಿ ನೂಲಿಕರ ಅವರು ಮಾತನಾಡಿದರು.

ಇದೇ ಸಮಯದಲ್ಲಿ ವಿಧ್ಯಾದರ ಗೊಟಗುಣಕಿ, ಸುಪೂರ್ಣಾ ಯಾದವಾಡ, ಗುಂಡಬಟ್ ಜೋಶಿ, ಅವರಿಗೆ ಸನ್ಮಾನಿಸಿ ಗೌರವಿಸಲಾಯಿತು.

ಇದೇ ಸಮಯದಲ್ಲಿ ಗೋ ಪೂಜೆ, ತುಳಸಿ ಅರ್ಚನೆ, ಗುರು ಪೂಜೆ, ವ್ಯಾಸ ಪೂಜೆ, ಗುರುದಕ್ಷೀಣೆ, ಕಾರ್ಯಕ್ರಮಗಳು ಜರುಗಿದವು.

ಕಾರ್ಯಕ್ರಮದ ಮೊದಲಿಗೆ ಮುಂಜಾನೆ ಶ್ರೀ ಕೃಷ್ಣ ಪರಮಾತ್ಮನ ಮಹಾಮೂರ್ತಿಗೆ ಮಹಾಭಿಷೇಕ, ಬಿಲ್ವಾರ್ಚನೆ, ಪುಷ್ಪಾರ್ಚನೆ, ಮಹಾ ಮಂಗಳಾರತಿ ಕಾರ್ಯಕ್ರಮವನ್ನು ವೇ. ಗುಂಡಬಟ್ ಜೋಶಿ ಅವರು ನೆರವೇ-ರಿಸಿದರು.

ಈ ಸಮಯದಲ್ಲಿ ವೇ. ವೆಂಕಟೇಶ ಗ್ರಾಂಪೊರೊಹಿತ, ಶ್ರೀಧರ ಗ್ರಾಂಪೊರೊಹಿತ, ಹಾಗೂ ಶ್ರೀಮತಿ ಶಾಂತಾಬಾಯಿ ನೂಲಿಕರ, ಡಾ.ಬಿ. ಎಸ್.ಯಾದವಾಡ, ಶ್ರೀಮತಿ ಶೋಭಾ ಸುಭೇದಾರ, ಗುರು ಕುಲಕರ್ಣಿ, ಎಸ್. ಎಂ.ಪಾಲ್ಕಿ, ಘನಶಾಮ ಚವ್ಹಾಣ, ರವಿ ಕುಲಕರ್ಣಿ, ಮಾಣಿಕರಾವ್ ಕುಲಕರ್ಣಿ, ನಾಗನಾಥ ದೇಶಪಾಂಡೆ, ಲಕ್ಷ್ಮೀಬಾಯಿ ದೇಶಪಾಂಡೆ, ಬೋರಮ್ಮ ಕುಂಭಾರ, ನಿರ್ಮಲಾ ಕುಲಕರ್ಣಿ, ನಳನಿ ಯಾದವಾಡ, ಶಶಿಕಲಾ ಕುಲಕರ್ಣಿ, ರೇಖಾ ನಾಡಿಗೇರ, ಸೀಮಾ ಚವ್ಹಾಣ, ಜಯಶ್ರೀ ಘಾವಡೆ, ಸೀತಾಬಾಯಿ ಜೋಶಿ, ಉಮಾ ಘೀವಾರಿ, ಸಂಜೀವ ಗ್ರಾಂಪೊರೊಹಿತ, ಡಾ.ಜಿ.ಎಂ.ಘೀವಾರಿ, ನಿಂಗಣ್ಣ ಬ್ಯಾಕೋಡ, ಭೀಮರಾವ್ ಕುಲಕರ್ಣಿ, ನಿಂಗೋಜಿ ಕುಲಕರ್ಣಿ, ಮೊದಲಾದವರು ಇದ್ದರು.

ಮಲ್ಲಯ್ಯ ಗೊಟಗುಣಕಿ ನಿರೂಪಿಸಿದರು.

# ಮಾಚಕನೂರಿನ ಹೊಳೆಬಸವೇಶ್ವರ ಜಾತ್ರೆ ಆರಂಭ

ಮುಧೋಳ : ಘಟಪ್ರಭಾ ನದಿಯ ದಂಡೆಯ ಮೇಲೆ ನಿರ್ಮಾಣಗೊಂಡಿರುವ ಮಾಚಕನೂರ ದೇವಸ್ಥಾನಕ್ಕೆ ಹೊಳೆಬಸವೇಶ್ವರ ದೇವಸ್ಥಾನವೆಂದೇ ಪ್ರಖ್ಯಾತವಾಗಿದೆ. ಈ ದೇವಸ್ಥಾನದ ಜಾತ್ರಾ ಮಹೋತ್ಸವ ಆರಂಭವಾಗಿದ್ದು ಡಿ.19ರವರೆಗೆ ನಡೆಯಲಿದೆ. ಡಿ. 15 ರಂದು ಬಾಳೆಕಂಬದ ಮಹಾಪೂಜೆ, 16ರಂದು ಕಾರ್ತಿಕೋತ್ಸವ ನಡೆಯಲಿದೆ. ಖ.18ರಂದು ಮಧ್ಯಾಹ್ನ 3 ಘಂಟೆಗೆ ಜಂಗಿ ನಿಕಾಲಿ ಕುಸ್ತಿಗಳು ನಡೆಯಲಿವೆ. 19ರಂದು ನಂದಿಕೊಲುಗಳ ಪೂಜೆ ಹಾಗೂ ಮೆರವಣಿಗೆ ನಡೆಯಲಿದೆ.

ಶ್ರೀಕ್ಷೇತ್ರ ಮಾಚಕನೂರ ಹೊಳೆಬಸವೇಶ್ವರ ದೇವಸ್ಥಾನ ಶಿಲ್ಪಕಲಾ ಆಗರವೇ ಆಗಿದೆ. ಪ್ರತಿ ಯುಗಾದಿ ಅಮವಾಸ್ಯೆಯಂದು ಸೂರ್ಯೋದಯದ ಕಿರಣಗಳು ಹೊಳೆಬಸವೇಶ್ವರ ಸ್ವಾಮಿಯನ್ನು ಸ್ಪರ್ಶಿಸುವುದು ಇಲ್ಲಿನ ವಿಶೇಷವಾಗಿದೆ. ಸಕಲರ ಇಷ್ಠಾರ್ಥ ಪೂರೈಸುವ ಐತಿಹಾಸಿಕ ಪರಂಪರೆಯ ಪ್ರತೀಕವಾಗಿದೆ. ಇದನ್ನು ಕಲ್ಯಾಣ ಚಾಲುಕ್ಯರು ಕ್ರಿ.ಶ. 8ನೇ ಶತಮಾನದಲ್ಲಿ ನಿರ್ಮಿಸಿದ್ದಾರೆ. ಕಟ್ಟಡದ ಮತ್ತು ತಲ ವಿನ್ಯಾಸ, ಗೋಡೆ ರಚನೆ, ಅದರ ಮೇಲಿನ ಅಲಂಕಾರಗಳು, ಗೋಪುರಗಳು, ಶಿಖರಗಳ ರಚನೆ, ಅದರ ಮೇಲಿನ ಅಲಂಕಾರಗಳು, ಗೋಪುರಗಳು, ಶಿಖರಗಳ ರಚನೆ ಹಾಗೂ ಕಂಬಗಳ ನಿರ್ಮಾಣದಲ್ಲಿ



ಕಂಡುಬರುವ ಕೌಶಲ್ಯ ದೇವಸ್ಥಾನದಲ್ಲಿ ಕಾಣಬಹುದು. ಬುತ್ತಿಪೂಜೆ, ಎಲೆಪೂಜೆ ಮತ್ತು ಮಹಾರುದ್ರಾಭಿಷೇಕ ಸೇರಿದಂತೆ ಅನೇಕ ಧಾರ್ಮಿಕ ಕಾರ್ಯಗಳು ಜರುಗಲಿವೆ. ಕಮೀಟಿಯವರು ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

# ಹಿಂದೂ ರಾಷ್ಟಕ್ಕಾಗಿ ಕಾನೂನು ಹೋರಾಟ : ಬಲದೇವ




ಮುಧೋಳ: ಸ್ವಾತಂತ್ರ ಪೂರ್ವ ಅಖಂಡವಾಗಿ ಇದ್ದ ಭಾರತವನ್ನು 1947ರ ನಂತರ ಇಬ್ಭಾಗ ಆದಾಗ ಪಾಕಿಸ್ತಾನ ಇಸ್ಲಾಮಿಕ ರಾಷ್ಟ್ರವಾಯಿತು. ಆದರೆ ಭಾರತ ಹಿಂದೂ ರಾಷ್ಟ್ರವೆಂದು ಘೋಷಣೆ ಮಾಡಲಿಲ್ಲ, 1976.ರಲ್ಲಿ ಇಂದಿರಾ ಗಾಂಧಿಯವರು ಜಾತ್ಯಾತೀತ ಮತ್ತು ಸಮಾಜವಾದ ಎಂಬ ಎರಡು ಶಬ್ದಗಳನ್ನು ಸೇರಿಸಿ ಹಿಂದೂಗಳಿಗೆ ಅನ್ಯಾಯ ಮಾಡಿದರು. ಈಗ ಈ ಸಬ್ದ ತೆಗೆದು ಹಿಂದೂ ರಾಷ್ಟ್ರವನ್ನಾಗಿಸಲು ಕಾನೂನು ಮಾರ್ಗದಲ್ಲಿ ಹೋರಾಟ ಮಾಡಬೇಕು. ಎಂದು ನ್ಯಾಯವಾದಿ ಬಲದೇವ ಸಣ್ಣಕ್ಕಿ ಹೇಳಿದರು.

ನಗರದಲ್ಲಿ ಹಿಂದೂ ಜಾಗೃತಿ ಸಮೀತಿ ಹಮ್ಮಿಕೊಂಡ ಜಿಲ್ಲಾ ಮಟ್ಟದ ಹಿಂದೂ ರಾಷ್ಟ್ರ ಅಧಿವೇಶನವನ್ನು ದೀಪ ಬೆಳಗಿಸಿ ಕಾರ್ಯಕರ್ತರನ್ನು ಉದ್ದೇಶಿಸಿ ಅವರು ಮಾತನಾಡಿದರು.

ನಮ್ಮ ದೇಶದಲ್ಲಿ ಪರಮೇಶ್ವರಿ ಶಕ್ತಿಯಿದೆ, ಅನೇಕ ಸಂಸ್ಕೃತಿಗಳು ಇತಿಹಾಸ ಪುಟದಿಂದ ಅಳಿಸಿ, ನಾಶವಾಗಿ ಹೋಗಿವೆ. ನಮ್ಮ ಸಂಸ್ಕೃತಿ ಜೀವಂತವಾಗಿದೆ. ಇಲ್ಲಿ ಎಲ್ಲರನ್ನು ಗೌರವಿಸುವ ನಾವು ನಮ್ಮ ಮೇಲೆ ಆಘಾತಗಳು ಆಗುತ್ತಿವೆ ಎಂದು ಜೀತೇಂದ್ರ ಜಾಧವ ಹೇಳಿದರು.

ವೇದಮೂರ್ತಿ ದುಂಡಯ್ಯ ಹಿರೇಮಠ ಮಾತನಾಡಿ, ನಮ್ಮಲ್ಲಿ ಅಪಾರ ಸಂಪತ್ತು ಮತ್ತು ಸಂಸ್ಕೃತಿ ನಿರಂತರ ಲೂಟಿ ಮಾಡುವ ಪ್ರಯತ್ನ ನಡೆದಿದೆ, ಇದನ್ನು ಉಳಿಸಲು ನಾವು ಸಂಘಟಿತರಾಗ ಬೇಕಿದೆ ಎಂದರು.

ಗುರುಪ್ರಸಾದ ಗೌಡರು ಸಭೆಯನ್ನು ಉದದೇಶಿಸಿ ಮಾತನಾಡಿದರು, ಧರ್ಮವನ್ನು ನಾಶ ಮಾಡಬೇಕೆನ್ನುವ ಉದಯ ನಿಧಿ ಸ್ವತಲಿನ್ನ ಮತ್ತು ಅರ್ಬನ್ ನಕ್ಸಲರ ಮೇಲೆ ಯಾವದೇ ಕಾನೂನು ಕ್ರಮ ಆಗಲಿಲ್ಲ. ದೇಶದ ಭೂಮಿಯನ್ನು ಕಬಳಿಸುವ ವಕ್ಫ ಮಂಡಳಿಯ ಲ್ಯಾಂಡ್ ಜಿಹಾದ, ಹಲಾ ಆರ್ಥಿಕ ಷಂಡ್ಯಂತ್ರ ಪಾವಿತ್ರತೆ ನಾಶವಾಗುತ್ತಿದೆ ಇದಕ್ಕೆಲ್ಲ ಪರಿಹಾರ ಹಿಂದೂ ರಾಷ್ಟ್ರ ಸ್ಥಾಪನೆ ಎಂದು ಹೇಳಿದರು. ಬಾಗಲಕೋಟೆ ಹಿಂದೂ ಜನಜಾಗೃತಿ ಸಮೀತಿಯ ಸಮನ್ವಯಕ ವೆಂಕಟರಮಣ ನಾಯಕ ಹಾಗೂ ಸಮೀತಿಯ ಸರ್ವ ಸದಸ್ಯರು, ವಿವಿಧ ತಾಲೂಕಿನ ನೂರಕ್ಕೂ ಹೆಚ್ಚು ಪ್ರತಿನಿಧಿಗಳು ಇತರರಿದ್ದರು

## ಸರಕಾರಿ ಉರ್ದು ಪ್ರೌಢಶಾಲೆ ಉದ್ಘಾಟನೆ

# ಶಿಕ್ಷಣದಲ್ಲಿ ಕನ್ನಡ ಉರ್ದು ಬೇಧ ಭಾವ ಮಾಡುವುದಿಲ್ಲ-ಸವದಿ

ತೇರದಾಳ-ಶಿಕ್ಷಣವೇ ಸಾಧನೆಯ ಸೂತ್ರವಾಗಿದೆ. ಶಿಕ್ಷಣ ಇಲ್ಲದ ಬದುಕು ಸೂತ್ರ ಇಲ್ಲದ ಗಾಳಿಪಟದಂತೆ ಆಗುತ್ತದೆ. ಆದ್ದರಿಂದ ಶಿಕ್ಷಣದಲ್ಲಿ ಕನ್ನಡ ಉರ್ದು ಎಂಬ ಬೇಧ ಭಾವ ಮಾಡುವುದಿಲ್ಲ ಎಂದು ಶಾಸಕ ಸಿದ್ದು ಸವದಿ ಹೇಳಿದರು.

ಹಳಿಂಗಳಿ-ಭದ್ರಗಿರಿ ರಸ್ತೆಯಲ್ಲಿ ನಿರ್ಮಾಣಗೊಂಡಿರುವ ಸರಕಾರಿ ಉರ್ದು ಪ್ರೌಢಶಾಲೆ(ಆರ್‌ಎಂ-ಎಸ್‌ಎ) ನೂತನ ಕಟ್ಟಡ ಉದ್ಘಾಟಿಸಿ ಮಾತನಾಡಿದರು.

ಕ್ಷೇತ್ರದಲ್ಲಿ ಶೈಕ್ಷಣಿಕ ಕ್ಷೇತ್ರಕ್ಕೆ ಸಾಕಷ್ಟು ಆದ್ಯತೆ ನೀಡಲಾಗಿದೆ. ಉರ್ದು ಪೌಢಶಾಲೆಗೆ ನಾಲ್ಕು ಎಕರೆ ಜಾಗ ಇರುವುದರಿಂದ ವಿಶಾಲವಾದ ಮೈದಾನ





ಕಂಪೌಂಡ ನಿರ್ಮಿಸುವ ಕೆಲಸ ಮಾಡಿ. ಶಾಲೆಯ ಅಭಿವೃದ್ಧಿಗಾಗಿ ಸರಕಾರಕ್ಕೆ 50 ಲಕ್ಷ ಬೇಡಿಕೆ ಸಲ್ಲಿಸಿ. ತಾವು ಕೂಡ ಸರಕಾರದ ಮೇಲೆ ಒತ್ತಡ ಹೇರುವುದಾಗಿ ಭರವಸೆ ನೀಡಿದ ಸವದಿ, ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡಿ ಎಂದು ಹೇಳಿದರು. ಪ್ರಾಸ್ತಾವಿಕವಾಗಿ ಮಾತನಾಡಿದ ಬಿಇಒ ಎ.ಕೆ. ಬಸನ್ನವರ, ಶಾಲೆ ಕಟ್ಟಡಕ್ಕೆ 1.9 ಕೋಟಿ ಅನುದಾನ ಮಂಜುರಾಗಿದ್ದು, ಶಾಲೆಯಲ್ಲಿ 137 ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಪಟ್ಟಣದಿಂದ ಸುಮಾರು ಎರಡು ಕಿಮೀ ದೂರ ಶಾಲೆ ಆಗಿದ್ದ-ರಿಂದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಸಮಾಜ ಬಾಂಧವರು ಬಸ್ಸಿನ ಸೌಲಭ್ಯ ಒದಗಿಸಿರುವುದು ಸಮಾಜದವರಿಗೆ ಶಿಕ್ಷಣದ ಮೇಲೆ ಇರುವ ಕಾಳಜಿ ತೋರಿಸುತ್ತದೆ ಎಂದು ಹೇಳಿದ ಬಿಇಒ ಬಸ್ಸಿನ ವ್ಯವಸ್ಥೆ ಮಾಡಿದ ಸಮಾಜದವ-ರಿಗೆ ಇಲಾಖೆ ಪರವಾಗಿ ಅಭಿನಂದನೆ ಸಲ್ಲಿಸಿದರು. ಎಸ್ಡಿಎಂಸಿ ಅಧ್ಯಕ್ಷ ಅಲ್ತಾಪ ಹನಗಂಡಿ ಅಧ್ಯಕ್ಷತೆ ವಹಿಸಿದ್ದರು. ತಹಸೀಲ್ದಾರ್ ವಿಜಯಕುಮಾರ ಕಡಕೋಳ, ಪುರಸಭೆ ಮಾಜಿ ಅಧ್ಯಕ್ಷರಾದ ಎಂ.ಕೆ. ತಹಸೀಲ್ದಾರ್, ಮಹಾವೀರ ಕೊಕಟನೂರ, ಯುನೂಸ ಚೌಗಲಾ, ಗೌತಮ ರೋಡಕರ, ಅಲ್ಲಪ್ಪ ಬಾಬಗೊಂಡ, ಕಾಶಿನಾಥ ರಾಠೋಡ, ರಾಜೇಸಾಬ ನಗಾರ್ಜಿ, ಪಜಲ್ ಅತಾರಾವುತ್, ಹಾಫೀಜ ಮೌಲಾಅಲಿ ಚಿತ್ರಬಾನುಕೋಟೆ, ಮಾಸೂಂ ಇನಾಂದಾರ, ದಸ್ತಗೀರ ತಾಂಬೊಳಿ, ಕಂದಾಯ ನಿರೀಕ್ಷಕ ಪ್ರಕಾಶ ಮಠಪತಿ, ಮುಖ್ಯಾಧಿಕಾರಿ ಆನಂದ ಕೆಸರಗೊಪ್ಪ, ಬಿ.ಎಂ. ಹಳೇಮನಿ, ಮುಖ್ಯಗುರುಮಾತೆ ಎಂ.ಎಸ್. ಬುಜರುಕ್ ಹಾಗೂ ಎಸ್ಡಿ-ಎಂಸಿ ಸದಸ್ಯರು ಇದ್ದರು.

# ಇಂದು ಉದ್ಯೋಗ ಮೇಳ

ಬಾಗಲಕೋಟೆ : : ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ಡಿಸೆಂಬರ 19 ರಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 2.30 ವರೆಗೆ ಉದ್ಯೋಗ ಮೇಳದ ಅಂಗವಾಗಿ ನೇರ ಸಂದರ್ಶನ ಹಮ್ಮಿಕೊಳ್ಳಲಾಗಿದೆ.

ನೇರ ಸಂದರ್ಶನದಲ್ಲಿ ಸ್ವತಂತ್ರ ಮೈಕ್ರೋ ಫೈನಾನ್ಸ್ ಜಮಖಂಡಿ, ಪ್ರಗತಿ ಫಿನ್‌ಸರ್ವ ಬಾಗಲಕೋಟೆ, ವಿಮಾ ಮಾರ್ಟ ಎಂಟರಪ್ರೈಸಿಸ್ ಪ್ರೈ.ಲಿಮಿಟೆಡ್ ಪುಣೆ ಕಂಪನಿಗಳು ಭಾಗವಹಿಸಿ, ಹಲವು ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲಿದ್ದಾರೆ. 19 ರಿಂದ 30 ವಯೋಮಿತಿಯಲ್ಲಿರುವ ಎಸ್.ಎಸ್.ಎಲ್.ಸಿ, ಪಿಯುಸಿ ಹಾಗೂ ಪದವೀಧರರು ಭಾಗವಹಿಸಬಹುದಾಗಿದೆ. ಆಸಕ್ತರು ತಮ್ಮ ಬಯೋಡಾಟಾದೊಂದಿಗೆ ಪಾಲ್ಗೊಂಡು ಸದುಪಯೋಗ ಪಡಿಸಿಕೊಳ್ಳುವಂತೆ ಜಿಲ್ಲಾ ಉದ್ಯೋಗ ವಿನಿಮಯ ಅಧಿಕಾರಿ ಕಿರಣ ಮಂಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನಾಳೆ ಮಾಸಿಕ ಕೆಡಿಪಿ ಸಭೆ

ಬಾಗಲಕೋಟೆ : : ಜಿಲ್ಲಾ ಪಂಚಾಯತಿಯ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆ ಇದೇ ಡಿಸೆಂಬರ 20 ರಂದು ಬೆಳಿಗ್ಗೆ 10 ಗಂಟೆಗೆ ಜಿ.ಪಂ ನೂತನ ಸಭಾಭವನದಲ್ಲಿ ಜಿ.ಪಂ ಆಡಳಿತಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರುಗಲಿದೆ ಎಂದು ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಡ್ರೋನ್ ತರಬೇತಿ ಅರ್ಜಿ ಆಹ್ವಾನ; ಅವಧಿ ವಿಸ್ತರಣೆ

ಬೆಳಗಾವಿ : ಪರಿಶಿಷ್ಟ ಪಂಗಡದ ಯುವಕ ಯುವತಿಯರಿಗೆ ಡ್ರೋನ್ ಆಧಾರಿತ ಪೋಟೋಗ್ರಫಿ ಮತ್ತು ವಿಡಿಯೋಗ್ರಫಿ ಮೂಲಕ ಸಾಮಾಜಿಕ ಜಾಲತಾಣಗಳಲ್ಲಿ ಉದ್ಯೋಗ ಪಡಿಯಲು ಡ್ರೋನ್ ತರಬೇತಿಗಾಗಿ ಅರ್ಜಿ ಆಹ್ವಾನ ಅವಧಿಯನ್ನು ವಿಸ್ತ-ರಿಸಲಾಗಿದೆ.

ಆಸಕ್ತರು ಡಿಸೆಂಬರ್. 23 ರೊಳಗಾಗಿ ಅರ್ಜಿಗಳನ್ನು ಆಯಾ ತಾಲೂಕಿನ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿಗಳು ಹಾಗೂ ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಕಛೇ-ರಿಯಿಂದ ಪಡೆದುಕೊಳ್ಳಬೇಕು. ಅಭ್ಯರ್ಥಿಗಳು ಪರಿಶಿಷ್ಟ ಪಂಗಡಕ್ಕೆ ಸೇರಿದ್ದು, ಎಸ್.ಎಸ್.ಎಲ್.ಸಿ ಉತ್ತೀರ್ಣರಾಗಿರಬೇಕು, ಪುರುಷರು 18 ರಿಂದ 35 ವರ್ಷ ಹಾಗೂ ಮಹಿಳೆಯರು 18 ರಿಂದ 40 ವರ್ಷದೊಳಗಿರಬೇಕು. ತರಬೇತಿಯಲ್ಲಿ ಯಾವುದೇ ಶಿಷ್ಯ ವೇತನ ಇರುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿಗಳು ಅವರ ದೂರವಾಣಿ. 0831-2407246 ಸಂಖ್ಯೆಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಡಿಸೆಂಬರ್.21 ರಂದು ಉದ್ಯೋಗ ಮೇಳ

ಬೆಳಗಾವಿ : ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ ಇವರ ವತಿಯಿಂದ ಎಸ್.ಎಸ್.ಎಲ್.ಸಿ, ಪಿಯುಸಿ, ಐಟಿಐ, ಡಿಪ್ಲೋಮಾ, ಯಾವುದೇ ಪದವಿ ಅಭ್ಯರ್ಥಿಗಳಿಗಾಗಿ ನೆಹರು ನಗರದಲ್ಲಿ ಡಿಸೆಂಬರ್. 21 ರಂದು ಬೆಳಗ್ಗೆ 9.30 ರಿಂದ ಮದ್ಯಾಹ್ನ 2.30 ಗಂಟೆ ವರೆಗೆ ಖಾಸಗಿ ಕಂಪನಿಗಳಿಂದ ಉದ್ಯೋಗ ಮೇಳವನ್ನು ಆಯೋಜಿಸಲಾಗಿದೆ.

ಆಸಕ್ತ ಅಭ್ಯರ್ಥಿಗಳು ವೆಬ್‌ಸೈಟ್ https://forms.gle/tbQAyruk34Zrj4Yw9 ಮೂಲಕ ಹೆಸರನ್ನು ನೋಂದಾಯಿಸಬಹುದು, ಉದ್ಯೋಗಾವಕಾಶವು ಉಚಿತವಾಗಿದ್ದು, ಇನ್ನುಳಿದ ಯಾವುದೇ ಸೌಲಭ್ಯಗಳು ಇರುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಮೊಬೈಲ್. 7975856566 ಅಥವಾ 8217255504 ಸಂಖ್ಯೆಗಳಿಗೆ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ ಸಹಾಯಕ

# ಸೋಲೊಪ್ಪಿಕೊಳ್ಳುವದನ್ನು ಕ್ರೀಡೆಯಿಂದ ಕಲಿಯಿರಿ



ರಬಕವಿ-ಬನಹಟ್ಟಿ, ಜೀವನದಲ್ಲಿ ಸೋಲನ್ನು ಒಪ್ಪಿಕೊಳ್ಳುವುದನ್ನು ಕ್ರೀಡೆಯಿಂದ ಕಲಿಯಲು ಸಾಧ್ಯ. ಆರಂಭಿಕ ಸೋಲುಗಳಿಂದ ನಿರಾಶೆಗೊಳ್ಳದೆ, ಸೋಲಿಗೆ ಕಾರಣಗಳನ್ನು ಅರಿತುಕೊಂಡು ಅವುಗಳ ಕುರಿತು ಆಲೋಚಿಸಿ ಮುಂದಿನ ದಿನಗಳಲ್ಲಿ ಸತತ ಪ್ರಯತ್ನ ಮತ್ತು ಆತ್ಮ ವಿಶ್ವಾಸದೊಂದಿಗೆ ಆಡಿದಾಗ ಗೆಲವು ನಿಶ್ಚಿತ. ಆದ್ದರಿಂದ ನಾವು ಕ್ರೀಡೆಯನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ಜಮಖಂಡಿ ಮಾಜಿ ಶಾಸಕ ಆನಂದ ನ್ಯಾಮಗೌಡ ತಿಳಿಸಿದರು. ಮಂಗಳವಾರ ಸಮೀಪದ ಯಲ್ಲಟ್ಟಿಯ ಕೊಣ್ಣೂರ ವಿಜ್ಞಾನ ಪದವಿಪೂರ್ವ ಕಾಲೇಜಿನಲ್ಲಿ ನಡೆದ ರಾಜ್ಯ ಮಟ್ಟದ ಪದವಿಪೂರ್ವ ಕಾಲೇಜುಗಳ ಬಾಲಕರ ಮತ್ತು ಬಾಲಕಿಯರ ಥ್ರೋಬಾಲ್ ಕ್ರೀಡಾಕೂಟವನ್ನು ಉದ್ಘಾಟಿಸಿ ಮಾತನಾಡಿದರು. ಕ್ರೀಡೆ ನಮಗೆ ಶಿಸ್ತು ಮತ್ತು ನಾಯಕತ್ವದ ಗುಣಗಳನ್ನು ಕಲಿಸುತ್ತದೆ. ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಿಗೂ ಕೂಡಾ ವಿದ್ಯಾರ್ಥಿಗಳು ಗಮನ ನೀಡಬೇಕು. ಸೋಲು ಮತ್ತು ಗೆಲವನ್ನು ಸಮಾನವಾಗಿ ಸ್ವೀಕರಿಸಬೇಕು ಎಂದು ಆನಂದ ನ್ಯಾಮಗೌಡ ತಿಳಿಸಿದರು.

ಜಮಖಂಡಿಯ ಡಿವೈಎಸ್ಪಿ ಈ. ಶಾಂತವೀರ ಮಾತನಾಡಿ, ಕ್ರೀಡಾಪಟುಗಳಲ್ಲಿ ಕ್ರೀಡಾ ಸ್ಫೂರ್ತಿ ಮುಖ್ಯವಾದುದು. ಗ್ರಾಮೀಣ ಭಾಗದಲ್ಲಿ ರಾಜ್ಯ ಮಟ್ಟದ ಕ್ರೀಡಾಕೂಟಗಳನ್ನು ಆಯೋಜನೆ ಮಾಡುವುದು ಕಠಿಣವಾದ ಕಾರ್ಯ. ಇದರಿಂದ ಗ್ರಾಮೀಣ ಭಾಗದ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಪ್ರಾಚಾರ್ಯ ಬಸವರಾಜ ಕೊಣ್ಣೂರ ಮಾತನಾಡಿದರು.

ಸಂಸ್ಥೆಯ ಉಪಾಧ್ಯಕ್ಷ ನಿಖಿಲ ಕೊಣ್ಣೂರ, ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ರಾಜಶೇಖರ ಪಟ್ಟಣಶೆಟ್ಟಿ, ಮಹಾದೇವ ಮೋಪಗಾರ, ಧರೆಪ್ಪ ಉಳ್ಳಾಗಡ್ಡಿ, ಸುರೇಶ ಚಿಂಡಕ, ಶ್ರೀಶೈಲ ದಲಾಲ, ಶ್ರೀಶೈಲ ಉಳ್ಳಾಗಡ್ಡಿ, ಡಾ.ಟಿ.ಎ. ಅರಳಿಕಟ್ಟಿ, ಮಹಾವೀರ ದೇಸಾಯಿ, ಜಮಖಂಡಿ ನಗರಸಭಾಧ್ಯಕ್ಷ ಪರಮಾನಂದ ಗೌರೋಜಿ, ಜಿ.ಎಸ್. ವಡಗಾವಿ, ಮಹಾಂತೇಶ ಮುರಗೋಡ, ಬಸವರಾಜ ಹೂಗಾರ, ಬಿ.ಆರ್. ಗೊಡ್ಡಾಳೆ, ಚಂದ್ರಕಾಂತ ಹೊಸೂರ, ಮುರಗೇಶ ಮಗದುಮ್ ಸೇರಿದಂತೆ ರಾಜ್ಯದ ವಿವಿಧ ಕಡೆಗಳಿಂದ ಆಗಮಿಸಿದ ತಂಡದ ವ್ಯವಸ್ಥಾಪಕರು, ಕ್ರೀಡಾಪಟುಗಳಿದ್ದರು.

# ಸರ್ಕಾರದ ಸ್ವಾವಲಂಬಿ ಯೋಜನೆಗಳ ಮೂಲಕ ಮಹಿಳೆಯರಿಗೆ ಆರ್ಥಿಕ ನೆರವು: ಬಸವರಾಜ ಹೆಗ್ಗನಾಯಕ



ಬೆಳಗಾವಿ: ಗ್ರಾಮೀಣ ಭಾಗದ ಮಹಿಳೆಯರ ಆರ್ಥಿಕ ಸ್ಥಿತಿ-ಗತಿಗಳನ್ನು ಸುಧಾರಿಸಲು ಮತ್ತು ಗ್ರಾಮೀಣ ಜನರ ಜೀವನ ಮಟ್ಟವನ್ನು ಹೆಚ್ಚಿಸಲು ಸರ್ಕಾರ ಸ್ವ-ಸಹಾಯ ಸಂಘಗಳ ಮೂಲಕ ಸ್ವಾವಲಂಬಿ ಯೋಜನೆಗಳನ್ನು ಜಾರಿಗೊಳಿಸುತ್ತಿದೆ. ಇದರಿಂದ ಮಹಿಳೆಯರು ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟಗಳಡಿಯಲ್ಲಿ ವಿವಿಧ ಬಗೆಯ ಸರಕು ಸಾಮಗ್ರಿಗಳು ಹಾಗೂ ದೈನಂದಿನ ಬಳಕೆಯ ವಸ್ತುಗಳನ್ನು ತಯಾರಿಸಿ ಮಾರಾಟ ಮಾಡಿ ತಮ್ಮ ಕುಟುಂಬಗಳಿಗೆ ಆರ್ಥಿಕ ನೆರವು ಪಡೆಯಬಹುದು ಎಂದು ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಬಸವರಾಜ ಹೆಗ್ಗನಾಯಕ ತಿಳಿಸಿದರು.

ಮಚ್ಚೆ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿನ ಜಿಲ್ಲಾ ಪಂಚಾಯತ್ ಸಂಪನ್ಮೂಲ ಕೇಂದ್ರದಲ್ಲಿ ಸಂಜೀವಿನಿ ಯೋಜನೆಯಡಿ ಗೋಕಾಕ್ ಮತ್ತು ಮೂಡಲಗಿ ತಾಲೂಕಿನ ಜಿಪಿಎಲ್.ಎಫ್ ಅಧ್ಯಕ್ಷರುಗಳಿಗೆ ಮಂಗಳವಾರ (ಡಿ.17) 3 ದಿನಗಳ ವಸತಿ ಸಹಿತ "ಪರಿವರ್ತನೆಯ ಹೆಜ್ಜೆ" ಸಾಮರ್ಥ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸದರಿ ಮೂರು ದಿನಗಳ ತರಬೇತಿಯಲ್ಲಿ ಬೋಧಿಸುವ ಅನೇಕ ವಿಷಯಗಳನ್ನ ಸಂಪೂರ್ಣವಾಗಿ ಕ್ರಿಯಾಶೀಲತೆಯಿಂದ ಕಲಿತುಕೊಳ್ಳಬೇಕು. ತಮ್ಮ ದೈನಂದಿನ ಕಚೇರಿ ನಿರ್ವಹಣೆಯಲ್ಲಿ ಬರುವ ಸಾಮಾನ್ಯ ಸಂದೇಹಗಳನ್ನು ಮುಕ್ತವಾಗಿ ಚರ್ಚಿಸಿ ತರಬೇತಿಯಲ್ಲಿ ಪರಿಹಾರ ಕಂಡುಕೊಳ್ಳಬೇಕು ಎಂದು ಜಿ.ಪಂ ಉಪ ನಿರ್ದೇಶಕ ಬಸವರಾಜ ಹೆಗ್ಗನಾಯಕ ಹೇಳಿದರು.

ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕ ರವಿ ಬಂಗಾರಪ್ಪನವರ ಮಾತನಾಡಿ ತರಬೇತಿಯ ಸದುಪಯೋಗ ಪಡೆದುಕೊಂಡು ತಮ್ಮ ಕುಟುಂಬದ ನಿರ್ವಹಣೆಗೆ ಗಮನ ಹರಿಸಬೇಕು ಎಂದು ಹೇಳಿದರು.

ತರಬೇತಿಯಲ್ಲಿ ಜಿಲ್ಲಾ ವ್ಯವಸ್ಥಾಪಕ ಕಿರಣ್ ಶಿಂಧೆ, ಮರಿಗೌಡ, ಸಂಪನ್ಮೂಲ ವ್ಯಕ್ತಿಗಳಾದ ಲಕ್ಷ್ಮಣಗೌಡ, ಗೋಪಾಲಕೃಷ್ಣ, ಡಿಪಿಆರ್.ಸಿ ಸಿಬ್ಬಂದಿಗಳಾದ ಮಂಜುಳಾ ಹೊನಕುಪ್ಪಿ, ಸೋನು ಮುತ್ನಾಳ, ಪ್ರಿಯಾ ಸುತಾರ, ಶಾಂತಾರಾಮ್ ಗೋಧೂಳಿ, ರಮೇಶ್ ದೇಸಾಯಿ, ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳಾದ ಮಲ್ಲಿಕಾರ್ಜುನ್ ಪೂಜಾರ್, ವಾಣಿಶ್ರೀ ರಾಠೋಡ, ಚಂದ್ರಶೇಖರ ಕಲಾಲ, ಗಂಗವ್ವ ಕಂಕಣವಾಡಿ ಮತ್ತು ಜಿಪಿಎಲ್ ಎಫ ಅಧ್ಯಕ್ಷರಾದ ಗೀತಾ ಹರಿಜನ, ಶಾಂತವ್ವ ಭೋವಿ, ರಮೇಶ್ ಪೂಜಾರಿ, ಹರ್ಷ ಶೇಳಕಾ, ಪ್ರೇಮಾ ಗಾಣಿಗೇರ, ಸಂಗೀತ ಗುರೆ, ಸೈರಾಭಾನು ನದಾಫ್ ಹಾಜರಿದ್ದರು.

## ರಾಜ್ಯ ಸ್ವೀಪ ನೋಡಲ್ ಅಧಿಕಾರಿ ಪಿ.ಎಸ್.ವಸ್ತ್ರದ ಜಿಲ್ಲಾ ಪ್ರವಾಸ

ವಿಜಯಪುರ, : ರಾಜ್ಯ ಸ್ವೀಪ ನೋಡಲ್ ಅಧಿಕಾರಿಗಳಾದ ಪಿ.ಎಸ್. ವಸ್ತ್ರದ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದು ಡಿ.20ರ ಬೆಳಿಗ್ಗೆ 10-30 ಗಂಟೆಗೆ ಎನ್.ವಿ.ಡಿ ಹಾಗೂ ಸ್ವೀಪ ಕಾರ್ಯಕ್ರಮಗಳ ಬಗ್ಗೆ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳ ಕಚೇರಿಯಲ್ಲಿ ಸಭೆ ನಡೆಸುವರು. ನಂತರ ಸ್ಥಳೀಯ ಇ.ಎಲ್.ಸಿಗಳ ಭೇಟಿ ಮಾಡಿ ಅಂದು ವಾಸ್ತವ್ಯ ಮಾಡಲಿದ್ದಾರೆ. ಡಿ.21 ರ ಬೆಳಿಗ್ಗೆ ಬಾಗಲಕೋಟೆಗೆ ಪ್ರಯಾಣ ಬೆಳೆಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

## ನಾಳೆ ಮಹಾನಗರ ಪಾಲಿಕೆ ಬಜೆಟ್ ಪೂರ್ವಭಾವಿ ಸಭೆ

ವಿಜಯಪುರ : ಮಹಾನಗರ ಪಾಲಿಕೆಯ ಆಯ-ವ್ಯಯ ಬಜೆಟ್ ಸಾರ್ವಜನಿಕ ಪೂರ್ವಭಾವಿ ಸಭೆಯನ್ನು ಇದೇ ದಿನಾಂಕ : 19-12-2024ರ ಮಧ್ಯಾಹ್ನ 4 ಗಂಟೆಗೆ ಮಹಾನಗರ ಪಾಲಿಕೆ ಮುಖ್ಯ ಕಚೇರಿಯಲ್ಲಿ ಆಯೋಜಿಸಲಾಗಿದೆ ಎಂದು ಮಹಾನಗರ ಪಾಲಿಕೆ ಆಯುಕ್ತ ವಿಜಯಕುಮಾರ ಮೆಕ್ಕಳಕಿ ಅವರು ತಿಳಿಸಿದ್ದಾರೆ.

ಮಹಾನಗರ ಪಾಲಿಕೆಯ ಪೂರ್ವಭಾವಿ ಸಭೆಯಲ್ಲಿ ಸಾರ್ವಜನಿಕರು, ಕಲ್ಯಾಣ ಸಂಸ್ಥೆಯ ಪದಾಧಿಕಾರಿಗಳು, ವ್ಯಾಪಾರ ಮತ್ತು ಕೈಗಾರಿಕಾ ಸಂಸ್ಥೆ ಒಕ್ಕೂಟಗಳ ಸದಸ್ಯರು ಮತ್ತು ಇತರೆ ಸಂಘ-ಸಂಸ್ಥೆಗಳ ಮುಖ್ಯಸ್ಥರು ಭಾಗವಹಿಸಿ ಸೂಕ್ತ ಸಲಹೆ-ಸೂಚನೆಗಳನ್ನು ನೀಡುವಂತೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಡಿ.22 ರಂದು ವಧು-ವರರ ಸಮಾವೇಶ

ಬೆಳಗಾವಿ ಶ್ರೀ ಗುರು ಶಾಂತೇಶ್ವರ ವದವರ ಮಾಹಿತಿ ಕೇಂದ್ರ ಹುಕ್ಕೇರಿ ವತಿಯಿಂದ ಇದೇ ಡಿ.22 ರಂದು ಬೆಳಗಾವಿಯ ಕನ್ನಡ ಸಾಹಿತ್ಯ ಭವನದಲ್ಲಿ ಬೆಳಗ್ಗೆ 11 ಗಂಟೆಯಿಂದ ವೀರಶೈವ ಲಿಂಗಾಯತ ಹಾಗೂ ಎಲ್ಲಾ ಒಳಪಂಗಡಗಳ ಉನ್ನತ ಶಿಕ್ಷಣ ಪದವೀಧರ ವಧು ವರರ 20ನೇಯ ರಾಜ್ಯಮಟ್ಟದ ಸಮಾವೇಶವನ್ನು ಆಯೋಜಿಸಲಾಗಿದೆ.

ಶ್ರೀ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಹುಕ್ಕೇರಿ ಹಿರೇಮಠ ಇವರ ಸಾನಿಧ್ಯ ವಹಿಸಲಿದ್ದಾರೆ. ಈ ಸಮಾವೇಷದಲ್ಲಿ ಎಲ್ಲಾ ವೀರಶೈವ ಲಿಂಗಾಯತ ಹಾಗೂ ಎಲ್ಲಾ ಒಳಪಂಗಡಗಳ ಪದವೀಧರ ವಧು-ವರರು, ವಿದುರ ವಿಧವೆಯರು, ವಿಚ್ಛೇದಿತರು ಮತ್ತು ತಡವಾಗಿ ಮದುವೆಯಾಗ ಬಯಸುವವರು ತಮ್ಮ ಇತ್ತೀಚಿನ ಫೋಟೋ ಮತ್ತು ಬಯೋಡೆಟಾದೊಂದಿಗೆ ಸಮಾವೇಶದಲ್ಲಿ ಭಾಗವಹಿಸಿ ತಮಗೆ ಅನುರೂಪವಾಗುವ ವಧುವರನ್ನು ಆಯ್ದುಕೊಳ್ಳಲು ಸುವರ್ಣ ಅವಕಾಶವಾಗಿದೆ ಎಂದು ಸಂಸ್ಥೆಯ ಅಧ್ಯಕ್ಷ ಶಿವಾನಂದ ಝಿರ್ಲಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ 8660057488 ಸಂಪರ್ಕಿಸಿರಿ.

## ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ: ಡಿ.21ರಂದು ಪೂರ್ವಭಾವಿ ಸಭೆ

ಕೊಪ್ಪಳ : ಪ್ರಸಕ್ತ ಸಾಲಿನ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ ಅಂಗವಾಗಿ ಪೂರ್ವಭಾವಿ ಸಭೆಯನ್ನು ಡಿ.21ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಸಭೆಯ ಅಧ್ಯಕ್ಷತೆಯನ್ನು ಕೊಪ್ಪಳ ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಅವರು ವಹಿಸುವರು. ಜಿಲ್ಲಾ ಮಟ್ಟದ ಇಲಾಖೆಗಳ ಅಧಿಕಾರಿಗಳು ಸಭೆಗೆ ತಪ್ಪದೇ ಹಾಜರಾಗಬೇಕು ಹಾಗೂ ಸಮಾಜದ ಮುಖಂಡರು ಈ ಸಭೆಯಲ್ಲಿ ಆಗಮಿಸಿ ಅಗತ್ಯ ಸಲಹೆಗಳನ್ನು ನೀಡುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕೊಟ್ರೇಶ ಮರಬನಳ್ಳಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕ್ರೀಡೆ ಮನಸ್ಸಿನ ನೆಮ್ಮದಿಗೆ ಸಹಕಾರಿಯಾಗಿದ್ದು

## ಕ್ರೀಡೆಯನ್ನು ದೈನಂದಿನ ಭಾಗವಾಗಿಸಿಕೊಳ್ಳುವಂತೆ -ಅಪರ ಜಿಲ್ಲಾಧಿಕಾರಿ ಕರೆ



ವಿಜಯಪುರ, : ಮನುಷ್ಯನ ಜೀವನದಲ್ಲಿ ಸಂತೋಷ, ಉಲ್ಲಸಿತ ಹಾಗೂ ಸದೃಢ ಮನಸ್ಸು ಹೊಂದಲು ಶಿಕ್ಷಣದ ಜೊತೆಗೆ ಕ್ರೀಡಾ ಚಟುವಟಿಕೆಗಳು ಅತ್ಯವಶ್ಯಕ. ಆರೋಗ್ಯ ದೃಷ್ಟಿಯಿಂದ, ಮನಸ್ಸು ಪ್ರಫುಲ್ಲತೆಯಿಂದ ಇರಲು ಕ್ರೀಡೆಗಳಲ್ಲಿ ತೊಡಗಿಸಿಕೊಳ್ಳುವುದಷ್ಟೇ ಅಲ್ಲದೇ ನಮ್ಮ ಬದುಕಿನ ದೈನಂದಿನ ಭಾಗವಾಗಿಸಿಕೊಳ್ಳಬೇಕು. ಕ್ರೀಡೆಗಳು ದೇಹ ಮನಸ್ಸುಗಳ ಸದೃಢತೆಗೆ ಸಹಕಾರಿಯಾಗಲಿದೆ ಎಂದು ಅಪರ ಜಿಲ್ಲಾಧಿಕಾರಿ ಸೋಮಲಿಂಗ ಗೆಣ್ಣೂರ ಅವರು ಹೇಳಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಹಾಗೂ ವಿಕಲಚೇತನರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಮಂಗಳವಾರ ನಡೆದ 2024-25ನೇ ಸಾಲಿನ ವಿಜಯಪುರ ಜಿಲ್ಲಾ ಮಟ್ಟದ ವಿಕಲಚೇತನರ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಈಗಾಗಲೇ ಜಿಲ್ಲೆಯ ಐದು ತಾಲೂಕಿನಲ್ಲಿ ವಿಕಲಚೇತನರ ಕ್ರೀಡಾಕೂಟವನ್ನು ಬಹು ಯಶಸ್ವಿಯಾಗಿ ಹಮ್ಮಿಕೊಳ್ಳಲಾಗಿದೆ. ತಾಲೂಕ ಮಟ್ಟದಲ್ಲಿ ನಡೆದ ಕ್ರೀಡೆಗಳಲ್ಲಿ ಅತ್ಯಂತ ಕ್ರೀಡಾ ಸ್ಫೂರ್ತಿಯಿಂದ ಭಾಗವಹಿಸಿ ಇದೀಗ ಜಿಲ್ಲಾ ಮಟ್ಟದಲ್ಲಿ ನಡೆಯುವ ವಿವಿಧ ಕ್ರೀಡೆಗಳಲ್ಲಿ ಪಾಲ್ಗೊಂಡು ಕ್ರೀಡಾ ಮನೋಭಾವನೆ ಮೆರೆಯಬೇಕು. ಸೋಲು-ಗೆಲವು ಮುಖ್ಯವಲ್ಲ. ಕ್ರೀಡೆಗಳಲ್ಲಿ ಭಾಗವಹಿಸುವುದು ಮುಖ್ಯ. ಕ್ರೀಡಾ ಮನೋಭಾವನೆಯಿಂದ ಭಾಗವಹಿಸಿ ಒಳಾಂಗಣ ಹಾಗೂ ಹೊರಾಂಗಣ ಕ್ರೀಡೆಗಳಲ್ಲಿ ಪಾಲ್ಗೊಳ್ಳುವ ಮೂಲಕ ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಜಿಲ್ಲೆಯ ಕೀರ್ತಿಯನ್ನು ಬೆಳಗಿಸಿ ಎಂದು ಅವರು ಹೇಳಿದರು.

ಕ್ರೀಡೆಗಳಿಂದ ಜೀವನದಲ್ಲಿ ಚೈತನ್ಯ ಹಾಗೂ ಲವಲವಿಕೆಯಿಂದಿರಲು ಸಹಾಯಕವಾಗುತ್ತವೆ. ಬೌದ್ಧಿಕ ಮತ್ತು ಮಾನಸಿಕ ಸದೃಢತೆಗೆ ಈ ತರಹದ ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಂಡು ಚೈತನ್ಯಮಯ ಹಾಗೂ ಚಟುವಟಿಕೆಯಿಂದ ಕೂಡಿದ ಜೀವನ ನಡೆಸಿ ಎಂದು ಅವರು ಹೇಳಿದರು. ವಿಕಲಚೇತನರಿಗಾಗಿಯೇ ಅನೇಕ ಯೋಜನೆಗಳನ್ನು ಸರ್ಕಾರ ಅನುಷ್ಠಾನಗೊಳಿಸುತ್ತಿದ್ದು, ಸಮರ್ಪಕವಾಗಿ ಬಳಸಿಕೊಂಡು ಉತ್ತಮ ಜೀವನ ರೂಪಿಸಿಕೊಳ್ಳುವಂತೆ ಹೇಳಿದರು.

ಡಾ.ಜಾವೀದ ಎಂ. ಜಮಾದಾರ ಮಾತನಾಡಿ, ಕ್ರೀಡೆಯ ಕೌಶಲ್ಯಗಳನ್ನು ರೂಢಿಸಿಕೊಂಡು ಸಾಧನೆ ಮಾಡಿ, ರಾಜ್ಯ ಹಾಗೂ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿ ತಮ್ಮಲ್ಲಿರುವ ಪ್ರತಿಭೆಯನ್ನು ಹೊರತರುವಂತೆಯೂ, ಸಾಧಕರನ್ನು ಪ್ರೇರಣೆಯಾಗಿಟ್ಟುಕೊಂಡು ಛಲದಿಂದ ಸಾಧನೆ ಮಾಡಬೇಕು ಎಂದು ಅವರು ಹೇಳಿದರು.

ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆಯ ಅಧಿಕಾರಿ ರಾಜಶೇಖರ ದೈವಾಡಿ ಪ್ರಾಸ್ತಾವಿಕವಾಗಿ ಮಾತನಾಡಿ, ಸ್ವಾಗತಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ವಿಕಲಚೇತನ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಅಧಿಕಾರಿ ಸವಿತಾ ಕಾಳೆ, ವಾರ್ತಾಧಿಕಾರಿ ಅಮರೇಶ ದೊಡಮನಿ,ಅರವಿಂದ ಕೊಪ್ಪ ಎಸ್.ಜಿ ಲೋಣಿ ನಿಮೀಷ ಆಚಾರ್ಯ, ವಿಜಯಕುಮಾರ ಹೊಸಮನಿ ನಿವೃತ್ತ ಶಿಕ್ಷಕ ಎಚ್.ಮಮದಾಪೂರ ಇತರರು ಉಪಸ್ಥಿತರಿದ್ದರು.

ಕ್ರೀಡಾಕೂಟದಲ್ಲಿ 100 ಮೀ.ಓಟ, ಗುಂಡು ಎಸೆತ, ಬಕೇಟನಲ್ಲಿ ರಿಂಗ್ ಹಾಕುವುದು, ಥ್ರೋಬಾಲ್ ಎಸೆತ, 50 ಮೀ. ಅಂಧರ ಕೆನ ನಡಿಗೆ, ಮ್ಯೂಜಿಕಲ್ ಚೇರ್, ಉದ್ದಜಿಗಿತ ವಿವಿಧ ಕ್ರೀಡೆಗಳು ಜರುಗಿದವು.

# ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳು ರೈತರ ಏಳ್ಗೆಗೆ ಪ್ರಮುಖ ಪಾತ್ರ ವಹಿಸುತ್ತವೆ



ಗೋಕಾಕ: ತಾಲೂಕಿನ ಬೂದಿಹಾಳ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ, ಬೂದಿಹಾಳ ಇದರ ಆಡಳಿತ ಮಂಡಳಿಯ ಅವಿರೋಧ ಆಯ್ಕೆಗೆ ಶ್ರಮಿಸಿದ ಶಾಸಕ ರಮೇಶ ಜಾರಕಿಹೊಳಿ ಅವರನ್ನು ನೂತನ ಆಡಳಿತ ಮಂಡಳಿಯವರು ಸತ್ಕರಿಸಿದರು.

ಸತ್ಕಾರ ಸ್ವೀಕರಿಸಿ ಮಾತನಾಡಿದ ಶಾಸಕ ರಮೇಶ ಜಾರಕಿಹೊಳಿ ಅವರು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳು ರೈತರ ಏಳ್ಗೆಗೆ ಪ್ರಮುಖ ಪಾತ್ರ ವಹಿಸುತ್ತವೆ. ನೂತನ ಆಡಳಿತ ಕೃಷಿ ಪತ್ತಿನ ಸಹಕಾರಿ ಸಂಘದ ನೂತನ ಆಡಳಿತ ಮಂಡಳಿ ರೈತರ ಶ್ರೇಯೋಭಿವೃದ್ಧಿಗೆ ಶ್ರಮಿಸುವಂತೆ ಕರೆ ನೀಡಿದ ಅವರು, ನೂತನ ಆಡಳಿತ ಮಂಡಳಿ ಸದಸ್ಯರನ್ನು ಅಭಿನಂಧಿಸಿದರು.

ಈ ಸಂದರ್ಭದಲ್ಲಿ ನೂತನ ಆಡಳಿತ ಮಂಡಳಿ ಸದಸ್ಯರಾದ ಅಡಿವೆಪ್ಪ ನಾವಲಗಟ್ಟಿ, ಸತ್ತೆಪ್ಪ ಪಾಟೀಲ, ಗಂಗಪ್ಪ ಅಂಗಡಿ, ರಾಜು ದೊಡ್ಡಮನಿ, ಲಕ್ಷ್ಮಣ ಮಾಳಗಿ, ವೀರಭದ್ರ ಕೊಳವಿ, ಕರೇಪ್ಪ ಹರಿಜನ, ಭೀಮಣ್ಣ ಸೋಮನಗಡಿ, ಸುಭಾಷ ಪೊಳಿ, ಅಲ್ಲಾಭಕ್ಷ ದೇಸಾಯಿ, ಜಾನಕ್ಕ ಪೋಲಿಸಗೌಡರ, ವೀಮಲಮ್ಮ ಸಂಪಗಾಂವಿ ಇದ್ದರು.

# ಶ್ರೀ ಸೋಮೇಶ್ವರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಕ್ಕೆಗೆ ಅವಿರೋಧವಾಗಿ ಆಯ್ಕೆ



ಬೈಲಹೊಂಗಲ :ತಾಲೂಕಿನ ದೊಡವಾಡ ಗ್ರಾಮದ ಶ್ರೀ ಸೋಮೇಶ್ವರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಕ್ಕೆಗೆ ಅವಿರೋಧವಾಗಿ ಆಯ್ಕೆಯಾದ ನೂತನ ನಿರ್ದೇಶಕರನ್ನು ಇಲ್ಲಿನ ಗ್ರಾಮದೇವಿ ದೇವಸ್ಥಾನದ ಬಳಿ ಗ್ರಾಮಸ್ಥರ ಪರವಾಗಿ ಸೋಮವಾರ ಸತ್ಕರಿಸಿ ಗೌರವಿಸಲಾಯಿತು

ಸಾಲಗಾರ ಸಾಮಾನ್ಯ ಮಹಿಳಾ ಕ್ಷೇತ್ರದಿಂದ ಲಲಿತಾ ಹತ್ತಿಕಟಗಿ, ಪಾರ್ವತಿ ಮುದೆನ್ನವರ, ಬಿನ್ ಶೇರ್ ಕ್ಷೇತ್ರದಿಂದ ಗಿರೀಶ್ ಧಾರವಾಡ ಇವರುಗಳು ಅವಿರೋಧವಾಗಿ ಆಯ್ಕೆಯಾದ ಹಿನ್ನೆಲೆಯಲ್ಲಿ ಸತ್ಕರಿಸಲಾಯಿತು. ಈ ವೇಳೆ ಮುಖಂಡರಾದ ನಿಂಗಪ್ಪ ಚೌಡನ್ನವರ, ಶಂಕ್ರಪ್ಪ ಚೌಡನ್ನವರ, ಉದಯ್ ಕೋಟಬಾಗಿ, ಅಜ್ಜಪ್ಪ ಪಟಾತ, ಯಲ್ಲಪ್ಪ ಹಿರಗಣ್ಣವರ, ಮಡಿವಾಳಪ್ಪ ಹತ್ತಿಕಟಗಿ, ಸೋಮೇಶ ಚರಂತಿಮಠ, ಪರಪ್ಪ ಚೌಡನ್ನವರ, ಅಪ್ಪು ಅಸುಂಡಿ, ನಾಗಪ್ಪ ಸವದತ್ತಿ ಮತ್ತಿತರ ಮುಖಂಡರು ಉಪಸ್ಥಿತರಿದ್ದರು.

# ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳು ರೈತರ ಏಳ್ಗೆಗೆ ಪ್ರಮುಖ ಪಾತ್ರ ವಹಿಸುತ್ತವೆ



ಗೋಕಾಕ: ತಾಲೂಕಿನ ಗೋಸಬಾಳ ಗ್ರಾಮದ ಮಾರುತಿ ದೇವರ ಕಾರ್ತಿಕೋತ್ಸವ ಮತ್ತು ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಇದೇ ಶನಿವಾರ ಡಿ.14 ರಿಂದ ರವಿವಾರ ಡಿ.15 ರವರೆಗೆ ಸಡಗರದಿಂದ ನಡೆದು ಸಂಪನ್ನಗೊಂಡಿತು.

ಸುಣಧೋಳಿ ಜಡಿಸಿದ್ಧೇಶ್ವರ ಮಠದ ಅಭಿನವ ಶಿವಾನಂದ ಮಹಾಸ್ವಾಮಿಜಿ ದಿವ್ಯ ಸಾನಿಧ್ಯದಲ್ಲಿ ಡಿ.14 ರಂದು ಬೆಳಿಗ್ಗೆ 6ಗಂಟೆಗೆ ಸ್ಥಳೀಯ ಮಾರುತಿ ದೇವರ ದೇವಾಲಯದಲ್ಲಿರುವ ಗದ್ದುಗೆಗೆ ಮಹಾಭಿಷೇಕ, ಮಹಾಪೂಜೆ, ಹೋಮ, ಎಲೆಪೂಜೆ, ಪಂಚಾಮೃತಾಭಿಷೇಕ, 10ಗಂಟೆಗೆ ಮಹಾಪ್ರಸಾದ ಜರುಗಿತು.

ಸ್ಥಳೀಯ ಹಾಗೂ ಸುತ್ತಲಿನ ಹಳ್ಳಿಗಳ ಭಜನಾ ಕಲಾವಿದರಿಂದ ಭಜನಾ ಕಾರ್ಯಕ್ರಮ,ಮಧ್ಯಾಹ್ನ 2ಗಂಟೆಗೆ ಪುರ ಜನರಿಂದ ಪೂಜೆ, ನೈವೇದ್ಯ ಸಮರ್ಪಣೆ, ಸಾಯಂಕಾಲ 5ಗಂಟೆಗೆ ಗ್ರಾಮದ ಸಕಲ ವಾದ್ಯ ಮತ್ತು ಜಾಂಜ್ ಮೇಳಗಳೊಂದಿಗೆ ಪಲ್ಲಕ್ಕಿ ಉತ್ಸವ, ಸಂಜೆ 5.30 ಗಂಟೆಗೆ ಗೋಸಬಾಳ ಗ್ರಾಪಂ ಸಿಬ್ಬಂದಿಯವರಿಂದ ಕಾರ್ತಿಕ ದೀಪೋತ್ಸವ, ರಾತ್ರಿ 10 ಗಂಟೆಗೆ ಜತ್ತ ತಾಲೂಕಿನ ಸಿಂಧೂರ ಶ್ರೀ ಸಿದ್ಧಾರೂಢ ನಾಟಕ ಸಂಘದವರಿಂದ ವೀರ ಸಿಂಧೂರ ಲಕ್ಷ್ಮಣ ಕ್ರಾಂತಿಕಾರಿ ನಾಟಕ ಪ್ರದರ್ಶನಗೊಂಡಿತು.

ಡಿ.15 ರಂದು ಬೆಳಿಗ್ಗೆ 6ಗಂಟೆಗೆ ಮಾರುತಿ ದೇವರ ಗದ್ದುಗೆಗೆ ಪಂಚಾಮೃತಾಭಿಷೇಕ, ಮಹಾಪೂಜೆ, ವಿವಿಧ ಧಾರ್ಮಿಕ ಕಾರ್ಯಕ್ರಮ, ಮುಂಜಾನೆ 10 ಗಂಟೆಗೆ ಸ್ಥಳೀಯ ಯುವಕರ ವತಿಯಿಂದ ಮಹಾಪ್ರಸಾದ, ಮಧ್ಯಾಹ್ನ 1 ಗಂಟೆಗೆ ಸ್ಥಳೀಯ ಹಾಗೂ ಸುತ್ತಲಿನ ವಿವಿಧ ಹಳ್ಳಿಗಳ ಕಲಾ ತಂಡದವರಿಂದ ಕರಡಿ ಮಜಲು, ಹಲಿಗೆ ವಾದನ, ಡೊಳ್ಳಿನ ಮಜಲು, ಬ್ಯಾಂಡ್ ತಂಡಗಳು ಸೇರಿದಂತೆ ವಿವಿಧ ಕಲಾ ತಂಡವರಿಂದ ಭಕ್ತಿಯ ಕಲಾ ಪ್ರದರ್ಶನ ಸೇವೆ, ಸಾಯಂಕಾಲ 5.30 ಗಂಟೆಗೆ ಪಲ್ಲಕ್ಕಿ ಉತ್ಸವ, ಕಾರ್ತಿಕೋತ್ಸವ, ಕಾಯಿ ಹಾರಿಸುವದು, ಸಿಹಿಹಂಚುವದು, ವಿವಿಧ ಕಾರ್ಯಕ್ರಮಗಳು ವಿಜೃಂಭನೆಯಿಂದ ನಡೆದ ಬಳಿಕ ಪ್ರಸಕ್ತ ವರ್ಷದ ಕಾರ್ತಿಕೋತ್ಸವ ಸಮಾರೋಪಗೊಂಡಿತು.

ಸ್ಥಳೀಯ ಹಾಗೂ ಸುತ್ತಲಿನ ಹತ್ತೂರಿನ ಗಣ್ಯರು, ರಾಜಕೀಯ ಮುಖಂಡರು, ವಿವಿಧ ಸಂಘ, ಸಂಸ್ಥೆಗಳ ಪದಾಧಿಕಾರಿಗಳು, ಸದಸ್ಯರು, ಸ್ಥಳೀಯ ಮಾರುತಿ ದೇವರ ಕಾರ್ತಿಕೋತ್ಸವ ಆಚರಣಾ ಸಮಿತಿ ಪದಾಧಿಕಾರಿಗಳು, ಸದಸ್ಯರು, ಯುವಕರು, ಮಾರುತಿ ದೇವರ ಅಸಂಖ್ಯಾತ ಭಕ್ತರು ಕಾರ್ತಿಕೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

# ಬಡ ಕಾರ್ಮಿಕನ ಮೇಲೆ ಮಾಲೀಕರ ಹಿಂಸೆ : ಆತ್ಮಹತ್ಯೆಗೆ ನೊಂದ ಜೀವ ಯತ್ನ




ಬೈಲಹೊಂಗಲ : ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಪಟ್ಟಣದ ಕೇಂದ್ರ ಬಸ್ ನಿಲ್ದಾಣ ಮುಂಭಾಗ ಸಂಗಮ್ ಹೊಟೇಲ್‌ನಲ್ಲಿ ಕೆಲಸ ನಿರ್ವಹಿಸುತ್ತಿದ್ದ ಕಾರ್ಮಿಕನಿಗೆ ಕಳೆದ 3 ತಿಂಗಳಿನಿಂದ ಸಂಬಳ ನೀಡದೆ, ವೀಪರೀತ ಹಲ್ಲೆ ಮಾಡಿದ್ದರಿಂದ ಆತನು ಮನನೊಂದು ಸುಮಾರು 30 ಅಡಿ ಎತ್ತರದ ಬೃಹದಾಕಾರದ ಜಾಹೀರಾತು ಫಲಕದ ಕಂಬವೇರಿ ಕುತ್ತಿಗೆಗೆ ಟಾವೆಲ್ ಬೀಗಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದ ಘಟನೆ ಸೋಮವಾರ ಬೆಳಗ್ಗೆ ಜರುಗಿದೆ.

ಪಟ್ಟಣದ ಹೊಟೇಲ್‌ನಲ್ಲಿ ಕೆಲಸ ಮಾಡುತ್ತಿದ್ದ ಮಂಜುನಾಥ (48) ಆತ್ಮಹತ್ಯೆಗೆ ಯತ್ನಿಸಿದ್ದವ ಎಂದು ಗೊತ್ತಾಗಿದೆ. ಜಾಹೀರಾತು ಫಲಕವೇರಿ ಟವಲ್‌ನಿಂದ ಕುತ್ತಿಗೆಗೆ ಬೀಗಿದುಕೊಂಡು ಆತ್ಮಹತ್ಯೆ ಮಾಡುಕೊಳ್ಳುತ್ತಿರುವಾಗ ಹತ್ತಿರವಿದ್ದ ಅಟೋ ಚಾಲಕ ದಾದಾಫೀರ ಸಂಗೊಳ್ಳಿ ಇವರು ಸುಮಾರು 30 ಅಡಿ ಅತೀ ಎತ್ತರದ ಜಾಹೀರಾತು ಫಲಕದ ಕಂಬ ಏರಿ ಕಾರ್ಮಿಕನನ್ನು ರಕ್ಷಿಸುವಲ್ಲಿ ಯಶಸ್ವಿಯಾಗಿದ್ದಾರೆ. ಅಟೋ ಚಾಲಕನ ಕಾರ್ಯಕ್ಕೆ ಸಾರ್ವಜನಿಕ ವಲಯದಲ್ಲಿ ಬಾರಿ ಮೆಚ್ಚುಗೆ ವ್ಯಕ್ತವಾಗಿದೆ.

ಈ ಹೊಟೇಲ್‌ನಲ್ಲಿ ಕಳೆದ 6 ತಿಂಗಳಿನಿಂದ ಕೆಲಸ ನಿರ್ವಹಿಸುತ್ತಿದ್ದ ಮಂಜುನಾಥನಿಗೆ ಮಾಲಿಕರು ಹಲವಾರು ಬಾರಿ ಹಲ್ಲೆ ಮಾಡಿಸಿದ್ದಾನೆ ಎನ್ನಲಾಗಿದೆ. ಇದರಿಂದ ಮೈಯಲ್ಲಿ ರಕ್ತ ಹೆಪ್ಪುಗಟ್ಟಿರುವ ಕುರಿತು ಸಾರ್ವಜನಿಕರ ಮುಂದೆ ಗಾಯದ ಕಲೆಗಳನ್ನು ಆತನು ತೋರಿಸಿ ತನ್ನ ಅಳಲು ತೋಡಿಕೊಂಡನು. ಸ್ಥಳದಲ್ಲಿ ಸೇರಿದ್ದ ಜನರು ಕಾರ್ಮಿಕನನ್ನು ಸಂರಕ್ಷಿಸಿದ ದೃಶ್ಯವನ್ನು ತಮ್ಮ ಮೊಬೈಲ್ ಕ್ಯಾಮೆರಾಗಳಲ್ಲಿ ಸೆರೆ ಹಿಡಿದು ವಿವಿಧ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟರು.

ಬಡ ಕಾರ್ಮಿಕರನ್ನು ಶೋಷಣೆಗೆ ಒಳಪಡಿಸುತ್ತಿರುವ ಹೊಟೇಲ್ ಮಾಲಿಕನ ವಿರುದ್ಧ ಸಾರ್ವಜನಿಕ ವಲಯದಲ್ಲಿ ತೀವ್ರ ಅಕ್ರೋಶ ವ್ಯಕ್ತವಾಗಿದೆ. ಕಾರ್ಮಿಕನ ಜೀವ ಕಾಪಾಡಿದ ಅಟೋ ಚಾಲಕನ ಮೇಲೆಯೂ ಕೂಡಾ ಹೊಟೇಲ್ ಮಾಲಿಕ ಹಲ್ಲೇ ಮಾಡಲು ತತ್ನಿಸಿದ್ದಾನೆ. ಎಂದು ಅಟೋ ಚಾಲಕರು ದೂರಿದರು. ಈ ರೀತಿ ಹಲವಾರು ಮುಗ್ಧ ಬಡ ಕಾರ್ಮಿಕರ ಮೇಲೆ ಪದೇ ಪದೇ ಮಾಲಿಕರು ಹಲ್ಲೇ ಮಾಡಿ, ಬೆದರಿಕೆ ಹಾಕಿ ಸರಿಯಾಗಿ ವೇತನ ನೀಡದೇ ಅಟ್ಟಹಾಸ ಮೆರೆಯುತ್ತಿದ್ದಾರೆಂದು ತಿಳಿದು ಬಂದಿದೆ. ಹೊಟೇಲ್ ಮಾಲಿಕನ ಮೇಲೆ ಕಾರ್ಮಿಕ ಇಲಾಖೆಯ ಹಾಗೂ ಸಂಬಂಧಿಸಿದ ಇನ್ನೀತರ ಇಲಾಖೆಯ ಅಧಿಕಾರಿಗಳು ಕೂಡಲೇ ಸೂಕ್ತ ಕ್ರಮ ಕೈಕೊಳ್ಳುವಂತೆ ನೊಂದ ಕಾರ್ಮಿಕರು, ಸಾರ್ವಜನಿಕರು, ಗ್ರಾಹಕರು, ವಿವಿಧ ಸಂಘಟನೆಗಳ ಮುಖಂಡರು ಒತ್ತಾಯಿಸಿದ್ದಾರೆ.

# ಮೂವರು ಜೋಡಿ ದಂಪತಿಗಳನ್ನು ಒಂದು ಗೂಡಿಸಿದ ಬೈಲಹೊಂಗಲ ನ್ಯಾಯಾಲಯ



ಬೈಲಹೊಂಗಲ: ಹಲವಾರು ವರ್ಷಗಳಿಂದ ಪ್ರತ್ಯೇಕವಾಗಿದ್ದು, ವಿಚ್ಛೇದನ ಪ್ರಕರಣ ಎದುರಿಸುತ್ತಿದ್ದ ಮೂವರು ಜೋಡಿ ದಂಪತಿಗಳನ್ನು ಒಂದು ಗೂಡಿಸುವ ಮೂಲಕ ಬೈಲಹೊಂಗಲ ನ್ಯಾಯಾಲಯ ಗಮನ ಸೆಳೆದಿದೆ.

ಕಳೆದ ಎರಡ್ಮೂರು ವರ್ಷಗಳಿಂದ ಹಣಕಾಸಿನ ಸಮಸ್ಯೆ, ತಪ್ಪು ತಿಳಿವಳಿಕೆ ಮೂಲಕ ಬೇರ್ಪಟ್ಟ ಜೋಡಿಗಳಿಗೆ ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶ ರವಿ ಚವ್ಹಾನ ಜೀವನದಲ್ಲಿ ಹೊಂದಿಕೊಂಡು ನಡೆದರೆ ಮಾತ್ರ ಈ ಬದುಕು ಸಾರ್ಥಕವಾಗಲಿದೆ. ಅನಾವಶ್ಯಕವಾಗಿ ಸಣ್ಣ, ಸಣ್ಣ ಸಮಸ್ಯೆಗಳನ್ನು ಪ್ರತಿಷ್ಠೆಗೆ ಒಡ್ಡಿದರೆ, ಯವ್ವನದ ಬದುಕು ಹಾಳಾಗಲಿದೆ. ಕಳೆದು ಹೊದ ಸಮಯ ಮತ್ತೆ ಬರುವುದಿಲ್ಲ. ಇದನ್ನರಿತು ಬಾಳಬೇಕೆಂದು ಲೋಕ ಅದಾಲತನಲ್ಲಿ ಸಲಹೆ ನೀಡಿದ್ದನ್ನು ಒಪ್ಪಿ ತಮ್ಮ, ತಮ್ಮ ಬಾಳ ಸಂಗಾತಿಗಳೊಂದಿಗೆ ಬಾಳು ನಡೆಸಲು ಸಮ್ಮತಿಸಿದರು. ನ್ಯಾಯಾಲಯದಲ್ಲಿಯೇ ಪರಸ್ಪರ ಹಾರ ಬದಲಾಯಿಸಿಕೊಂಡು, ಸಿಹಿ ಹಂಚಿಕೊಳ್ಳುವ ಮೂಲಕ ಜೋಡಿಗಳು ಒಂದಾಗಿ, ಸಂತಸ ಪಟ್ಟ ಕ್ಷಣ ಸಾಕ್ಷಿಯಾಯಿತು.

ವಕೀಲರಾದ ಡಿ.ಎಸ್. ಬೊಂಗಾಳೆ, ಆನಂದ ತುರಮರಿ, ಆಯ್.ಎಂ. ಹುಣಶಿಕಟ್ಟಿ, ಜಯಶ್ರೀ ಬೂದಿಹಾಳ ಜೋಡಿಗಳ ಪರ ವಕಾಲತು ವಹಿಸಿದ್ದರು. ಡಿ.ವಾಯ್. ಗರಗದ, ಪುಜಾ ದುಮಾಲೆ ಸಂಧಾನಕಾರರಾಗಿ ಕಾರ್ಯ ನಿರ್ವಹಿಸಿದರು. ನ್ಯಾಯಾಧೀಶರಾದ ರವಿ ಚವ್ಹಾನ, ಬಸವರಾಜ ನಾಯ್ಕ್ ಅವರ ಮಾರ್ಗದರ್ಶನದಲ್ಲಿ 931 ಬಾಕಿ ಎಕ್ಸಿಡೆಂಟ್, ಆಸ್ತಿವಿವಾದ, ಚೆಕ್ ಬೌನ್ಸ್, ಬ್ಯಾಂಕ್ ವಸೂಲಾತಿ ಸೇರಿ ಅನೇಕ ಪ್ರಕರಣಗಳು ಇತ್ಯರ್ಥಗೊಂಡವು. ಸುಮಾರು 2 ಕೋಟಿ 56 ಲಕ್ಷ ರೂ. ಲೋಕ ಅದಾಲತನಲ್ಲಿ ಸೆಟ್ಲಮೆಂಟಗೊಂಡಿತು.

ಶಿರಸ್ತೆದಾರ ಸಿ.ಎಸ್. ಮಠಪತಿ, ಜ್ಯೋತಿ ಕುಲಕರ್ಣಿ, ನ್ಯಾಯವಾದಿಗಳ ಸಂಘದ ಅಧ್ಯಕ್ಷ ಎಂ.ಆರ್. ಮೆಳವಂಕಿ, ಎ.ಎಫ್. ಪಟ್ಟಿಹಾಳ, ಸುಜಾತಾ ಚಿಕ್ಕಮಠ, ಎಸ್.ಎಸ್. ಮಠದ, ಎಸ್. ವಾಯ್. ಪಾಟೀಲ, ಬಸವರಾಜ ದೋತರದ, ಎಸ್.ವಿ. ಸಿದ್ದಮನಿ, ಆಯ್.ಡಿ. ವಂಟಿ, ಕೆ.ಎಸ್. ಕುಲಕರ್ಣಿ, ಡಿ.ಎಸ್. ದೊಡಮನಿ, ಆಯ. ಎಸ್. ಪಾಟೀಲ, ತಾಲೂಕಾ ಕಾನೂನು ಸೇವಾ ಸಮೀತಿ ಸಂಚಾಲಕ ಉಮೇಶ ಕಾರಜೋಳ ಹಾಗೂ ನ್ಯಾಯವಾದಿಗಳು, ಕಕ್ಷಿದಾರರು ಇದ್ದರು.

BELAGINA SURYODHYA KANNADA DAILY MORNING Editor, Printer, PUblisher and Owned By GURURAJ IRAPPA KADAM Plot No.2743 NEAR KEB POWER HOUSE RAMTEERTH NAGAR, SHIVAJI NAGAR BELAGAVI-590016
DIST-BELAGAVI,STATE KARNATAKA PRINTED At M/S LAXMI PRINTERS, No. 627,Auto Nagar,Belagavi,Dist- Belagavi Karnataka, RNI No. KARKAN/2019/77640, Volume : 06, Issue : 264, Postal Reg No. PMG/KA/NK/BM/135/22-24 / POST AT Vantamury Colony Post Office